ಪ್ರಚಾರ ಪುಸ್ತಕ ಮಾಲೆ

138

ಶ್ರೀರಾಮಕೃಷ್ಣ

ಸೋಮನಾಥಾನಂದ

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೧೩೮

ಶ್ರೀರಾಮಕೃಷ್ಣ

ಸೋಮನಾಥಾನಂದ

೧೯೮೭

ಮೊದಲನೆಯ ಮುದ್ರಣ : ೧೯೬೫
ಎರಡನೆಯ ಮುದ್ರಣ : ೧೯೭೧
ಮೂರನೆಯ ಮುದ್ರಣ : ೧೯೮೬
೧೦,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೬

ಮುದ್ರಕರು
ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ, ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾ ನಿಲಯದ ವಿದ್ಯೆ, ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ, ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ, ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸ ಗಳು ವಿಶ್ವವಿದ್ಯಾನಿಲಯದ ಮೆಟ್ಟಿಲನ್ನು ಹತ್ತಲು ಅವಕಾಶವಿಲ್ಲ ದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ. ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣ ವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಿಗೆಗಳನ್ನು ಕೊಂಡು, ಓದಿ, ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರ ಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನು ಕುರಿತ ನೂರಮೂವತ್ತೇಳು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಸ್ವಾಮಿ ಶ್ರೀ ಸೋಮನಾಥಾನಂದ ಅವರ 'ಶ್ರೀರಾಮಕೃಷ್ಣ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು
೨೧-೭-೧೯೬೫

ಕೆ. ಎಲ್. ಶ್ರೀಮಾಲಿ
ವೈಸ್-ಛಾನ್ಸಲರ್

ವಿಷಯಸೂಚಿಕೆ

೧. ಬಾಲ್ಯ

ಬಂಗಾಳದೇಶದಲ್ಲಿ ಹೂಗ್ಲಿ ಜಿಲ್ಲೆಗೆ ಸೇರಿದ ದೇರೆಪುರ ಎಂಬ ಗ್ರಾಮವಿದೆ. ಅಲ್ಲಿ ಹದಿನೆಂಟನೇ ಶತಮಾನದ ಮಧ್ಯಭಾಗದಲ್ಲಿ ಮಾಣಿಕ್ಯರಾಮ ಚಟ್ಟೋಪಾಧ್ಯಾಯ ಎಂಬ ಬ್ರಾಹ್ಮಣ ಕುಟುಂಬವಿತ್ತು. ಆತನಿಗೆ ಕ್ಷುದಿರಾಮ ಚಟ್ಟೋಪಾಧ್ಯಾಯ ನೆಂಬ ಹಿರಿಯ ಮಗ ಜನಿಸಿದನು. ಇವರೇ ಸ್ಮೃತಪ್ರಖ್ಯಾತರಾದ ಶ್ರೀರಾಮಕೃಷ್ಣರ ತಂದೆ. ಕ್ಷುದಿರಾಮರಿಗೆ ರಾಮಶೀಲ ಎಂಬ ಒಬ್ಬ ತಂಗಿಯೂ ನಿಧಿರಾಮ್ ಮತ್ತು ರಾಮಕನಯ್ ಎಂಬ ಇಬ್ಬರು ತಮ್ಮಂದಿರೂ ಕಾಲಕ್ರಮದಲ್ಲಿ ಜನಿಸಿದರು. ಕ್ಷುದಿರಾಮರಿಗೆ ಚಂದ್ರಮಣಿ ಎಂಬುವರೊಡನೆ ವಿವಾಹವಾದ ಮೇಲೆ ಅವರ ತಂದೆ ತೀರಿಕೊಂಡರು. ಅವರಿಗೆ ಸುಮಾರು ಐವತ್ತು ಎಕರೆಗಳಷ್ಟು ಫಲವತ್ತಾದ ಜಮೀನು ಇತ್ತು. ಅವರು ಸುಖವಾಗಿ ಜೀವಿಸುತ್ತಿದ್ದರು.

ಅದೇ ಊರಿನಲ್ಲಿ ರಮಾನಂದರಾಯ್ ಎಂಬ ಶ್ರೀಮಂತ ಜಮೀನುದಾರನಿದ್ದನು. ಆತ ತನಗೆ ಆಗದವರ ಮೇಲೆ ಒಂದು ದಾವೆಯನ್ನು ಕೋರ್ಟಿನಲ್ಲಿ ಹಾಕಿ ಕ್ಷುದಿರಾಮರನ್ನು ಸುಳ್ಳು ಸಾಕ್ಷಿ ಹೇಳುವಂತೆ ಕರೆದನು. ಇತ್ತ ಕ್ಷುದಿರಾಮರು ಒಂದು ಕತ್ತರಿಯಲ್ಲಿ ಸಿಕ್ಕಿಕೊಂಡಂತೆ ಆಯಿತು. ಸುಳ್ಳು ಸಾಕ್ಷಿ ಹೇಳುವುದಕ್ಕೆ ಅವರ ಮನಸ್ಸು ಒಪ್ಪದು. ಹೇಳದೇ ಇದ್ದರೆ ಆ ಶ್ರೀಮಂತ ಜಮೀನುದಾರ ಯಾವುದಾದರೂ ಅನ್ಯಾಯವಾದ ಕೇಸನ್ನು ಇವರ ಮೇಲೆ ಹಾಕಿ ತನ್ನ ಸೇಡನ್ನು ತೀರಿಸಿಕೊಳ್ಳುವುದರಲ್ಲಿ ಸಂದೇಹವಿರಲಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಗೆ ಸಿಲುಕಿದಾಗ ಅವರು ಸತ್ಯದ ಹಾದಿಯನ್ನೇ ಹಿಡಿದರು. ಈ

ಹಾದಿ ಯಾವಾಗಲೂ ಕಂಟಕಮಯ. ಟಾರ್‌ರೋಡ್ ಸಿಮೆಂಟ್ ರೋಡಿನಂತಹವುಗಳಲ್ಲ ಇದು. ಸತ್ಯದ ಹಾದಿಯಲ್ಲಿ ಹೆಜ್ಜೆ ಹೆಜ್ಜೆಗೆ ಕಷ್ಟ ಅನುಭವಿಸಬೇಕು, ಯಾತನೆ ಅನುಭವಿಸ ಬೇಕು. ಆದರೆ ಹೃದಯದ ಶಾಂತಿಗೆ ಭಂಗವಿಲ್ಲ. ಜೀವನದಲ್ಲಿ ಎಲ್ಲೋ ಕೆಲವರು ಈ ಹಾದಿಯಲ್ಲಿ ನಡೆಯುವುದಕ್ಕಾಗಿ ಹುಟ್ಟಿರುವರು. ಇಂತಹ ಅಲ್ಪ ಪಕ್ಷಕ್ಕೆ ಸೇರಿದವರು ಕ್ಷುದಿ ರಾಮರು. ಸುಳ್ಳುಸಾಕ್ಷ್ಯ ಕೊಡಲು ಹೋಗಲಿಲ್ಲ. ಅವರು ನಿರೀಕ್ಷಿಸಿದಂತೆಯೇ ರಮಾನಂದರಾಯ ಇವರ ಮೇಲೆ ಒಂದು ಕೇಸನ್ನು ತಂದನು. ಇದರಿಂದ ಕ್ಷುದಿರಾಮರು ತಮ್ಮ ಮನೆ, ಜಮೀನು ಎಲ್ಲವನ್ನೂ ಕಳೆದುಕೊಂಡು ದಿವಾಳಿಯಾದರು. ತಂದೆಯ ಕಾಲದಿಂದ ಶ್ರೀಮಂತರಾಗಿ ಬಾಳಿದ್ದ ಹಳ್ಳಿಯಲ್ಲಿ ಜನರಸೇವ ಕೂಳಿಗೆ ಕೈಯೊಡ್ಡಿ ಕಾಲಯಾಪನೆ ಮಾಡುವ ಪ್ರಸಂಗ ಒದಗಿತು. ಕ್ಷುದಿರಾಮರು ತಮ್ಮ ಹಿರಿಯ ಮಗ ರಾಮಕುಮಾರ ಮತ್ತು ಒಬ್ಬಳು ಮಗಳನ್ನು ಕರೆದುಕೊಂಡು ಕಾಮಾರಪುಕುರಕ್ಕೆ ಬಂದರು. ಇವರ ತಮ್ಮಂದಿರು ತಮ್ಮ ಮಾವನವರ ಮನೆಗೆ ಹೊರಟರು.

ಕ್ಷುದಿರಾಮರಿಗೆ ಕಾಮಾರಪ್ರುಕುರದ ಜಮೀನುದಾರನಾದ ಶುಕುಲ್ ಗೋಸ್ವಾಮಿ ಎಂಬುವರ ಪರಿಚಯವಿತ್ತು. ಆತ ಕ್ಷುದಿರಾಮರ ಸ್ಥಿತಿಗೆ ಮನಕರಗಿ ಅವರಿಗೆ ವಾಸ ಮಾಡುವುದಕ್ಕೆ ಒಂದು ಮನೆಯನ್ನು ಕೊಟ್ಟು ಲಕ್ಷ್ಮೀಜಲ ಎಂಬ ಒಂದು ಸಣ್ಣ ಗದ್ದೆಯನ್ನು ಕೊಟ್ಟನು. ಅದು ಸಣ್ಣದಾದರೂ ಫಲವತ್ತಾಗಿದ್ದುದ ರಿಂದ ಒಂದು ಸಣ್ಣ ಸಂಸಾರಕ್ಕೆ ಬೇಕಾಗುವ ಆಹಾರವನ್ನು ಒದಗಿಸುತ್ತಿತ್ತು. ಒಂದು ಸಲ ಕ್ಷುದಿರಾಮರು ಹತ್ತಿರದ ಹಳ್ಳಿಗೆ ನೋ ಕೆಲಸದ ಮೇಲೆ ಹೋಗಿ ಹಿಂತಿರುಗುತ್ತಿದ್ದಾಗ ದಾರಿ

ಯಲ್ಲಿ ದಣಿದು ಒಂದು ಮರದ ಕೆಳಗೆ ವಿಶ್ರಾಂತಿಗಾಗಿ ಕುಳಿತರು. ಹಾಗೆಯೆ ನಿದ್ರೆಯಲ್ಲಿ ತೂಕಡಿಸುತ್ತಿದ್ದಾಗ ಅವರಿಗೆ ಒಂದು ಕನಸಾಯಿತಂತೆ. ಆ ಕನಸಿನಲ್ಲಿ ಅವರ ಇಷ್ಟದೇವರಾದ ಶ್ರೀರಾಮ ಕಾಣಿಸಿಕೊಂಡು ತನಗೆ ಯಾವ ಪೂಜೆಯೂ ಇಲ್ಲದೆ ಒಂದು ಮರದ ಕೆಳಗೆ ಬಿದ್ದಿರುವೆನೆಂದೂ ತನ್ನನ್ನು ಮನೆಗೆ ಕರೆದುಕೊಂಡು ಹೋಗಬೇಕೆಂದು ಕೇಳಿಕೊಂಡಂತೆ ಆಯಿತಂತೆ. ತಕ್ಷಣವೇ ನಿದ್ರೆಯಿಂದ ಎಚ್ಚೆತ್ತು ಸ್ವಲ್ಪ ದೂರದಲ್ಲಿ ಶ್ರೀರಾಮನ ಸಾಲಗ್ರಾಮವನ್ನು ಒಂದು ನಾಗರ ಹಾವು ಸುತ್ತಿಕೊಂಡು ಹೆಡೆಯೆತ್ತಿರುವುದನ್ನು ಕಂಡರು. ಇವರು ಅದರ ಬಳಿಗೆ ಹೋದಾಗ ಆ ಹಾವು ಸರಿದುಹೋಯಿತು. ಆನಂದದಿಂದ ಆ ಸಾಲಗ್ರಾಮ ವನ್ನು ಮನೆಗೆ ತಂದು ಅದನ್ನು ಪೂಜಿಸತೊಡಗಿದರು.

ಕ್ಷುದಿರಾಮರದು ಮೊದಲಿನಿಂದಲೇ ಆಧ್ಯಾತ್ಮಿಕ ಪರವಾದ ಜೀವನ. ತಮ್ಮ ಮನೆ ಆಸ್ತಿ ಮುಂತಾದುವುಗಳನ್ನೆಲ್ಲ ಕಳೆದು ಕೊಂಡು ಕಾಮಾರಪುಕುರಕ್ಕೆ ಬಂದ ಮೇಲೆ ಅವರ ಮನಸ್ಸು ಜಗದ ಐಶ್ವರ್ಯದ ನಶ್ವರತೆಯನ್ನು ಚೆನ್ನಾಗಿ ಮನಗಂಡಿತು. ಹೆಚ್ಚು ಕಾಲವನ್ನು ಪೂಜೆ, ಜಪ, ಅಧ್ಯಯನಾದಿಗಳಲ್ಲಿ ಕಳೆಯುತ್ತಿದ್ದರು. ಆ ಊರಿನವರು ಇವರ ಜೀವನದಿಂದ ಆಕರ್ಷಿತರಾದರು. ಎಲ್ಲರಿಗೂ ಇವರನ್ನು ಕಂಡರೆ ಗೌರವ. ಇವರು ದಾರಿಯಲ್ಲಿ ಹೋಗುತ್ತಿದ್ದರೆ, ಮನೆಯ ಮುಂದೆ ಕುಳಿತು ಮಾತನಾಡುತ್ತಿದ್ದವರು ಎದ್ದು ಗೌರವ ತೋರುತ್ತಿದ್ದರು. ಇವರು ಕೊಳಕ್ಕೆ ಸ್ನಾನ ಮಾಡಲು ಹೋದರೆ ಇವರು ನೀರಿ ನಲ್ಲಿರುವ ತನಕ ಯಾರೂ ಅಲ್ಲಿಗೆ ಇಳಿಯುತ್ತಿರಲಿಲ್ಲ. ನೆರೆಹೊರೆ ಯವರಿಗೆಲ್ಲ ಕಷ್ಟ ದುಗುಡಗಳಲ್ಲಿ ಬೇಕಾದ ಒಂದು ಜೀವಿ ಯಾಗಿದ್ದರು ಕ್ಷುದಿರಾಮರು. ಇವರಲ್ಲಿ ಐಶ್ವರ್ಯವಿರಲಿಲ್ಲ.

ಆದರೆ ವಿದ್ವಾಂಸರು, ಸಾತ್ತ್ವಿಕ ಜೀವಿ, ವಿನಯಸಂಪನ್ನರು, ಭಗವದ್ಭಕ್ತರು ಎಂದು ಜನ ಇವರನ್ನು ಗೌರವಿಸುತ್ತಿದ್ದರು.

ಕ್ಷುದಿರಾಮರ ಕೈಹಿಡಿದ ಅವರ ಸತಿಯಾದ ಚಂದ್ರಮಣಿ ದೇವಿಯು ಎಲ್ಲಾ ವಿಧದಿಂದಲೂ ಪತಿಗೆ ತಕ್ಕ ಸತಿಯಾಗಿದ್ದರು. ಇವರ ಮನೆಗೆ ಯಾವ ಭಿಕ್ಷುಕರು ಬರಲಿ ಅವರು ಬರಿಯ ಕೈಯಲ್ಲಿ ಹಿಂತಿರುಗುತ್ತಿರಲಿಲ್ಲ. ಸಾಧುಸಂತರಿಗಂತೂ ಊಟ ಉಪಚಾರವನ್ನು ಮಾಡಿಸದೆ ಕಳುಹಿಸುತ್ತಿರಲಿಲ್ಲ. ಹಳ್ಳಿಯ ಮಕ್ಕಳಿಗಂತೂ ಚಂದ್ರಮಣಿದೇವಿಯಲ್ಲಿ ಅಷ್ಟು ಸಲಿಗೆ. ಊರಿನ ಹೆಂಗಸರಿಗೆಲ್ಲ ಕಷ್ಟಕಾಲದಲ್ಲಿ ಬೇಕಾಗುವ ಒಬ್ಬ ತಾಯಿಯಾಗಿ ಅಕ್ಕನಾಗಿದ್ದರು. ಮನೆ ಬಡಕುಟೀರವಾದರೂ ಶಾಂತಿ, ದಯೆ, ಪರೋಪಕಾರ, ಸಹಾನುಭೂತಿಯಿಂದ ತಾಂಡವ ವಾಡುತ್ತಿತ್ತು.

ಕ್ಷುದಿರಾಮರ ಹಿರಿಯ ಮಗನಿಗೆ ಪ್ರಾಪ್ತ ವಯಸ್ಸಾಯಿತು. ಆತ ವ್ಯಾಕರಣ, ಸಾಹಿತ್ಯ, ಸ್ಮೃತಿ ಮುಂತಾದುವುಗಳಲ್ಲಿ ಪಂಡಿತ ನಾದನು. ಅವನಿಗೆ ಮದುವೆಯನ್ನು ಮಾಡಿದರು. ಆತನು ಮನೆಯ ಜವಾಬ್ದಾರಿಯನ್ನೆಲ್ಲಾ ವಹಿಸಿಕೊಳ್ಳತೊಡಗಿದನು. ಅದೇ ಸಮಯದಲ್ಲಿ ಕ್ಷುದಿರಾಮರಿಗೆ ಕಷ್ಟಕಾಲದಲ್ಲಿ ಸಹಾಯ ಮಾಡಿದ ಶುಕುಲ್‌ಗೋಸ್ವಾಮಿ ತೀರಿಕೊಂಡರು. ಆ ಸಮಯ ದಲ್ಲಿ ಕಾಲುನಡಿಗೆಯಲ್ಲಿ ೧೮೨೪ರಲ್ಲಿ ರಾಮೇಶ್ವರಕ್ಕೆ ಯಾತ್ರೆ ಹೊರಟುಬಂದರು. ಅನಂತರ ಇವರಿಗೆ ಆದ ಮಗುವಿಗೆ ರಾಮೇಶ್ವರ ಎಂದು ಹೆಸರನ್ನು ಕೊಟ್ಟರು.

ಕ್ಷುದಿರಾಮರು ೧೮೩೫ರಲ್ಲಿ ಗಯೆಗೆ ಯಾತ್ರೆ ಹೊರಟರು. ಅಲ್ಲಿ ಪಿತೃಗಳಿಗೆ ಪಿಂಡವನ್ನು ಕೊಟ್ಟಾದ ಮೇಲೆ ಮಲಗಿದ್ದಾಗ ಅವರಿಗೊಂದು ಕನಸಾಯಿತು. ಆ ಕನಸು ಹೀಗಿತ್ತು : ದೇವ

ಸ್ಥಾನದಲ್ಲಿ ವಿಷ್ಣು ಪಾದದ ಹತ್ತಿರ ಇವರು ಪಿತೃಗಳಿಗೆ ಪಿಂಡವನ್ನು ಕೊಡುತ್ತಿರುವುದು. ಆ ಪಿತೃಗಳು ಇವರ ಪಿಂಡವನ್ನು ಸ್ವೀಕರಿಸಿ ಇವರನ್ನು ಹರಸುತ್ತಿರುವಂತೆ ಕಂಡರು. ಆಗ ಇವರು ಪಿತೃಗಳ ಪಾದವನ್ನು ಮುಟ್ಟಿ ನಮಸ್ಕಾರ ಮಾಡಿದರು. ಮರುಕ್ಷಣದಲ್ಲಿ ಒಂದು ತೇಜಃಪುಂಜ ಮೂರ್ತಿ ಅಲ್ಲಿ ಆವಿರ್ಭವಿಸಿತು. ಇವರ ಪಿತೃಗಳು ಎರಡು ಸಾಲಿನಲ್ಲಿಯೂ ನಿಂತು ಸಿಂಹಾಸನಾರೂಢ ನಾದ ದಿವ್ಯಮೂರ್ತಿಯನ್ನು ಆರಾಧಿಸುತ್ತಿದ್ದರು. ಆ ದಿವ್ಯ ಮೂರ್ತಿ ಕ್ಷುದಿರಾಮರನ್ನು ನೋಡಿ ವಿಶ್ವಾಸದಿಂದ ತನ್ನ ಬಳಿಗೆ ಕರೆಯಿತು. ಕ್ಷುದಿರಾಮರು ಆನಂದದಿಂದ ಭಕ್ತಿಪರವಶರಾಗಿ ಅದರ ಹತ್ತಿರ ಹೋಗಿ ನಮಸ್ಕಾರ ಮಾಡಿ ಸ್ತೋತ್ರಗಳನ್ನು ಹೇಳುತ್ತಿದ್ದರು. ಆಗ ಅದು "ಕ್ಷುದಿರಾಮ, ನಿನ್ನ ಅದ್ಭುತ ಭಕ್ತಿಯಿಂದ ನಾನು ಸುಪ್ರೀತನಾದೆ. ನಾನು ನಿನ್ನನ್ನು ಆಶೀ ರ್ವದಿಸುವೆನು. ನಿನ್ನ ಮನೆಯಲ್ಲಿ ಮಗುವಾಗಿ ಹುಟ್ಟಿ ನಿನ್ನ ಪ್ರೇಮ ವಿಶ್ವಾಸಗಳನ್ನು ಸವಿಯುವೆನು" ಎಂದಿತು. ಅದಕ್ಕೆ ಕ್ಷುದಿರಾಮರು ದೈನ್ಯದಿಂದ ಇಂತಹ "ದೊಡ್ಡಭಾಗ್ಯಕ್ಕೆ ನಾನು ಯೋಗ್ಯನಲ್ಲ. ನಿನ್ನ ದರ್ಶನಲಾಭವೇ ನನಗೆ ಸೌಭಾಗ್ಯವಾಗಿದೆ. ನೀನು ನನ್ನ ಮಗನಾದರೆ ನಾನು ನಿನ್ನನ್ನು ಉಪಚರಿಸುವುದು ಹೇಗೆ" ಎಂದರು. ಆ ಮೂರ್ತಿ ಇದಕ್ಕೆ "ಕ್ಷುದಿರಾಮ, ನೀನು ಅಂಜಬೇಕಾಗಿಲ್ಲ. ನೀನು ಕೊಟ್ಟುದನ್ನು ನಾನು ಪ್ರೀತಿಸುವೆನು. ನನ್ನ ಇಚ್ಛೆ ಈಡೇರಲಿ" ಎಂದಿತು. ಕ್ಷುದಿರಾಮರು ಆ ಮಾತನ್ನು ಕೇಳಿ ಪರವಶರಾಗಿ ಪ್ರಜ್ಞಾಹೀನ ರಾದರು. ಸ್ವಲ್ಪ ಕಾಲದ ಮೇಲೆ ಸ್ವಪ್ನಭಂಗವಾಯಿತು.

ಇದೇ ಕಾಲದಲ್ಲಿ ಇತ್ತ ಕಾಮಾರಪುಕುರದಲ್ಲಿ ಚಂದ್ರಮಣಿ ದೇವಿಗೂ ಕೆಲವು ಅಲೌಕಿಕ ದರ್ಶನಗಳಾದವು. ಅಂದಿನ ರಾತ್ರಿ

ಇವರ ಮನೆಯಲ್ಲಿ ಒಂದು ತೇಜಃಪುಂಜ ಮೂರ್ತಿಯನ್ನು ಇವರು ಕಂಡಂತಾಯಿತು. ಮಾರನೆ ದಿನ ಶಿವದೇವಾಲಯಕ್ಕೆ ಹೋದಾಗ ಗರ್ಭಗುಡಿಯೊಳಗಿನಿಂದ ಒಂದು ಜ್ಯೋತಿ ಬಂದು ಇವರನ್ನು ಪ್ರವೇಶಿಸಿದಂತೆ ಆಯಿತು. ಕ್ಷುದಿರಾಮರು ಮನೆಗೆ ಹಿಂತಿರುಗಿದ ಮೇಲೆ ತನ್ನ ಹೆಂಡತಿಗಾದ ಅನುಭವಗಳು ಮತ್ತು ಜೊತೆಗೆ ತಮಗೆ ಆದ ಅನುಭವಗಳು ಎರಡನ್ನೂ ಕುರಿತು ಯೋಚಿಸತೊಡಗಿದರು. ತಮ್ಮ ಹೆಂಡತಿ ಗರ್ಭವತಿಯಾಗಿದ್ದಳು.

೧೮೩೬ನೇ ಫೆಬ್ರುವರಿ ೧೭ನೇ ರಾತ್ರಿ ಚಂದ್ರಮಣಿದೇವಿ ಒಂದು ಗಂಡು ಶಿಶುವಿಗೆ ಜನ್ಮಕೊಟ್ಟಳು. ಆ ಊರಿನ ಅಕ್ಕ ಸಾಲಿಗ ಹೆಂಗಸಾದ ಧನಿಯೇ ಸೂಲಗಿತ್ತಿಯಾದಳು ಈ ಮಗು ವಿಗೆ. ಮನೆ ಸಣ್ಣ ಜೋಪಡಿ. ಅಲ್ಲಿ ಸೂತಿಕಾಗೃಹಕ್ಕೆ ಬೇರೆ ಸ್ಥಳವಿರಲಿಲ್ಲ. ಭತ್ತವನ್ನು ಕುಟ್ಟುವ ಯಾತ ಹಾಕಿದ್ದ ಸ್ಥಳವೇ ಸೂತಿಕಾಗೃಹವಾಯಿತು. ಇಲ್ಲಿಯೇ ಮಗು ಜನಿಸಿತು. ಗಯೆಯ ಜ್ಞಾಪಕಾರ್ಥವಾಗಿ ಗದಾಧರನೆಂದು ಹೆಸರನ್ನು ಇಟ್ಟರು. ಇವರ ಮನೆಯವರಿಗೆ ಶ್ರೀರಾಮ ಇಷ್ಟ ದೇವರಾಗಿದ್ದುದರಿಂದ ಎಲ್ಲರಿಗೂ ರಾಮ ಎಂಬ ಅಂಕಿತನಾಮವನ್ನು ಸೇರಿಸುತ್ತಿದ್ದರು. ಮೊದಲನೆಯ ಮಗನಿಗೆ ರಾಮಕುಮಾರ, ಎರಡನೆಯವನಿಗೆ ರಾಮೇಶ್ವರ ಎಂದು ಇದ್ದುದರಿಂದ ಗದಾಧರನಿಗೆ ರಾಮಕೃಷ್ಣ ಎಂತಲೂ ಕರೆಯುತೊಡಗಿದರು. ಅನಂತರ ಜೀವನದಲ್ಲಿ ಮಗು ವಿಗೆ ಈ ಹೆಸರೇ ನಿಂತು, ಈ ಹೆಸರಿನಿಂದಲೇ ಅವರು ಜಗತ್ ವಿಖ್ಯಾತರಾದರು.

ಕ್ಷುದಿರಾಮರಿಗೆ ಗಂಡು ಮಗುವಾಯಿತೆಂದು ಕೇಳಿ ಹತ್ತಿರ ಇದ್ದ ಮೇದಿನೀಪುರದಿಂದ ಇವರ ಸೋದರ ಅಳಿಯ ಮಗು ಮತ್ತು ತಾಯಿಗೆಂದು ಒಂದು ಕರೆಯುವ ಹಸುವನ್ನು ಕಳುಹಿ

ಸಿದನು. ಮಗು ಮನೆಯವರಿಗೆ ಮಾತ್ರವಲ್ಲ, ಹಳ್ಳಿಯವರಿಗೆಲ್ಲ ಬೇಕಾದ ಮಗುವಾಗಿ ಬೆಳೆಯುತ್ತ ಹೋಯಿತು. ಒಂದು ಸಲ ನೋಡಿದರೆ ಮತ್ತೊಮ್ಮೆ ನೋಡಬೇಕು ಎಂಬ ಹಂಬಲ ನೋಡಿದವರಲ್ಲಿ ಹುಟ್ಟುತ್ತಿತ್ತು.

ಮಗುವಿಗೆ ಐದು ತಿಂಗಳು ತುಂಬಿದಾಗ ಅನ್ನಪ್ರಾಶನ ಮಾಡಬೇಕೆಂದು ನಿಶ್ಚಯಿಸಿದರು. ಆ ಊರಿನ ಧನಿಕನಾದ ಧರ್ಮದಾಸ್‌ಲಾಹ ಎಂಬುವರು ಆ ಸಮಾರಂಭವನ್ನು ವಿಜೃಂಭಣೆಯಿಂದ ಮಾಡಿ ನೆಂಟರಿಷ್ಟರಿಗೆ ಮತ್ತು ಬಡಬಗ್ಗರಿಗೆ ಅನ್ನದಾನವನ್ನು ಮಾಡಬೇಕೆಂದೂ. ಅದಕ್ಕೆ ಬೇಕಾಗುವ ಖರ್ಚನ್ನೆಲ್ಲಾ ತಾನೇ ಒದಗಿಸುತ್ತೇನೆ ಎಂದೂ ಹೇಳಿದನು. ಅದರಂತೆಯೇ ಹಲವು ಅತಿಥಿಗಳನ್ನು ಕರೆದರು. ಅವರೆಲ್ಲ ಬಂದು ಉತ್ಸವದಲ್ಲಿ ಭಾಗಿಯಾಗಿ ಮಗುವನ್ನು ಹರಸಿ ಹೋದರು. ೧೮೪೦ರಲ್ಲಿ ಕ್ಷುದಿರಾಮರಿಗೆ ಒಂದು ಕೊನೆಯ ಹೆಣ್ಣು ಮಗು ಜನಿಸಿತು. ಅದಕ್ಕೆ ಸರ್ವಮಂಗಳಾ ಎಂದು ನಾಮಕರಣ ಮಾಡಿದರು.

ಆ ಊರಿನಲ್ಲಿ ಆ ಕಾಲದಲ್ಲಿ ಇನ್ನೂ ಸಾರ್ವಜನಿಕಶಾಲೆ ಇರಲಿಲ್ಲ. ಆ ಊರಿನ ಧನಿಕನಾದ ಲಾಹಾ ಮನೆತನದವರು ತಮ್ಮ ಮನೆಯ ಮಕ್ಕಳಿಗೆಂದು ಪಾಠ ಹೇಳಲು ಒಬ್ಬ ಉಪಾಧ್ಯಾಯರನ್ನು ನೇಮಕ ಮಾಡಿದ್ದರು. ಊರಿನ ಕೆಲವು ಮನೆಯವರು ತಮ್ಮ ಮಕ್ಕಳನ್ನು ಅಲ್ಲಿಗೆ ಕಳುಹಿಸಿದರು. ಕ್ಷುದಿರಾಮನ ಮನೆಯವರು ಶ್ರೀರಾಮಕೃಷ್ಣರನ್ನು ಅಲ್ಲಿಗೆ ಕಳುಹಿಸಿದರು. ಅವರು ಓರಗೆಯ ಹುಡುಗರೊಡನೆ ಬೆರೆತು ಪಾಠಗಳನ್ನು ಕಲಿಯತೊಡಗಿದರು. ಬರೆಯುವುದು ಓದುವುದು ಇವುಗಳನ್ನು ಸರಾಗವಾಗಿ ಕಲಿತರು. ಆದರೆ ಗಣಿತ ಅಷ್ಟೇ ಸರಾಗವಾಗಿ ಅವರ ತಲೆಗೆ ಹತ್ತಲಿಲ್ಲ. ಈ ಲಾಭ ನಷ್ಟದ

ಲೆಕ್ಕಾಚಾರ ಹುಡುಗರಾದಾಗಿನಿಂದ ಅವರಿಗೆ ಹಿಡಿಸದು. ಪಾಠ ಒಂದೇ ಅಲ್ಲ. ಶ್ರೀರಾಮಕೃಷ್ಣರು ಆ ಕಾಲದಲ್ಲಿ ಇನ್ನೂ ಹಲವು ವಿಷಯಗಳನ್ನು ಕಲಿತರು. ಆ ಊರಿಗೆ ಬಯಲಾಟ ಆಡುವವರು ಬಂದು ಶ್ರೀಕೃಷ್ಣ ಮತ್ತು ಚೈತನ್ಯರ ಜೀವನ ಗಳನ್ನು ಆಡಿ ತೋರಿಸುತ್ತಿದ್ದರು. ಶ್ರೀರಾಮಕೃಷ್ಣರು ಅವರು ಹೇಳುತ್ತಿದ್ದ ಹಾಡುಗಳು ಮತ್ತು ಅವರ ನಟನೆ ಎಲ್ಲವನ್ನು ಒಮ್ಮೆ ನೋಡಿ ತಕ್ಷಣವೇ ಅದನ್ನೆಲ್ಲ ಅನುಕರಿಸುವುದನ್ನು ಕಲಿತರು. ಮಣ್ಣಿನಲ್ಲಿ ಸುಂದರವಾದ ದೇವದೇವಿಯರ ವಿಗ್ರಹ ಗಳನ್ನು ಮಾಡುವುದನ್ನು ಕಲಿತರು. ತಾವು ನೋಡಿದ ದೃಶ್ಯ ಗಳನ್ನು ಚಿತ್ರಿಸುವ ಕಲೆಯನ್ನು ಕೂಡ ಕಲಿತರು.

ಶ್ರೀರಾಮಕೃಷ್ಣರಲ್ಲಿ ಹುಡುಗತನದಿಂದಲೂ ಒಂದು ಸ್ವಭಾವ ವನ್ನು ನೋಡುತ್ತೇವೆ. ಅದೇ, ಯಾರಾದರೂ ಸಾಕಷ್ಟು ಕಾರಣ ವನ್ನು ಕೊಡದೆ ಸುಮ್ಮನೇ ಒಂದು ಕೆಲಸವನ್ನು ಮಾಡಬೇಡ ಎಂದು ಅಂಜಿಸಿದರೆ ಅದಕ್ಕೆ ಮಣಿಯುವವರಲ್ಲ. ಉಪಾಯ ದಿಂದ ಹೃದಯಕ್ಕೆ ತಾಕುವಂತೆ ಹೇಳಿದರೆ ಮಾತ್ರ ಕೇಳು ತ್ತಿದ್ದರು. ಆ ಊರಿನ ಜನರು ಹಲಧಾರಪುಕುರ ಎಂಬ ದೊಡ್ಡ ಸರೋವರಕ್ಕೆ ಸ್ನಾನಕ್ಕೆ ಮತ್ತು ಬಟ್ಟೆ ಒಗೆಯುವುದಕ್ಕೆ ಹೋಗು ತ್ತಿದ್ದರು. ಅಲ್ಲಿ ಪುರುಷರಿಗೆ ಒಂದು ಸ್ಥಳ ಮತ್ತು ಸ್ತ್ರೀಯರಿಗೆ ಒಂದು ಸ್ಥಳವನ್ನು ಮಾಡಿದ್ದರು. ಶ್ರೀರಾಮಕೃಷ್ಣರು ತಮ್ಮ ತಾಯಿ ಜೊತೆಗೆ ಹೋಗುತ್ತಿದ್ದುದರಿಂದ ಸ್ತ್ರೀಯರು ಹೋಗುವ ಕಡೆ ಹೋಗುತ್ತಿದ್ದರು. ಒಂದು ದಿನ ಶ್ರೀರಾಮಕೃಷ್ಣರ ವಾರಗೆಯ ಹುಡುಗರೆಲ್ಲ ಅಲ್ಲಿ ನೀರಿನಲ್ಲಿ ಈಜುತ್ತಿದ್ದುದರಿಂದ ಹೆಂಗಸರು ಅಲ್ಲಿ ಅಂದು ಬರಲು ಆಗಲಿಲ್ಲ. ಆಗ ಸ್ತ್ರೀಯರು, ಹುಡುಗರು ಹೆಂಗಸರು ಸ್ನಾನ ಮಾಡುವ ಕಡೆ ಬಂದರೆ ಅವರಿಗೆ

ಕೆಟ್ಟದ್ದಾಗುವುದೆಂದು ಹೆದರಿಸಿದರು. ಇದರಿಂದ ಹುಡುಗರೆಲ್ಲಾ ಪರಾರಿ ಆದರು. ಆದರೆ ಶ್ರೀರಾಮಕೃಷ್ಣರು ಮಾತ್ರ ಅದು ಎಂತಹ ಕೆಟ್ಟದಾಗುವುದೊ ನೋಡೋಣ ಎಂದು ಅವರು ಸ್ನಾನ ಮಾಡುತ್ತಿದ್ದುದನ್ನು ಮರದ ಹಿಂದಿನಿಂದ ನಿಂತು ನೋಡುತ್ತಿದ್ದರು. ಅನಂತರ ಹಿಂದೆ ಬೆದರಿಸಿದ ಹೆಂಗಸಿಗೆ, ತಾನು ಸ್ತ್ರೀಯರು ಸ್ನಾನ ಮಾಡುವುದನ್ನು ನೋಡಿದರೂ ತನಗೆ ಏನೂ ಅನಿಷ್ಟವಾಗಲಿಲ್ಲವಲ್ಲ ಎಂದರು. ಆಕೆ ಶ್ರೀರಾಮಕೃಷ್ಣರ ತಾಯಿಗೆ ಈ ಸಂಗತಿಯನ್ನು ಹೇಳಿದಳು. ಚಂದ್ರಮಣಿದೇವಿ ಮಗನಿಗೆ, ಹಾಗೆ ನೋಡುವುದರಿಂದ ಹೆಂಗಸರಿಗೆ ಅವಮಾನ ಮಾಡಿದಂತೆ ಆಗುವುದೆಂದು, ಅವರೆಲ್ಲ ತನ್ನ ಸಮಾನವಾಗಿರುವುದರಿಂದ ಅವರ ಲಜ್ಜೆಗೆ ಭಂಗ ತರುವುದು ಯೋಗ್ಯವಲ್ಲ ಎಂದು ಹೇಳಿದ ಮೇಲೆ ಶ್ರೀರಾಮಕೃಷ್ಣರು ಅಲ್ಲಿಗೆ ಹೋಗುವುದನ್ನು ಬಿಟ್ಟರು.

ಆಗ ಶ್ರೀರಾಮಕೃಷ್ಣರಿಗೆ ಏಳೆಂಟು ವಯಸ್ಸಿರಬಹುದು. ಆದರೂ ಕೆಚ್ಚೆದೆಯ ಧೈರ್ಯ. ಹಳ್ಳಿಯ ಸಮೀಪದಲ್ಲಿದ್ದ ಸ್ಮಶಾನಕ್ಕೆ ಒಬ್ಬರೇ ಕೆಲವು ವೇಳೆ ಹೋಗಿಬರುತ್ತಿದ್ದರು. ಇವರ ಸೋದರತ್ತೆಯ ಮೇಲೆ ಶೀತಳಾದೇವಿ ಬರುವುದೆಂದು ಹೇಳುತ್ತಿದ್ದರು. ಹಾಗೆ ಬಂದಾಗ ಶ್ರೀರಾಮಕೃಷ್ಣರು ಅತ್ತೆಯ ಹತ್ತಿರವೇ ಇದ್ದು, ಅವರನ್ನು ಚೆನ್ನಾಗಿ ಪರೀಕ್ಷೆ ಮಾಡಿ, ತನ್ನ ಮೇಲೂ ಶೀತಳಾದೇವಿ ಬಂದರೆ ಎಷ್ಟು ಚೆನ್ನಾಗಿರಬಹುದು ಎಂದು ಆಶಿಸುತ್ತಿದ್ದರು.

ಮೊದಲಿನಿಂದಲೂ ಶ್ರೀರಾಮಕೃಷ್ಣರಿಗೆ ಪ್ರಕೃತಿಯ ರಮ್ಯ ದೃಶ್ಯಗಳ ಮೇಲೆ ಪ್ರೀತಿ. ಅವರ ಮೇಲೆ ಇವು ಅಮೋಘವಾದ ಆಕರ್ಷಣೆಯನ್ನು ಬೀರಿದ್ದವು. ತಂಗಾಳಿಗೆ ತೊನೆಯುತ್ತಿರುವ

ಬತ್ತದ ಗದ್ದೆ, ಅವಿರಾಮವಾಗಿ ಹರಿಯುತ್ತಿರುವ ನದಿ, ಆಗಸದಲ್ಲಿ ವಿವಿಧ ಬಣ್ಣಗಳಿಂದ ರಂಜಿಸುತ್ತಿರುವ ಮುಗಿಲು, ಬಣ್ಣ ಬಣ್ಣದ ಹೂವುಗಳು, ವಿವಿಧ ಧ್ವನಿ ಮತ್ತು ಪುಕ್ಕಗಳಿಂದ ಶೋಭಿಸು ತ್ತಿರುವ ಹಕ್ಕಿ ಮುಂತಾದುವುಗಳೆಲ್ಲ ಅವರಿಗೆ ತಮ್ಮ ಮನಸ್ಸನ್ನು ಸಚ್ಚಿದಾನಂದದೆಡೆಗೆ ಒಯ್ಯುವ ಸಂಕೇತಗಳಂತೆ ಇದ್ದವು. ಒಂದು ದಿನ ಮೈದಾನದಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತಿದ್ದರು. ಆಗ ಮೇಲೆ ಮೇಘಗಳ ವಕ್ಷದಲ್ಲಿ ಬಲಾಕಪಕ್ಷಿಗಳ ಸಾಲು ತಮ್ಮ ಬಿಳಿಯ ರೆಕ್ಕೆಗಳನ್ನು ಹರಡಿಕೊಂಡು ಸುಂದರವಾಗಿ ಸ್ವೇಚ್ಛೆ ಯಾಗಿ ಹಾರುತ್ತಿರುವುದನ್ನು ನೋಡಿ ತನ್ಮಯರಾದರು. ತಮ್ಮ ಶರೀರ ಮತ್ತು ಬಾಹ್ಯಜಗತ್ತಿನ ಸಕಲ ವಸ್ತುಗಳನ್ನು ಮರೆತು ಪ್ರಜ್ಞಾಶೂನ್ಯರಾಗಿ ಮೈದಾನದಲ್ಲಿ ಬಿದ್ದುಬಿಟ್ಟರು. ಮನೆಗೆ ಕರೆದುಕೊಂಡು ಹೋಗಿ ಕೆಲವು ಕಾಲದ ಮೇಲೆಯೇ ಅವರಿಗೆ ಪ್ರಜ್ಞೆ ಬಂದುದು. ಆ ಸಮಯದಲ್ಲಿ ತಾವೊಂದು ಅವರ್ಣನೀಯ ಆನಂದದ ಸ್ಥಿತಿಯಲ್ಲಿದ್ದೆನೆಂದು ಹೇಳಿದರು.

ಕ್ಷುದಿರಾಮರ ಸೋದರ ಅಳಿಯನಾದ ರಾಮಚಂದ್ರನು ಪ್ರತಿವರುಷವೂ ಸೇಲಾಂ ಎಂಬ ಊರಿನಲ್ಲಿ ದಸರ ಸಮಯದಲ್ಲಿ ದುರ್ಗಾಪೂಜೆ ಮಾಡುತ್ತಿದ್ದನು. ಪ್ರತಿ ವರುಷವೂ ಸಂಸಾರ ಸಮೇತ ಕ್ಷುದಿರಾಮರು ಅದಕ್ಕೆ ಹೋಗುತ್ತಿದ್ದರು. ಈ ಸಲವೂ ಸರದಿಯಂತೆ ತಮ್ಮ ಹಿರಿಯ ಮಗ ರಾಮಕುಮಾರ ನೊಡನೆ ಹೊರಟರು. ಕ್ಷುದಿರಾಮರಿಗೆ ಆಗ ಅರವತ್ತೆಂಟು ವಯಸ್ಸು. ದುರ್ಗಾಪೂಜೆ ಸಮಯದಲ್ಲಿ ಅಲ್ಲಿ ಖಾಯಿಲೆ ಬಿದ್ದರು. ಪೂಜೆಯೆಲ್ಲಾ ಆದಮೇಲೆ ವಿಗ್ರಹವನ್ನು ವಿಸರ್ಜಿಸಿ ಬಂದ ಮೇಲೆ ಇವರೂ ಶ್ರೀರಘುವೀರನ ಹೆಸರನ್ನು ಹೇಳುತ್ತ ಪ್ರಾಣವನ್ನು ಬಿಟ್ಟರು.

ಕ್ಷುದಿರಾಮರ ಮರಣವಾರ್ತೆ ಸಿಡಿಲಿನಂತೆ ಬಡಿಯಿತು ಚಂದ್ರಮಣಿದೇವಿಗೆ. ಆದರೆ ಸಹಿಸಿಕೊಂಡಳು. ತನ್ನ ಮಗ ಶ್ರೀರಾಮಕೃಷ್ಣರಿಗಾಗಿ ಅವರು ಪ್ರಪಂಚದಲ್ಲಿರಬೇಕಾಯಿತು. ಶ್ರೀರಾಮಕೃಷ್ಣರಿಗೂ ತಮ್ಮ ತಂದೆಯ ವಿಯೋಗ ಪ್ರಪಂಚದ ನಶ್ವರತೆಯನ್ನು ಮನಮುಟ್ಟುವಂತೆ ಮಾಡಿತು. ಹಿಂದಿನಂತೆ ತಾಯಿಯನ್ನು ಅದು ಕೊಡು ಇದು ಕೊಡು ಎಂದು ಕಾಡುತ್ತಿರಲಿಲ್ಲ. ತಾಯಿಯ ಹಲವು ಕೆಲಸಗಳಿಗೆ ಸಹಾಯ ಮಾಡುತ್ತಿದ್ದರು. ಮಗ ಹತ್ತಿರ ಇರುವಾಗ ತಾಯಿ ದುಃಖವನ್ನು ಮರೆಯುತ್ತಿದ್ದಳು.

ಕಾಮಾರಪುಕುರ ಕಲ್ಕತ್ತೆಯಿಂದ ಪೂರಿ ಕ್ಷೇತ್ರಕ್ಕೆ ನಡೆದು ಕೊಂಡು ಹೋಗುವ ಹಾದಿಯ ಮಧ್ಯದಲ್ಲಿತ್ತು. ಅನೇಕ ಸಾಧುಸಂತರು ಛತ್ರದಲ್ಲಿ ತಂಗಿ ಒಂದೆರಡು ದಿನ ಕಳೆದು ಮುಂದೆ ಹೋಗುತ್ತಿದ್ದರು. ಚಂದ್ರಮಣಿದೇವಿ ತಮ್ಮ ಮಗ ಶ್ರೀರಾಮ ಕೃಷ್ಣರೊಡನೆ ಸಾಧುಸಂತರಿಗೆ ಏನನ್ನಾದರೂ ಕಳುಹಿಸುತ್ತಿದ್ದಳು. ಆ ಸಾಧುಗಳು ಹೇಳುತ್ತಿದ್ದ ಧಾರ್ಮಿಕ ವಿಷಯಗಳನ್ನೆಲ್ಲಾ ಶ್ರೀರಾಮಕೃಷ್ಣರು ಮನಸ್ಸಿಟ್ಟು ಕೇಳುತ್ತಿದ್ದರು. ಒಮ್ಮೆ ಸಾಧುಗಳಂತೆ ಇವರು ಮೈಗೆ ಬೂದಿ ಬಳಿದುಕೊಂಡು ಕೌಪೀನ ಧರಿಸಿ ಮನೆಗೆ ಬಂದು ತಾಯಿಗೆ "ಅಮ್ಮ, ನಾನು ಸನ್ಯಾಸಿ ಯಾಗಿಬಿಟ್ಟೆ" ಎಂದು ಹೇಳುತ್ತಿದ್ದರು. ಇದನ್ನು ನೋಡಿದಾಗ ಚಂದ್ರಮಣಿ ಹೌಹಾರಿದಳು. ತನ್ನ ಏಕಮಾತ್ರ ಆಸರೆ ಶ್ರೀರಾಮಕೃಷ್ಣ ; ಅವನೆಲ್ಲಿ ಸನ್ಯಾಸಿಯಾಗಿ ಮನೆಬಿಟ್ಟು ಹೊರಟು ಹೋಗುವನೊ ಎಂದು ಅಂಜುತ್ತಿದ್ದರು. ಮಾರನೇ ದಿನದಿಂದ ಹುಡುಗನಿಗೆ ಸಾಧುಸಂತರ ಬಳಿಗೆ ಹೋಗಬೇಡವೆಂದು ಹೇಳಿದರು. ಸಾಧುಗಳೇ ಬಂದು ತಾಯಿಗೆ ಸಮಾಧಾನ ಹೇಳಿದ ಮೇಲೆ ತಮ್ಮ ಮಗನನ್ನು ಅಲ್ಲಿಗೆ ಪುನಃ ಕಳುಹಿಸಲು ಒಪ್ಪಿದರು.

ಶ್ರೀರಾಮಕೃಷ್ಣರಿಗೆ ಎಂಟು ವಯಸ್ಸಾದಾಗ ಕಾಮಾರ ಪುಕುರದಿಂದ ಕೆಲವು ಸ್ತ್ರೀಯರು ಮೂರು ನಾಲ್ಕು ಮೈಲಿ ದೂರದಲ್ಲಿರುವ ವಿಶಾಲಾಕ್ಷಿ ಎಂಬ ದೇವಿಯ ದೇವಸ್ಥಾನಕ್ಕೆ ಹೊರಟರು. ಜೊತೆಯಲ್ಲಿ ಶ್ರೀರಾಮಕೃಷ್ಣರನ್ನು ಕರೆದು ಕೊಂಡು ಹೋದರು. ದಾರಿಯಲ್ಲಿ ದೇವಿಗೆ ಸಂಬಂಧಪಟ್ಟ ಹಾಡನ್ನು ಬಹಳ ಭಕ್ತಿಯಿಂದ ಹೇಳಿಕೊಂಡು ಹೋಗುತ್ತಿದ್ದರು. ಈ ಭಕ್ತಿಯ ಹಾಡುಗಳನ್ನು ಕೇಳಿದಾಗ ಶ್ರೀರಾಮಕೃಷ್ಣರ ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಹರಿಯತೊಡಗಿತು. ಹಿಂದೆ ರಮ್ಯ ಪ್ರಕೃತಿದೃಶ್ಯವನ್ನು ನೋಡಿದಾಗ ಹೇಗೆ ಮೈಮರೆತರೋ ಹಾಗೆಯೇ ಭಕ್ತಿಯ ಗಾನವನ್ನು ಕೇಳಿದಾಗ ಮೈಮರೆತು ನೆಲದ ಮೇಲೆ ಬಿದ್ದುಬಿಟ್ಟರು. ಬಳಿ ಇದ್ದವರು ಶೈತ್ಯೋಪಚಾರ ಮಾಡಿದರು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ವಿಶಾಲಾಕ್ಷಿಯ ಹೆಸರನ್ನು ಉಚ್ಚರಿಸಲು ಮೊದಲುಮಾಡಿದರು. ಅದನ್ನು ಕೇಳಿದಾಗ ಶ್ರೀರಾಮಕೃಷ್ಣರು ಕಣ್ಣು ತೆರೆದರು. ಅನಂತರ ಎಲ್ಲರೊಡನೆ ದೇವಸ್ಥಾನಕ್ಕೆ ನಡೆದುಕೊಂಡು ಹೋಗಿ ಮನೆಗೆ ಹಿಂತಿರುಗಿದರು.

ಇದೇ ಸಮಯದಲ್ಲಿ ಆ ಊರಿನ ಧರ್ಮದಾಸ್ ಲಾಹ ಅವರ ಮನೆಯಲ್ಲಿ ಒಂದು ಪಂಡಿತರ ಗೋಷ್ಠಿ ನೆರೆಯಿತು. ಎಲ್ಲರೂ ಒಂದು ಜಟಿಲವಾದ ಸಮಸ್ಯೆಯನ್ನು ಚರ್ಚಿಸುತ್ತಿದ್ದರು. ಯಾವ ನಿರ್ಣಯಕ್ಕೂ ಬರಲಿಲ್ಲ. ಆಗ ಹತ್ತಿರ ಇದ್ದ ಶ್ರೀರಾಮ ಕೃಷ್ಣರು ಅದು ಹೀಗೆ ಇರಬಹುದೆ ಎಂದು ವಿವರಿಸತೊಡಗಿದರು. ಇದು ಎಲ್ಲರಿಗೂ ಸಮಾಧಾನವನ್ನು ಕೊಟ್ಟಿತು. ಪಾಂಡಿತ್ಯದ ಧೂಳಿನಲ್ಲಿ ಮರೆಯಾಗಿರುವುದು ಮಗುವಿನ ಸರಳ ಭಕ್ತಿಯ ಕಣ್ಣಿಗೆ ವೇದ್ಯವಾಯಿತು.

ಅದೇ ವರುಷ ಶಿವರಾತ್ರಿಯ ದಿನ ಬಂದಿತು. ಶ್ರೀರಾಮಕೃಷ್ಣರು ಉಪವಾಸವಿದ್ದು ರಾತ್ರಿಯೆಲ್ಲ ಶಿವನ ಚಿಂತನೆಯಲ್ಲಿ ಜಾಗರಣೆ ಮಾಡುವುದಕ್ಕೆ ಅಣಿಯಾಗುತ್ತಿದ್ದರು. ಊರಿನವರು ಜನರ ಜಾಗರಣೆಗೆಂದು ಶಿವನಿಗೆ ಸಂಬಂಧಪಟ್ಟ ಒಂದು ನಾಟಕವನ್ನು ಆಡುವುದಕ್ಕೆ ಅಣಿಯಾಗುತ್ತಿದ್ದರು. ಇನ್ನೇನು ನಾಟಕ ಆರಂಭವಾಗುವ ಹೊತ್ತಿಗೆ ಶಿವನ ಪಾತ್ರವನ್ನು ಧರಿಸುವವನೇ ಬಂದಿರಲಿಲ್ಲ. ಅನಂತರ ವಿಚಾರಿಸಲಾಗಿ ಆತನಿಗೆ ಅನಾರೋಗ್ಯವಾಗಿರುವುದರಿಂದ ಪಾತ್ರ ಮಾಡಲು ಆಗುವುದಿಲ್ಲ ಎಂದು ತಿಳಿಯಬಂದಿತು. ಆಗ ಹಲವರು ಶ್ರೀರಾಮಕೃಷ್ಣರೊಬ್ಬರೇ ಈ ಪಾತ್ರಕ್ಕೆ ಯೋಗ್ಯರೆಂದು ಅವರನ್ನು ಬಂದು ಕೇಳಿಕೊಂಡರು. ಶ್ರೀರಾಮಕೃಷ್ಣರು ತಾವು ಪೂಜೆ ಮತ್ತು ಪಾರಾಯಣೆಗೆ ಅಣಿಯಾಗುತ್ತಿರುವುದಾಗಿ ಹೇಳಿದರು. ಬಂದವರು ಶಿವನ ಪಾತ್ರವನ್ನು ಧರಿಸಿದರೂ ಯಾವಾಗಲೂ ಅವನನ್ನೇ ಚಿಂತಿಸುತ್ತಿರಬೇಕಾಗುವುದೆಂದು, ಅನೇಕರು ನಾಟಕ ನೋಡುವುದಕ್ಕೆ ನೆರೆದಿರುವರೆಂದು, ಅವರೆಲ್ಲ ನಿರಾಶರಾಗುವರೆಂದು ಕೇಳಿಕೊಂಡಾಗ ಶ್ರೀರಾಮಕೃಷ್ಣರು ಶಿವನ ಪಾತ್ರದಲ್ಲಿ ರಂಗಭೂಮಿಯ ಮೇಲೆ ನಿಂತರು. ಮೈಗೆ ಬೂದಿ ಬಳಿದುಕೊಂಡು ದಂಡಕಮಂಡಲಧಾರಿಯಾಗಿ ರುದ್ರಾಕ್ಷಿಸರವನ್ನು ಕೊರಳಿಗೆ ಧರಿಸಿಕೊಂಡು ಶಿವನನ್ನು ಚಿಂತಿಸತೊಡಗಿದರು. ಶಿವನ ಭಾವದಲ್ಲೇ ತನ್ಮಯರಾಗಿಹೋದರು. ಕಣ್ಣಿನಿಂದ ಭಕ್ತಿಕಂಬನಿ ಧಾರಾಕಾರವಾಗಿ ಸುರಿಯತೊಡಗಿತು. ಬಾಹ್ಯಪ್ರಪಂಚವನ್ನೆಲ್ಲ ಮರೆತರು. ಪ್ರೇಕ್ಷಕರು ಒಬ್ಬ ಶಿವಪಾತ್ರಧಾರಿಯನ್ನು ನೋಡಬೇಕೆಂದು ಬಯಸಿದ್ದರು. ಅವರ ಅದೃಷ್ಟ ಆ ಪಾತ್ರದ ಪಾತ್ರೆಯೊಳಗೆ ಶಿವನೇ ಸಾಕ್ಷಾತ್ತಾಗಿ ಇಳಿದುಬಂದಿದ್ದ. ನಾಟಕ

ಅಲ್ಲಿಗೇ ಕೊನೆಗೊಳ್ಳಬೇಕಾಯಿತು. ಅವರಿಂದ ಯಾವ ಅಭಿನಯವೂ ಸಾಧ್ಯವಾಗಲಿಲ್ಲ. ಆ ಭಾವಸ್ಥಿತಿಯಲ್ಲೇ ಅವರನ್ನು ಮನೆಗೆ ಕರೆದುಕೊಂಡು ಹೋದರು.

ಶ್ರೀರಾಮಕೃಷ್ಣರಿಗೆ ಒಂಭತ್ತು ವಯಸ್ಸಾಯಿತು. ಆ ವರುಷ ಅವರಿಗೆ ಉಪನಯನ ಮಾಡಬೇಕೆಂದು ಅಣ್ಣ ರಾಮಕುಮಾರ ನಿಶ್ಚಯಿಸಿದ್ದ. ಒಂದು ದಿನ ಶ್ರೀರಾಮಕೃಷ್ಣರಿಗೆ ಸೂಲಗಿತ್ತಿಯಾಗಿದ್ದ ಧನಿ ಎಂಬ ಕಮ್ಮಾರ ಹೆಂಗಸು ಶ್ರೀರಾಮಕೃಷ್ಣರನ್ನು ಪ್ರೀತಿಯಿಂದ ಕರೆದು, ಉಪನಯನದ ಸಮಯದಲ್ಲಿ ತನ್ನಿಂದ ಮೊದಲ ಭಿಕ್ಷೆ ಸ್ವೀಕರಿಸಬೇಕೆಂದು ಕೇಳಿಕೊಂಡಳು. ಶ್ರೀರಾಮಕೃಷ್ಣರು ಆ ಹೆಂಗಸಿನ ಪ್ರೀತಿಗೆ ಮನಸೋತರು. ಆಗಲಿ ಎಂದು ಒಪ್ಪಿದರು. ಧನಿ ಆ ಸಮಯಕ್ಕೆ ಏನಾದರೂ ಚೆನ್ನಾಗಿರುವುದನ್ನು ಕೊಡಬೇಕೆಂದು ತನಗೆ ಬಂದ ಪುಡಿಕಾಸನ್ನು ಕೂಡಿಡುತ್ತಿದ್ದಳು. ಉಪನಯನದ ದಿನ ಬಂತು. ಅಂದು ಶ್ರೀರಾಮಕೃಷ್ಣರು ಧನಿಯಿಂದ ಮಾತ್ರ ಪ್ರಥಮ ಭಿಕ್ಷೆ ಸ್ವೀಕರಿಸುತ್ತೇನೆ ಎಂದು ಹಟ ಹಿಡಿದರು. ಯಾರು ಅದಕ್ಕೆ ವಿರೋಧವಾಗಿ ಏನು ಹೇಳಿದರೂ ಕೇಳಲಿಲ್ಲ. ಎಲ್ಲರೂ ಮಗು ಶ್ರೀರಾಮಕೃಷ್ಣರಿಗೆ ಸೋಲಬೇಕಾಯಿತು. ಅವರಾದರೋ ಎಲ್ಲಾ ಪೂರ್ವಾಚಾರಗಳನ್ನು ತಿರಸ್ಕರಿಸಿ ಕೇವಲ ಪ್ರೇಮಕ್ಕೆ ಬಾಗಿ ಧನಿಯ ಕೈಯಿಂದ ಭಿಕ್ಷೆಯನ್ನು ಸ್ವೀಕರಿಸಿದರು. ಆ ಹಳ್ಳಿಯ ಕಮ್ಮಾರ ಹೆಂಗಸಾದರೊ ತಾನು ಕೃತಾರ್ಥಳಾದೆ ಎಂದು ಹಿಗ್ಗಿ ಹೋದಳು. ತಾನು ಧನ್ಯೆ ಎಂದು ಭಾವಿಸಿದಳು. ಮುಂದೆ ಶ್ರೀರಾಮಕೃಷ್ಣರನ್ನು ಮಹಾ ಭಗವದ್ಭಕ್ತರೆಂದೂ ಆಚಾರ್ಯಶ್ರೇಷ್ಠರೆಂದೂ ಅವತಾರವ್ಯಕ್ತಿ ಎಂದೂ ಪರಿಗಣಿಸಿ ಹಲವರು ಗೌರವಿಸಿದರು. ಆದರೆ ಅವರು ಇನ್ನೂ ಹುಡುಗರಾಗಿರುವಾಗಲೇ ಆ ಮೊಗ್ಗಿನಲ್ಲೆ

ಎಂತಹ ಸೌರಭ ಹುದುಗಿದೆಯೆಂದು ಮನಗಂಡು ಅವರನ್ನು ಗೌರವಿಸಿದುದು ಒಂದು ಅದ್ಭುತ. ಅದರಂತೆಯೇ ಆ ಊರಿನಲ್ಲಿ ಮತ್ತೊಂದು ವ್ಯಕ್ತಿ. ಶ್ರೀನಿವಾಸ ಶಂಖಾರಿ ಎಂಬ ಬಳೆಯನ್ನು ಮಾರುವವನಿದ್ದ. ಆತ ಶ್ರೀರಾಮಕೃಷ್ಣರ ಜೀವನದ ಮಹಾತ್ಮೆಯನ್ನು ಅವರು ಇನ್ನೂ ಒಂದು ಸಣ್ಣ ಮಗುವಾಗಿರುವಾಗಲೇ ಅರಿತುಕೊಂಡನು. ಆತ ಆ ಮಗುವನ್ನು ಒಂದು ತೋಟಿಗೆ ಕರೆದುಕೊಂಡು ಹೋಗಿ ನೆಲದ ಮೇಲೆ ಒಂದು ಆಸನವನ್ನು ಹಾಕಿ. ಶ್ರೀರಾಮಕೃಷ್ಣರನ್ನು ಕುಳ್ಳಿರಿಸಿ ಅವರ ಕೊರಳಿಗೆ ಮಾಲೆ ಹಾಕಿ, ನೈವೇದ್ಯವನ್ನು ಅವರ ಮುಂದೆ ಇಟ್ಟು ಕಂಬನಿ ದುಂಬಿ ಮಗುವಿನ ಮುಂದೆ ಹೀಗೆ ಬೇಡುತ್ತಾನೆ :

"ನಾನು ಮುದುಕನಾದೆ. ನನ್ನ ಅವಸಾನ ಸಮೀಪಿಸುತ್ತಿದೆ. ನೀನು ಜಗತ್ತಿನಲ್ಲಿ ಮಾಡುವ ಅದ್ಭುತ ವಿಷಯಗಳನ್ನು ನೋಡುವ ಭಾಗ್ಯ ನನಗಿಲ್ಲ. ನಿನ್ನ ಅಯೋಗ್ಯ ಸೇವಕನಾದ ನನ್ನ ಮೇಲೆ ನಿರಂತರ ಕೃಪಾಕಟಾಕ್ಷವನ್ನು ಬೀರು."

ಶ್ರೀರಾಮಕೃಷ್ಣರ ಮಹಿಮೆ ಮೊದಲು ಪಂಡಿತರ ಲಕ್ಷ್ಯಕ್ಕೆ ಬೀಳಲಿಲ್ಲ. ಬಿದ್ದರೂ ಅವರು ಅದನ್ನು ಚೌಕಾಶಿಮಾಡುತ್ತಿದ್ದರು. ಆದರೆ ಕಮ್ಮಾರ ಹೆಂಗಸು, ಬಳೆ ಮಾರುವ ಗಂಡಸು ಅದನ್ನು ಅರಿತರು. ಅವರ ಹೃದಯ ಸರಳವಾಗಿತ್ತು, ಭಕ್ತಿಯಿಂದ ತುಂಬಿತ್ತು. ಭಗವಂತನ ಪ್ರೇಮಾಂಜನವನ್ನು ಅವರು ಹಾಕಿಕೊಂಡಿದ್ದರು. ಬುದ್ಧಿಗೆ ನಿಲುಕದಿದ್ದುದನ್ನು ಆ ಅಂಜನ ತೋರುವುದು. ಶ್ರೀರಾಮಕೃಷ್ಣರ ಜೀವನವೇ ಇದಕ್ಕೆ ಸಾಕ್ಷಿ. ಆಧ್ಯಾತ್ಮಿಕ ಜೀವನದ ಅನರ್ಘ್ಯ ಅನುಭವದ ರತ್ನಗಳನ್ನು ಅವರು ಸೂರೆಗೊಂಡದ್ದು ಪ್ರೇಮಮಹಾಮಂತ್ರದಿಂದ.

ಉಪನಯನವಾದ ಮೇಲೆ ಸಂಧ್ಯಾವಂದನೆ, ಗಾಯತ್ರಿ ಜಪ,

ದೇವರ ಪೂಜೆ ಮುಂತಾದುವುಗಳನ್ನು ಶ್ರದ್ಧೆಯಿಂದ ಮಾಡ ತೊಡಗಿದರು. ರಾಮಕುಮಾರ ತನ್ನ ಕೊನೆಯ ತಂಗಿ ಸರ್ವ ಮಂಗಳೆಯ ವಿವಾಹವನ್ನು ಮಾಡಿದನು. ರಾಮಕುಮಾರನ ಹೆಂಡತಿಗೆ ಮೂವತ್ತೈದು ವರುಷಗಳಾಗಿದ್ದರೂ ಮಕ್ಕಳಾಗಿರ ಲಿಲ್ಲ. ಬಹುಶಃ ಅವಳು ಪುತ್ರವತಿಯಾಗುವುದಿಲ್ಲ ಎಂದು ಭಾವಿಸಿದರು. ಆದರೆ ಆಕೆ ತನ್ನ ಮೂವತ್ತೈದನೆ ವಯಸ್ಸಿನಲ್ಲಿ ಪ್ರಥಮ ಬಾರಿ ಗರ್ಭಿಣಿಯಾಗಿದ್ದಳು. ಮಗುವನ್ನು ಹೆತ್ತಳೋ ಇಲ್ಲವೊ ತಾಯಿಯೇ ಮರಣಕ್ಕೆ ತುತ್ತಾದಳು. ಒಂದು ಜನನ, ಆದರೊಡನೆ ಒಂದು ಮರಣ ನೆರಳಿನಂತೆ ಹಿಂಬಾಲಿಸಿತು. ರಾಮಕುಮಾರ ಆ ಹುಡುಗಿಯನ್ನು ಅವಳ ಐದನೆ ವರುಷದಲ್ಲಿ ಕೈ ಹಿಡಿದಿದ್ದ. ಮೂವತ್ತು ವರುಷಗಳು ಒಟ್ಟಿಗೆ ಬಾಳಿದ ಜೀವ ಮಂಗಮಾಯವಾಯಿತು. ಸಂಸಾರ ಬೇರೆ ದೊಡ್ಡದಾಗುತ್ತಿತ್ತು. ಹಳ್ಳಿಯಲ್ಲಿ ಬರುವ ವರಮಾನ ಸಾಕಾಗುತ್ತಿರಲಿಲ್ಲ. ದೊಡ್ಡ ಊರಿಗೆ ಹೋದರೆ ಜೀವನೋಪಾಯಕ್ಕೆ ಅನುಕೂಲವಾಗ ಬಹುದೆಂದು ಕಲ್ಕತ್ತೆಗೆ ಬಂದನು. ಅಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ತೆರೆದ. ಹಲವು ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳತೊಡಗಿದ. ಹಲವು ಗೃಹಸ್ಥರ ಮನೆಯ ಪೂಜೆಗಳನ್ನು ಮಾಡತೊಡಗಿದ. ಇದರಿಂದ ಅವನ ವರಮಾನ ಸ್ವಲ್ಪ ಕುದುರಿತು.

ಶ್ರೀರಾಮಕೃಷ್ಣರಿಗೆ ಹೆಚ್ಚು ಪಾಠಪ್ರವಚನಗಳನ್ನು ಓದು ವುದರ ಕಡೆ ಗಮನ ಹೋಗಲಿಲ್ಲ. ಕಲಿತಿದ್ದೆಲ್ಲ ಕೊನೆಗೆ ಮಾರಂ ವುದಕ್ಕೆ ಎಂಬುದನ್ನು ಚೆನ್ನಾಗಿ ಅರಿತರು. ಆದರಿಂದ ಜೀವನ ದಲ್ಲಿ ಶಾಶ್ವತವಾದುದಾವುದೂ ದೊರಕಲಾರದು. ಬಹುಕಾಲ ವನ್ನು ರಘುವೀರನ ಪೂಜೆ, ಭಜನೆ, ಪ್ರಾರ್ಥನೆಗಳಲ್ಲಿ

ಕಳೆಯುತ್ತಿದ್ದರು. ಉಳಿದ ಕಾಲವನ್ನು ತಾಯಿಗೆ ಪುರಾಣ ಪುಣ್ಯ ಕಥೆಗಳನ್ನು ಓದುವುದು, ಅದರಂತೆ ಅಭಿನಯಿಸುವುದು, ಭಕ್ತಿಯ ಹಾಡನ್ನು ಹಾಡುವುದು ಇದರಲ್ಲಿ ಕಳೆಯುತ್ತಿದ್ದರು.

ಕಾಮಾರಪುಕುರದಲ್ಲಿ ಸೀತಾನಾಥ ಪೈನಿ ಎಂಬ ಧರ್ಮಾತ್ಮನಾದ ಒಬ್ಬ ವರ್ತಕ ಇದ್ದ. ಆತನ ಮನೆಗೆ ಶ್ರೀರಾಮಕೃಷ್ಣರು ಹಲವು ವೇಳೆ ಹೋಗಿ ಕೀರ್ತನೆ ಪುರಾಣ ಮುಂತಾದುವುಗಳನ್ನು ಹೇಳುತ್ತಿದ್ದರು. ಆತನ ಮನೆಯ ಹೆಂಗಸರೆಲ್ಲ ಇದನ್ನು ಕೇಳಲು ಬರುತ್ತಿದ್ದರು. ಅವರೆಲ್ಲ ಶ್ರೀರಾಮಕೃಷ್ಣರನ್ನು ತಮ್ಮ ಮನೆಯವರಂತೆಯೇ ಕಾಣುತ್ತಿದ್ದರು. ಅವರ ಮನೆಗೆ ಸಮೀಪದಲ್ಲೆ ದುರ್ಗಾದಾಸ ಪೈನಿ ಎಂಬುವ ಮತ್ತೊಬ್ಬ ಧನಿಕ ಇದ್ದ. ಆತ ಶ್ರೀರಾಮಕೃಷ್ಣರ ಕೀರ್ತನೆ ಮುಂತಾದುವುಗಳನ್ನು ಕೇಳಲು ತನ್ನ ಮನೆಯ ಹೆಂಗಸರನ್ನು ಕಳುಹಿಸುತ್ತಿರಲಿಲ್ಲ. ಅದೊಂದೇ ಅಲ್ಲ, ತಮ್ಮ ಮನೆ ಹೆಂಗಸರನ್ನು ಪರಪುರುಷರಾರೂ ನೋಡಿಯೇ ಇಲ್ಲ ಮತ್ತು ನೋಡಲಾರರು ಎಂದು ಶ್ರೀರಾಮಕೃಷ್ಣರಿಗೆ ಹೇಳಿದ್ದ. ಅದಕ್ಕೆ ಶ್ರೀರಾಮಕೃಷ್ಣರು "ಗೋಷಾ ಒಂದೇ ಸಾಕೇ ಪಾತಿವ್ರತ್ಯಕ್ಕೆ, ಒಳ್ಳೆ ನೀತಿ ಮತ್ತು ದೇವರಲ್ಲಿ ಭಕ್ತಿ ಮಾತ್ರ ಅವರನ್ನು ರಕ್ಷಿಸಬಲ್ಲದು. ನಾನಿಚ್ಛೆಪಟ್ಟರೆ ನಿಮ್ಮ ಜನಾನ ಒಳಗೆ ಹೋಗಬಲ್ಲೆ" ಎಂದರು. ಆತ 'ನೋಡೋಣ ನೀನು ಹೇಗೆ ಪ್ರವೇಶ ಮಾಡುವೆಯೊ' ಎಂದು ಹಟತೊಟ್ಟ.

ಕೆಲವು ದಿನಗಳಾದ ಮೇಲೆ ಒಂದು ದಿನ ಸಂಜೆ ದುರ್ಗಾದಾಸನ ಮನೆಯ ಮುಂದೆ ಒಂದು ಸೀರೆಯುಟ್ಟು ಕೈಯಲ್ಲಿ ಒಂದು ಕುಕ್ಕೆ ಹಿಡಿದ ಹುಡುಗಿಯೊಬ್ಬಳು ಬಂದು ನಿಂತಳು. ಆ ಹುಡುಗಿ ದುರ್ಗಾಧಾಸನಿಗೆ "ನಾನು ನೆಯ್ಗೆಯವಳು. ಸಂತೆಗೆ ದಾರ ಮಾರುವುದಕ್ಕೆ ಬಂದೆ. ಜೊತೆಯವರು ಹೊರಟು

ಹೋದರು. ಇಂದು ರಾತ್ರಿ ಇಲ್ಲಿ ತಂಗಿ ಹೋಗುವುದಕ್ಕೆ ಅವಕಾಶ ಸಿಕ್ಕೀತೆ ?" ಎಂದು ಕೇಳಿದಳು. ದುರ್ಗಾದಾಸನಾದರೋ ಆ ಹುಡುಗಿಯ ಮುಗ್ಧತೆಗೆ ಮಾರುಹೋಗಿ, ಮನೆಯ ಒಳಗೆ ತನ್ನ ಹೆಂಗಸರು ಇರುವ ಕಡೆಗೆ ಕಳುಹಿಸಿದನು. ಮನೆಯವರು ಈ ಹುಡುಗಿಗೆ ತಿನ್ನಲು ತಿಂಡಿ ಕೊಟ್ಟರು. ಇವಳೊಡನೆ ಏನೇನೋ ವಿಷಯ ಮಾತನಾಡುತ್ತಿದ್ದರು. ಆ ಹುಡುಗಿಗೆ ಮಲಗಲು ಒಂದು ಸ್ಥಳವನ್ನು ತೋರಿಸಿದರು. ಅಷ್ಟು ಹೊತ್ತಿಗೆ ಅವೇಳೆಯಾಗಿತ್ತು. ಆಗ ಬೀದಿಯಲ್ಲಿ 'ರಾಮಕೃಷ್ಣ' ಎಂದು ರಾಮೇಶ್ವರ ಇವರ ಮನೆಯ ಮುಂದೆ ಕೂಗುತ್ತಿದ್ದುದು ಕೇಳಿಬಂತು. ಆ ನೆಯ್ಗೆಯ ಹುಡುಗಿ ಬರುತ್ತೇನೆ 'ಅಣ್ಣಾ' ಎಂದು ಓಡಿಹೋದಳು. ಶ್ರೀರಾಮಕೃಷ್ಣರೇ ನೆಯ್ಗೆಯವಳ ವೇಷದಲ್ಲಿ ಮನೆಯನ್ನು ಪ್ರವೇಶಿಸಿದ್ದರು. ಒಳಗೆ ಇದ್ದವರಿಗೆಲ್ಲ ಆಶ್ಚರ್ಯ. ದುರ್ಗಾದಾಸನಿಗಂತೂ ಮೊದಲು ಕೋಪ ಉಕ್ಕೇರಿತು. ತನ್ನನ್ನು ವಂಚಿಸಿ ಮನೆ ಪ್ರವೇಶಿಸಿದನಲ್ಲ ಎಂದು. ಆದರೆ ಸ್ವಲ್ಪ ಹೊತ್ತಿನ ಮೇಲೆ ಅದನ್ನೆಲ್ಲ ಮರೆತನು. ತನ್ನ ಹೆಂಡತಿ ಮತ್ತು ಮಕ್ಕಳು ಕೂಡ ಶ್ರೀರಾಮಕೃಷ್ಣರ ಕೀರ್ತನೆಯನ್ನು ಕೇಳಲು ಸೀತಾನಾಥ ಪೈನಿ ಮನೆಗೆ ಕಳುಹಿಸಲು ಉಪಕ್ರಮಿಸಿದನು.

ಶ್ರೀರಾಮಕೃಷ್ಣರಿಗೆ ಹದಿನೇಳು ವಯಸ್ಸಾಯಿತು. ಆದರೆ ಪಾಠದ ಮೇಲೆ ಅವರ ಗಮನ ಹೋಗಲಿಲ್ಲ. ಕಲ್ಕತ್ತೆಯಲ್ಲಿದ್ದ ರಾಮಕುಮಾರ ಒಮ್ಮೆ ಕಾಮಾರಪುಕುರಕ್ಕೆ ಬಂದ. ಶ್ರೀರಾಮಕೃಷ್ಣರು ಜೀವನೋಪಾಯಕ್ಕೆ ಅತ್ಯಂತ ಆವಶ್ಯಕವಾದ ಯಾವ ವಿದ್ಯೆಯ ಕಡೆ ಕೂಡ ಗಮನಕೊಟ್ಟಿರಲಿಲ್ಲ. ಕಲ್ಕತ್ತೆಯಲ್ಲಿ ತನ್ನೊಡನೆ ಇಟ್ಟುಕೊಂಡಿದ್ದರೆ ಅವರ ಜೀವನೋಪಾಯಕ್ಕೆ ಸಹಾಯವಾದೀತೆಂದು ಶ್ರೀರಾಮಕೃಷ್ಣರನ್ನು ಕಲ್ಕತ್ತೆಗೆ ಕರೆದುಕೊಂಡು ಹೋದ.

೨. ಸಾಧನೆ

ಕಲ್ಕತ್ತೆಗೆ ಬಂದಮೇಲೆ ಶ್ರೀರಾಮಕೃಷ್ಣರು ಅಣ್ಣ ನಿರೀಕ್ಷಿಸಿದ್ದಂತೆ ಪಾಠದ ಕಡೆ ಗಮನವನ್ನೇನೂ ಕೊಡಲಿಲ್ಲ. ರಾಮಕುಮಾರ ಒಂದು ದಿನ ತಮ್ಮನನ್ನು "ವಿದ್ಯೆ ಕಲಿಯದೆ ಇದ್ದರೆ ನಿನ್ನ ಭವಿಷ್ಯದ ಗತಿ ಏನು ?" ಎಂದು ಕೇಳಿದನು.

ಅದಕ್ಕೆ ಶ್ರೀರಾಮಕೃಷ್ಣರು "ಹೊಟ್ಟೆಗೆ ಬಟ್ಟೆಗೆ ಕೊಡುವ ವಿದ್ಯೆ ನನಗೆ ಬೇಡ. ಯಾವುದರಿಂದ ಜ್ಞಾನ ದೊರಕುವುದೊ, ಯಾವುದರಿಂದ ಮನುಷ್ಯ ಕೃತಕೃತ್ಯನಾಗುವನೊ ಅದು ನನಗೆ ಬೇಕು" ಎಂದರು. ಆಗ ಅಣ್ಣ ಮೌನವಾದನು. ಕೆಲವು ಮನೆಯಲ್ಲಿ ದೇವರ ಪೂಜೆಯನ್ನಾದರೂ ಮಾಡು ಎಂದು ಶ್ರೀರಾಮಕೃಷ್ಣರನ್ನು ಕಳುಹಿಸಿದನು. ಶ್ರೀರಾಮಕೃಷ್ಣರು ಇದನ್ನು ಸಂತೋಷದಿಂದ ಒಪ್ಪಿಕೊಂಡು ಆ ಕೆಲಸವನ್ನು ಮಾಡತೊಡಗಿದರು.

ಕಲ್ಕತ್ತೆಯಲ್ಲಿ ರಾಣಿರಾಸಮಣಿ ಎಂಬ ಶ್ರೀಮಂತ ಬೆಸ್ತರ ಹೆಂಗಸು ಇದ್ದಳು. ಆಕೆ ವಿಧವೆಯಾಗಿದ್ದಳು. ಆಕೆಗೆ ನಾಲ್ಕು ಜನ ಹೆಣ್ಣು ಮಕ್ಕಳಿದ್ದರು. ಅವಳ ಕೊನೆಯ ಅಳಿಯ ಮಥುರಾನಾಥ ಎಂಬುವನು ಅವರ ಮನೆಯಲ್ಲಿಯೇ ಇದ್ದು ತನ್ನ ಅತ್ತೆಗೆ ಸಂಬಂಧಪಟ್ಟ ವ್ಯವಹಾರವನ್ನೆಲ್ಲ ನೋಡಿಕೊಳ್ಳುತ್ತಿದ್ದನು. ಆಕೆ ಕಾಳಿಕಾಮಾತೆಯ ದೊಡ್ಡ ದೈವಭಕ್ತಳು. ಶ್ರೀ ಕಾಳಿಕಾಮಾತೆಗಾಗಿ ಒಂದು ಗುಡಿಯನ್ನು ಕಟ್ಟಬೇಕೆಂದು ಕಲ್ಕತ್ತ ನಗರಿಗೆ ಸ್ವಲ್ಪ ದೂರದಲ್ಲಿ ಗಂಗಾನದಿಯ ತೀರದಲ್ಲಿ ದಕ್ಷಿಣೇಶ್ವರ ಎಂಬ ಕಡೆ ದೊಡ್ಡ ಸ್ಥಳವನ್ನು ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಒಂದು ದೇವಸ್ಥಾನವನ್ನು ಕಟ್ಟಿಸಿದಳು. ಆದರೆ ಅಲ್ಲಿ ಪೂಜೆ ಮಾಡುವುದಕ್ಕೆ ಯಾವ ಬ್ರಾಹ್ಮಣ ಪೂಜಾ

ರಿಯೂ ಮುಂದೆ ಬರಲಿಲ್ಲ. ಈ ಸಮಾಚಾರ ರಾಮಕುಮಾರ ನಿಗೆ ತಿಳಿಯಿತು. ಆತ ಆಕೆಗೆ ಒಂದು ಉಪಾಯವನ್ನು ಸೂಚಿಸಿದ. ದೇವಸ್ಥಾನವನ್ನು ಆಕೆಯ ಕುಲಗುರುಗಳಾದ ಬ್ರಾಹ್ಮಣರಿಗೆ ದಾನಮಾಡಿ ಬಿಟ್ಟಂತೆ ಮಾಡಿದರೆ ಬ್ರಾಹ್ಮಣರಿಗೆ ಅನಂತರ ಪೂಜೆ ಮಾಡಲು ಯಾವ ಅಭ್ಯಂತರವೂ ಇರುವುದಿಲ್ಲ ಎಂದನು. ಆದರಂತೆಯೇ ಆಕೆಯೇನೊ ಮಾಡಿದಳು. ಆದರೆ ಬ್ರಾಹ್ಮಣ ಪೂಜಾರಿಗಳು ಯಾರೂ ಮುಂದೆ ಬರಲಿಲ್ಲ. ಆಗ ರಾಣಿ ರಾಸ ಮಣಿ ರಾಮಕುಮಾರನನ್ನೇ ಪೂಜೆಗೆ ಬರಬೇಕೆಂದು ಕೋರಿ ಕೊಂಡಳು. ಕೆಲವು ಕಾಲ ಅಲ್ಲಿ ಪೂಜೆ ಮಾಡಲು ರಾಮಕುಮಾರ ದಕ್ಷಿಣೇಶ್ವರಕ್ಕೆ ಬಂದನು. ಒಂದೆರಡು ದಿನಗಳಾದ ಮೇಲೆ ಶ್ರೀರಾಮಕೃಷ್ಣರು ಬಂದರು.

ಕಲ್ಕತ್ತೆಯಿಂದ ದೋಣಿಯಲ್ಲಿ ಗಂಗಾನದಿಯ ಮೇಲೆ ಪಶ್ಚಿಮಕ್ಕೆ ಹೊರಟರೆ ದೂರದಲ್ಲಿ ದಕ್ಷಿಣೇಶ್ವರ ದೇವಾಲಯದ ವಿರಾಟ್‌ಗೋಪುರ ಕಾಣಿಸುವುದು. ಸುಮಾರು ಮೂರು ಮೈಲಿ ನದಿಯ ಮೇಲೆ ಬಂದರೆ ತೀರದಲ್ಲೇ ದಕ್ಷಿಣೇಶ್ವರ ಸ್ನಾನಘಟ್ಟ ಕಾಣುವುದು. ದೋಣಿ ಇಳಿದು ಸೋಪಾನಪಂಕ್ತಿಗಳನ್ನು ಹತ್ತಿ ಬಂದರೆ ಎಡಬಲಗಳಲ್ಲಿ ಆರು ಆರು ಶಿವಮಂದಿರಗಳಿವೆ. ಇದನ್ನು ದಾಟಿಹೋದರೆ ವಿಶಾಲವಾದ ನಾಟ್ಯಮಂದಿರ ಕಾಣಿಸುವುದು. ಅದರ ಮುಂದೆಯೇ ಗರ್ಭಗುಡಿಯಲ್ಲಿ ಸಹಸ್ರ ದಳ ಪದ್ಮದ ಮೇಲೆ ಶಿವನ ಮೇಲೆ ತಾಂಡವವಾಡುತ್ತಿರುವ ಕಪ್ಪು ಕಲ್ಲಿನಿಂದ ಕೆತ್ತಿದ ಭವತಾರಣಿ ಕಾಳಿಕಾಮೂರ್ತಿ ಗೋಚರಿಸುವುದು. ದುಷ್ಟ ಸಂಹಾರ ಮಾಡುವ ಖಡ್ಗ ಒಂದು ಕೈಯಲ್ಲಿ, ಆಶ್ರಿತ ಜನರಿಗೆ ಅಭಯ ನೀಡುವ ಹಸ್ತ ಮತ್ತೊಂದು ಕಡೆ. ರುಂಡಮಾಲೆ ಯಿಂದ ಅಲಂಕೃತಳಾಗಿರುವಳು. ಮೊಗದಲ್ಲಿ ಸುಂದರ ಮಂದ

ಹಾಸ ಮೂಡಿದೆ. ಇದೇ ದಕ್ಷಿಣೇಶ್ವರದ ಮೂಲದೇವತೆ. ಶ್ರೀರಾಮಕೃಷ್ಣರ ಸರ್ವಸ್ವವನ್ನೂ ಸೂರೆಗೊಂಡು ಅವರ ಹೃದಯ ದಲ್ಲಿ ಅನುಗಾಲವೂ ವಿಹರಿಸುವ ಚಿನ್ಮಯಮೂರ್ತಿ. ರಾಣಿ ರಾಸಮಣಿಯ ಹೃದಯೇಶ್ವರಿ.

ಕಾಳಿಕಾಮಂದಿರಕ್ಕೆ ಕೆಲವು ಗಜಗಳು ಹಿಂದೆ ಹೋದರೆ ರಾಧಾಕೃಷ್ಣರ ದೇವಾಲಯ, ಅದಾದ ಮೇಲೆ ದೊಡ್ಡ ಪ್ರಾಂಗಣ, ಪ್ರಾಂಗಣದ ಸುತ್ತಲೂ ಯಾತ್ರಿಕರು ಇಳಿದುಕೊಳ್ಳುವುದಕ್ಕೆ ಕೋಣೆ, ಅದರ ಹಿಂದೆ ದೇವಸ್ಥಾನವನ್ನೆಲ್ಲ ಆವರಿಸಿರುವ ಬೃಹದಾ ಕಾರದ ಪೌಳಿಗೋಡೆ, ಅದರಿಂದ ಹೊರಗೆ ಬಂದರೆ ದಟ್ಟ ಕಾನನ, ನಿರ್ಜನ ಪ್ರದೇಶ, ಇದೇ ಶ್ರೀರಾಮಕೃಷ್ಣರ ಸಾಧನಾರಂಗ. ಇಲ್ಲಿಯೇ ಶ್ರೀರಾಮಕೃಷ್ಣರು ದೇವರನ್ನು ಯಾವ ಯಾವ ರೀತಿ ಯಲ್ಲಿ ನೋಡಬಹುದೋ ಹಾಗೆಲ್ಲಾ ನೋಡಿದರು. ಅವನನ್ನು ಎಷ್ಟು ವಿಧದಲ್ಲಿ ಪ್ರೀತಿಸಬಹುದೋ ಹಾಗೆ ಪ್ರೀತಿಸಿದರು. ಅವನನ್ನು ಕಾಣುವುದಕ್ಕೆ ಎಷ್ಟೆಷ್ಟು ಯೋಗಗಳ ಮಾರ್ಗಗಳಿ ವೆಯೋ ಅವುಗಳ ಮೂಲಕ ಹೋಗಿ ಒಂದೇ ಗುರಿಯನ್ನು ಮುಟ್ಟಿದರು. ಎಷ್ಟು ಮತಗಳೊ ಅವುಗಳೆಲ್ಲ ಸತ್ಯದೇಗುಲಕ್ಕೆ ಇರುವ ಹಲವು ಪಥಗಳು ಎಂಬುದನ್ನು ತಮ್ಮ ಜೀವನದ ಅನು ಭವದಿಂದ ಕಂಡುಕೊಂಡರು. ಶ್ರೀರಾಮಕೃಷ್ಣರ ಸಾಧನೆಯ ಲೀಲಾಭೂಮಿ ದಕ್ಷಿಣೇಶ್ವರ.

ರಾಮಕುಮಾರ ಮತ್ತು ಶ್ರೀರಾಮಕೃಷ್ಣರು ದಕ್ಷಿಣೇಶ್ವರಕ್ಕೆ ಬಂದ ಮೇಲೆ ಅವರ ಸೋದರಳಿಯ ಹೃದಯ ಕೆಲಸವನ್ನು ಹುಡುಕಿಕೊಂಡು ದಕ್ಷಿಣೇಶ್ವರಕ್ಕೆ ಬಂದ. ರಾಮಕುಮಾರ ಪೂಜೆಯನ್ನು ಮಾಡುತ್ತಿದ್ದ. ಶ್ರೀರಾಮಕೃಷ್ಣರು ಅವನಿಗೆ ಸಹಾಯ ಮಾಡುತ್ತಿದ್ದರು. ಆದರೆ ಪೂಜೆ ಮಾಡುತ್ತಿರಲಿಲ್ಲ.

ರಾಣಿ ರಾಸಮಣಿಯ ಅಳಿಯ ಮಥುರನಾಥ ಎಂಬುವನು ಶ್ರೀ ರಾಮಕೃಷ್ಣರನ್ನು ನೋಡಿ ಅವರ ಸರಳತೆ ಮತ್ತು ಅವರ ಭಕ್ತಿ ಮುಂತಾದುವುಗಳಿಂದ ಆಕರ್ಷಿತನಾದನು. ಹೇಗಾದರೂ ಮಾಡಿ ಇಂತಹವರನ್ನು ದಕ್ಷಿಣೇಶ್ವರದಲ್ಲಿ ಪೂಜಾರಿಯಾಗಿ ಮಾಡಿದರೆ ರಾಣಿ ರಾಸಮಣಿ ಹಣ ಖರ್ಚುಮಾಡಿ ದೇವಸ್ಥಾನ ಕಟ್ಟಿದ್ದು ಸಾರ್ಥಕವಾಗುವುದು ಎಂದು ಭಾವಿಸಿದ. ಆದರೆ ಶ್ರೀರಾಮ ಕೃಷ್ಣರು ಪೂಜೆ ಜವಾಬ್ದಾರಿಯ ಕೆಲಸವೆಂದು ಮೊದಮೊದಲು ಅದಕ್ಕೆ ಒಪ್ಪಲಿಲ್ಲ. ಪ್ರಾರಂಭದಲ್ಲಿ ರಾಧಾಕೃಷ್ಣನ ದೇವಾಲಯ ದಲ್ಲಿ ದೇವರಿಗೆ ಅಲಂಕಾರ ಮಾಡುವ ಕೆಲಸವನ್ನು ಮಾತ್ರ ತೆಗೆದುಕೊಂಡರು. ಒಂದು ಸಲ ಅಲ್ಲಿಯ ಪೂಜಾರಿಯ ಅಜಾ ಗರೂಕತೆಯಿಂದ ಆ ವಿಗ್ರಹವು ಬಿದ್ದು ಕಾಲಿನ ಬೆರಳು ಮುರಿದು ಹೋಯಿತು. ಭಿನ್ನವಾದ ವಿಗ್ರಹವನ್ನು ಪೂಜಿಸುವುದೇ ಬಿಡು ವುದೇ ಎಂದು ಚರ್ಚೆ ನಡೆಯಿತು. ಪಂಡಿತರು ಅದನ್ನು ಪೂಜಿಸ ಕೂಡದು ಎಂದು ವಾದಿಸತೊಡಗಿದರು. ಮಥುರನಾಥನಿಗೆ ತೃಪ್ತಿಯಾಗಲಿಲ್ಲ. ಶ್ರೀರಾಮಕೃಷ್ಣರನ್ನು ಕೇಳಿದನು. ಶ್ರೀರಾಮ ಕೃಷ್ಣರು ಒಂದೇ ಸರಳವಾಕ್ಯದಲ್ಲಿ ಅದನ್ನು ಬಗೆಹರಿಸಿದರು. "ರಾಣಿ ರಾಸಮಣಿ ಅಳಿಯನಿಗೆ ಬಿದ್ದು ಗಾಯವಾದರೆ, ಅವನನ್ನು ಗುಣಪಡಿಸಲು ಯತ್ನಿಸುವರೋ ಅಥವಾ ಬೇರೊಬ್ಬ ಅಳಿಯ ನನ್ನು ಹುಡುಕಿಕೊಂಡು ಬರುವರೋ ?" ಎಂದು ಪ್ರಶ್ನಿಸಿದರು. ಮಥುರನಾಥನಿಗೆ ಶ್ರೀರಾಮಕೃಷ್ಣರ ವಾದಸರಣಿ ಸರಿಯಾಗಿ ಹಿಡಿಸಿತು. ಶ್ರೀರಾಮಕೃಷ್ಣರೇ ಜೋಪಾನವಾಗಿ ವಿಗ್ರಹವನ್ನು ರಿಪೇರಿ ಮಾಡಿದರು. ನೋಡಿದರೆ ಅದನ್ನು ರಿಪೇರಿ ಮಾಡಿರು ವರು ಎಂದು ಗೊತ್ತಾಗುತ್ತಲೇ ಇರಲಿಲ್ಲ.

ಕಾಳಿಕಾ ಮಂದಿರದ ಪೂಜೆ ರಾಮಕುಮಾರನಿಗೆ ಕಷ್ಟ

ವಾಗುತ್ತ ಬಂದಿತು. ಆತನನ್ನು ರಾಧಾಗೋವಿಂದ ದೇವಸ್ಥಾನಕ್ಕೆ ವರ್ಗಾಯಿಸಿದರು. ಶ್ರೀರಾಮಕೃಷ್ಣರು ಕೇನಾರಾಮ ಭಟ್ಟಾಚಾರ್ಯ ಎಂಬ ಶಕ್ತಿ ಉಪಾಸಕರಿಂದ ಶಕ್ತಿಯ ಮಂತ್ರವನ್ನು ಉಪದೇಶ ಪಡೆದರು. ಕೆಲವು ಸಲ ಅದನ್ನು ಉಚ್ಚರಿಸುವುದೇ ತಡ, ಜಗನ್ಮಾತೆಯಲ್ಲಿ ಅವರ ಮನಸ್ಸು ತುಂಬಿ ತುಳುಕಾಡುತ್ತಿತ್ತು. ಅನಂತರ ಕಾಳಿಕಾದೇವಿಯ ಪೂಜೆಗೆ ಪ್ರಾರಂಭಮಾಡಿದರು. ಕೆಲವು ಕಾಲದ ಮೇಲೆ ರಾಮಕುಮಾರ ಕಾರ್ಯನಿಮಿತ್ತ ಕಲ್ಕತ್ತೆಗೆ ಹೋದವನು ಅಲ್ಲಿಯೇ ಕಾಲವಾದ. ಶ್ರೀರಾಮಕೃಷ್ಣರನ್ನು ಚಿಕ್ಕಂದಿನಿಂದ ಸಾಕಿ ಸಲುಹಿದ ಅಣ್ಣ ಕಣ್ಮರೆಯಾದ. ಶ್ರೀರಾಮಕೃಷ್ಣರಿಗೆ ಈ ಘಟನೆ ನಮ್ಮ ಪ್ರಪಂಚ ಎಷ್ಟು ನಶ್ವರ ಎಂಬುದನ್ನು ಮನದಟ್ಟುಮಾಡಿಸಿತು.

ಕಾಳಿಕಾ ಮಂದಿರದ ಪೂಜೆಯನ್ನು ಭಕ್ತಿಯಲ್ಲಿ ತನ್ಮಯರಾಗಿ ಮಾಡುತ್ತಿದ್ದರು. ದೇವಿಯನ್ನು ಬೇಡುತ್ತಿದ್ದರು, "ನೀನು ರಾಮಪ್ರಸಾದ ಕಮಲಾಕಾಂತರಿಗೆ ಮೈದೋರಿದೆ, ನನಗೂ ಮೈದೋರು" ಎಂದು. ಪೂಜೆಯಾದ ಮೇಲೆ ಪಟ್ಟಕಾಸನದೊಳಗೆ ಹೋಗಿ ಕುಳಿತುಕೊಂಡು ದೇವಿಯ ಧ್ಯಾನ ಮಾಡುವರು. ಸಂಜೆ ಹೊತ್ತು ಸೂರ್ಯ ಮುಳುಗುತ್ತಿರುವಾಗ ಗಂಗಾನದಿಯ ತೀರದಲ್ಲಿ ನಿಂತು ಅದನ್ನು ನೋಡುತ್ತಾ "ಅಯ್ಯೊ, ನನ್ನ ಜೀವನದಲ್ಲಿ ಒಂದು ದಿನದ ಆಯುಸ್ಸು ಮುಗಿಯಿತು. ತಾಯಿ ಕೃಪೆದೋರು, ಅನಾಥ ಬಾಲಕನಿಗೆ ಮೈದೋರು" ಎಂದು ಅಳುತ್ತ ನೆಲದ ಮೇಲೆ ಬಿದ್ದು ಒದ್ದಾಡುತ್ತಿದ್ದರು. ಒಂದು ದಿನ ಪೂಜೆಯಾದ ಮೇಲೆ ತಾವೆಷ್ಟು ಕರೆದರೂ, ಎಷ್ಟು ಧ್ಯಾನ ಮಾಡಿದರೂ ತಾಯಿ ಬರಲಿಲ್ಲ. ಯಾವ ಬಾಳಿನಲ್ಲಿ ಅವಳನ್ನು ನೋಡಲು ಆಗಲಿಲ್ಲವೋ ಅದನ್ನು ಅವಳ ಪಾದದಡಿಯಲ್ಲಿಯೇ ಉರುಳಿಸುವೆ

ಎಂದು ಖಡ್ಗದಿಂದ ತಮ್ಮ ಶಿರವನ್ನೇ ದೇವಿಯ ಅಡಿದಾವರೆಯಲ್ಲಿ ಉರುಳಿಸುವುದಕ್ಕೆ ಸಿದ್ಧವಾಗಿದ್ದರು. ಆಗ ಅವರಿಗೆ ಕಂಡ ದೃಶ್ಯವನ್ನು ಶ್ರೀರಾಮಕೃಷ್ಣರ ಮಾತಿನಿಂದಲೇ ಕೇಳೋಣ : "ಮನೆ ಬಾಗಿಲು ದೇವಸ್ಥಾನ ಎಲ್ಲವೂ ಮಾಯವಾಯಿತು. ಎಲ್ಲಾ ಶೂನ್ಯದಂತೆ ಕಂಡಿತು. ಎಲ್ಲೆಲ್ಲೂ ಅನಂತಜ್ಯೋತಿಸ್ಸಮುದ್ರ ಒಂದೇ ಕಾಣುತ್ತಿತ್ತು. ಎತ್ತನೋಡಿದರೂ ನಿರಂತರವಾಗಿ ಜ್ಯೋತಿ ಪೂರ್ಣ ಅಲೆಗಳು ಆ ಕಡಲಿಂದ ಘರ್ಜಿಸುತ್ತ ಮೇಲೆ ವೇಗದಿಂದ ಬರುತ್ತಿವೆ. ನಾನು ತತ್ತರಿಸಿ ಬಾಹ್ಯಜ್ಞಾನಶೂನ್ಯನಾಗಿ ಬಿದ್ದು ಬಿಟ್ಟೆ. ಕೆಲವು ದಿನಗಳಾದ ಮೇಲೆ ಬಾಹ್ಯಪ್ರಜ್ಞೆ ಬಂತು. ಒಡನೆಯೇ "ಹೇ ತಾಯಿ !" ಎಂಬ ಕೇಳಿದವರೆದೆ ಕರಗುವಂತಹ ಧ್ವನಿಯೊಂದು ಹೊರಹೊಮ್ಮಿತು.

ಜಗನ್ಮಾತೆಯನ್ನು ಪ್ರತ್ಯಕ್ಷ ನೋಡಿದ ಮೇಲೆ ಶ್ರೀರಾಮಕೃಷ್ಣರ ಪೂಜಾವಿಧಾನವೇ ಬೇರೆ ಆಯಿತು. ಅವರ ಪಾಲಿಗೆ ಗರ್ಭಗುಡಿಯಲ್ಲಿರುವ ವಿಗ್ರಹ ಶಿಲಾ ವಿಗ್ರಹವಾಗಿರಲಿಲ್ಲ. ಚಿನ್ಮಯವಾಯಿತು. ಸಚೇತನಮೂರ್ತಿಯಾಯಿತು. ಶ್ರೀರಾಮಕೃಷ್ಣರು ಕೊಡುವುದನ್ನು ಅವಳು ತಿನ್ನುತ್ತಿದ್ದಳು, ಅವರಾಡುವ ಮಾತನ್ನು ಅವಳು ಕೇಳುತ್ತಿದ್ದಳು, ಉಸಿರಾಡುತ್ತಿದ್ದಳು, ನಡೆಯುತ್ತಿದ್ದಳು, ಆಡುತ್ತಿದ್ದಳು ಅವರ ಪಾಲಿಗೆ. ಒಮ್ಮೆ ಪೂಜೆ ಮಾಡುತ್ತಿದ್ದಾಗ ಶ್ರೀರಾಮಕೃಷ್ಣರು ತಮ್ಮ ಪಂಚೆಯ ಅಂಚನ್ನು ದೇವಿಯ ಮೂಗಿನ ತುದಿಯಲ್ಲಿ ಹಿಡಿದರು, ಅದು ಉಸಿರಾಡುತ್ತಿದೆಯೋ ಇಲ್ಲವೇ ಎಂಬುದನ್ನು ನೋಡುವುದಕ್ಕೆ. ಆಶ್ಚರ್ಯ, ಅದು ಮುಂದಕ್ಕೆ ಹಿಂದಕ್ಕೆ ಹೋಯಿತು. ರಾತ್ರಿ ನಡೆಯುವಾಗ ದೇವಿಯ ಕಾಲಂದಿಗೆಯ ಝಣಝಣತ್ಕಾರ ಕೇಳಿಸುತ್ತಿತ್ತು.

ಶ್ರೀರಾಮಕೃಷ್ಣರು ಪೂಜೆ ಮಾಡುವಾಗ ವಿಗ್ರಹದೊಂದಿಗೆ

ವ್ಯವಹರಿಸುತ್ತಿದ್ದುದು ಅಲೌಕಿಕವಾಗಿತ್ತು. ಅವಳೊಂದಿಗೆ ಮಾತ ನಾಡುವರು, ಮಾತೆಯ ಗಲ್ಲವನ್ನು ಸವರುವರು, ಅವಳ ಕೈಯನ್ನು ಹಿಡಿದುಕೊಂಡು ಕುಣಿಯುವರು. ಪೂಜೆ ಮಾಡುವಾಗ ಧ್ಯಾನಕ್ಕೆ ಕುಳಿತರೆ ಕಾಲದ ಅರಿವೆ ಇರುತ್ತಿರಲಿಲ್ಲ. ನೈವೇದ್ಯವನ್ನು ಕೊಡು ವಾಗ ದೇವಿಯ ಬಾಯಿಗೆ ತಿನ್ನಿಸುವರು. ಕೆಲವು ವೇಳೆ ತಾಯಿ ತಮಗೆ ತಿನ್ನು ಎಂದು ಹೇಳಿದಂತೆ ಭಾಸವಾಗಿ ತಾವು ತಿನ್ನುವರು. ಒಂದು ದಿನ ಆ ಸಮಯದಲ್ಲಿ ಬೆಕ್ಕೊಂದು ಬಂದಿತು. ಅಂದು, ತಾಯಿ ನೀನು ಇಂದು ಬೆಕ್ಕಿನ ರೂಪಿನಲ್ಲಿ ನೈವೇದ್ಯವನ್ನು ತೆಗೆದು ಕೊಳ್ಳಬೇಕೆಂದಿರುವೆಯಾ ? ಎಂದು ಹೇಳಿ ಅದಕ್ಕೆ ಕೊಟ್ಟು ಬಿಟ್ಟರು. ಇದನ್ನೆಲ್ಲ ನೋಡುತ್ತಿದ್ದ ಗುಡಿಯ ಮೇಲ್ವಿಚಾರಕರಿಗೆ ಶ್ರೀರಾಮಕೃಷ್ಣರು ಎಲ್ಲೋ ಹುಚ್ಚಾಗಿ ಹೋಗಿರಬೇಕೆಂದು ಮಥುರನಾಥರಿಗೆ ಕಾಗದ ಬರೆದರು. ಅದಕ್ಕೆ ಆತ ಶ್ರೀರಾಮ ಕೃಷ್ಣರ ಸತ್ತ್ವವನ್ನು ಬಲ್ಲವನು, ತಾನೆ ಬಂದು ಪೂಜಾರಿಯನ್ನು ನೋಡುವುದಕ್ಕೆ ಮುಂಚೆ ಯಾರೂ ಅವರ ತಂಟೆಗೆ ಹೋಗಕೂಡ ದೆಂದು ಕಾಗದ ಬರೆದನು.

ಒಂದು ದಿನ ಯಾರಿಗೂ ಹೇಳದೆ ಶ್ರೀರಾಮಕೃಷ್ಣರು ಪೂಜೆ ಮಾಡುವುದನ್ನು ನೋಡಲು ಮಥುರನಾಥ ಬಂದ. ಗರ್ಭಗುಡಿಯಲ್ಲಿ ಶ್ರೀರಾಮಕೃಷ್ಣರು ದೇವಿಗೆ ಪೂಜೆ ಮಾಡು ತ್ತಿರುವರು. ಅವರಿಗೆ ಬಾಹ್ಯಪ್ರಪಂಚ ಮಾಯವಾಗಿ ಹೋಗಿತ್ತು. ದೇವಿಯಲ್ಲದೆ ಮತ್ತಾವುದೂ ಅವರ ಗಮನಕ್ಕೆ ಬರುತ್ತಿರಲಿಲ್ಲ. ಆ ಪರವಶತೆಯನ್ನು ನೋಡಿ ಮಥುರನಾಥ ಬೆರಗಾಗಿ ಹೋದ. ಆ ದಿವ್ಯಮೂರ್ತಿಗೂ, ಆ ದಿವ್ಯಪೂಜಾರಿಗೂ ನಮಸ್ಕರಿಸಿ, ಸಾರ್ಥಕವಾಯಿತು ನನ್ನ ಅತ್ತೆ ಮಾಡಿದ ಕೆಲಸ. ಜಗನ್ಮಾತೆ ಇಲ್ಲಿ ಸುಪ್ರಸನ್ನಳಾಗಿ ನೆಲಸಿರುವಳು ಎಂದು ಭಾವಿಸಿದನು.

ದೇವಸ್ಥಾನದ ಮೇಲ್ವಿಚಾರಕರಿಗೆ ಯಾರೂ ಶ್ರೀರಾಮಕೃಷ್ಣರ ತಂಟೆಗೆ ಹೋಗಕೂಡದೆಂದು ಕಟ್ಟಪ್ಪಣೆ ಇತ್ತು ಬಂದ.

ಮಥುರನಾಥ ಮನೆಗೆ ಹೋದಮೇಲೆ ಅತ್ತೆಗೆ ತಾನು ಕಂಡ ದೃಶ್ಯವನ್ನು ವಿವರಿಸಿದನು. ಆಕೆಯು ತಾನೂ ನೋಡ ಬೇಕೆಂದು ಪೂಜಾ ಸಮಯದಲ್ಲಿ ಬಂದಳು. ಪೂಜೆಯೆಲ್ಲಾ ಆದ ಮೇಲೆ ಶ್ರೀರಾಮಕೃಷ್ಣರನ್ನು ಕೆಲವು ಭಕ್ತಿಯ ಹಾಡುಗಳನ್ನು ಹಾಡಿರೆಂದು ಕೋರಿಕೊಂಡಳು. ಅವರು ಹಾಡುತ್ತಿರುವಾಗ ಆಕೆಯ ಮನಸ್ಸು ಕೋರ್ಟಿನಲ್ಲಿರುವ ಒಂದು ಕೇಸಿನಮೇಲೆ ಹೋಗಿತ್ತು. ತಕ್ಷಣವೇ ಶ್ರೀರಾಮಕೃಷ್ಣರು ಆಕೆಯ ಹತ್ತಿರ ಬಂದು "ಇಲ್ಲಿಯೂ ಅದರ ಚಿಂತನೆಯೆ" ಎಂದು ಕೆನ್ನೆಗೆ ಏಟು ಕೊಟ್ಟರು. ರಾಣಿ ಅದಕ್ಕೆ ಕೋಪಗೊಳ್ಳದೆ, ತಾಯಿಯೇ ತನ್ನ ತಪ್ಪಿಗೆ ಶಿಕ್ಷೆಯನ್ನು ವಿಧಿಸಿದಳು ಎಂದು ಭಾವಿಸಿಕೊಂಡು ಹಿಂತಿರುಗಿದಳು.

ಶ್ರೀರಾಮಕೃಷ್ಣರು ದಿವ್ಯಭಾವದಲ್ಲಿ ತಲ್ಲೀನರಾಗುವುದರಿಂದ ಶಾಸ್ತ್ರೋಕ್ತ ಪೂಜೆ ಸಕಾಲದಲ್ಲಿ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಅವರಿಗೆ ಆಧ್ಯಾತ್ಮಿಕ ಸಾಧನೆಗೆ ಅವಕಾಶಕೊಟ್ಟು ಬೇರೆಯವರನ್ನು ಪೂಜೆಗೆ ಗೊತ್ತುಮಾಡಿದರು. ಶ್ರೀರಾಮಕೃಷ್ಣರು ಅನಂತರ ಹಲವಾರು ಸಾಧನೆಗಳಲ್ಲಿ ತನ್ಮಯರಾದರು. ಮೊದಲು ದಾಸ್ಯ ಭಾವವನ್ನು ಆರೋಪಮಾಡಿಕೊಂಡರು. ಇಲ್ಲಿ ಭಗವಂತನನ್ನು ಸ್ವಾಮಿಯಂತೆ. ತಾವು ಆತನನ್ನು ದಾಸನಂತೆ ನೋಡುವರು. ಆಂಜನೇಯ ಶ್ರೀರಾಮನನ್ನು ಈ ಭಾವದಲ್ಲಿ ಪೂಜಿಸುತ್ತಿದ್ದ. ಶ್ರೀರಾಮಕೃಷ್ಣರು ಆಂಜನೇಯನ ಭಾವವನ್ನು ಆರೋಪ ಮಾಡಿಕೊಂಡರು. ಅವನಂತೆ ಪಂಚೆ ಉಟ್ಟರು. ಬಾಲದಂತೆ ಹಿಂದೆ ಕುಚ್ಚನ್ನು ಇಳಿಬಿಟ್ಟರು. ಯಾವಾಗಲೂ 'ರಘುವೀರ'

ಎಂದು ಚಿಂತಿಸುತ್ತಿದ್ದರು. ಮರದ ಮೇಲೆ ವಾಸ ಮಾಡುತ್ತಿದ್ದರು. ಗೆಡ್ಡೆಗೆಣಸುಗಳನ್ನು ತಿನ್ನುತ್ತಿದ್ದರು. ಒಂದು ದಿನ ಅವರಿಗೆ ಒಂದು ಅಪೂರ್ವ ದೃಶ್ಯ ಕಂಡಿತು. ಒಂದು ಅಪೂರ್ವ ಜ್ಯೋತಿರ್ಮಯ ಸ್ತ್ರೀ ಮೂರ್ತಿ ಗೋಚರಿಸಿತು. ಅವಳಲ್ಲಿ ಪ್ರೇಮ ಕರುಣೆ ಸಹನೆ ದುಃಖಭಾವಗಳು ಘನೀಭೂತವಾದಂತಿದ್ದವು. ಕೆಲವು ಕ್ಷಣದಲ್ಲಿ ಕಪಿಯೊಂದು ನೆಗೆದು ಅವಳ ಪದತಳದಲ್ಲಿ ಕುಳಿತುಕೊಂಡಿತು. ತಕ್ಷಣವೇ ಆ ಮೂರ್ತಿ, ಆಜನ್ಮದುಃಖಿನಿ, ರಾಮನ ಸಹಧರ್ಮಿಣಿ, ಪತಿವ್ರತಾ ಶಿರೋಮಣಿ ಸೀತಾ ಎಂದು ಗೊತ್ತಾಯಿತು. ಆ ವ್ಯಕ್ತಿ ಇವರ ಬಳಿಗೆ ಬಂದು ಇವರಲ್ಲಿ ಐಕ್ಯವಾಯಿತು.

ಹಲಧಾರಿ ಎಂಬ ಒಬ್ಬ ಪಂಡಿತ ದಕ್ಷಿಣೇಶ್ವರದಲ್ಲಿ ಸ್ವಲ್ಪ ಕಾಲದಿಂದ ಇದ್ದ. ಆತ ಪಂಡಿತ, ಆಚಾರಶೀಲ ಬ್ರಾಹ್ಮಣ. ಆತ ಶ್ರೀರಾಮಕೃಷ್ಣರನ್ನು ಆ ದೃಷ್ಟಿಕೋನದಿಂದ ನೋಡುತ್ತಾನೆ. ಶ್ರೀರಾಮಕೃಷ್ಣರನ್ನು ಅವನು ಅರ್ಥಮಾಡಿಕೊಳ್ಳದೆ ಹೋದ. ಶ್ರೀರಾಮಕೃಷ್ಣರು ದಕ್ಷಿಣೇಶ್ವರ ಕಾನನದಲ್ಲಿ ತಪಸ್ಸು ಮಾಡುವಾಗ ಜನಿವಾರ ಬಟ್ಟೆ ಮುಂತಾದುವನ್ನೆಲ್ಲ ತೆಗೆದಿಟ್ಟು ದಿಗಂಬರರಾಗಿ ಧ್ಯಾನ ಮಾಡುತ್ತಿದ್ದರು. ಏಕೆಂದರೆ ಇವೆಲ್ಲ ಒಬ್ಬನಿಗೆ ತಾನು ಬ್ರಾಹ್ಮಣ ಎಂಬ ಹೆಮ್ಮೆಯನ್ನು ತರುವುದು ಎಂದು. ಹಲಧಾರಿ ಇದನ್ನು ನೋಡಿ ಹೃದಯನಿಗೆ ಹೇಳುತ್ತಾನೆ : "ಶ್ರೀರಾಮಕೃಷ್ಣರು ಧ್ಯಾನ ಮಾಡುವಾಗ ಜನಿವಾರ ಬಟ್ಟೆ ಮುಂತಾದುವನ್ನೆಲ್ಲ ತೆಗೆದಿಡುತ್ತಾನೆ. ಎಷ್ಟೋ ಜನ್ಮಗಳ ಸಂಚಿತ ಪುಣ್ಯಕರ್ಮದಿಂದ ಒಬ್ಬ ಬ್ರಾಹ್ಮಣನಾಗಿ ಹುಟ್ಟುತ್ತಾನೆ. ಇವನು ಇದನ್ನೆಲ್ಲ ಗಣನೆಗೇ ತೆಗೆದುಕೊಳ್ಳದೆ ಇರುವನು. ನೀನಾದರೂ ಅವರಿಗೆ ಸ್ವಲ್ಪ ಬುದ್ಧಿ ವಾದವನ್ನು ಹೇಳು." ಶ್ರೀರಾಮಕೃಷ್ಣರು ತಮ್ಮಲ್ಲಿ ತಾವು ಎಲ್ಲರಿಗಿಂತ ದೀನ ಎಂಬ ಭಾವವನ್ನು ಪಡೆಯುವುದಕ್ಕಾಗಿ

ಜಲಗಾರರ ಮನೆಯ ಕಕ್ಕಸ್ಸನ್ನು ಶುಚಿಮಾಡಿ ಅದನ್ನು ನೀರಿನಿಂದ ತೊಳೆದು, ತಮ್ಮ ನೀಳವಾದ ಕೇಶಗಳಿಂದ ಅದನ್ನು ಒರಸುತ್ತಿದ್ದರು. ಈ ದೃಶ್ಯವನ್ನು ಆ ಪಂಡಿತನೇನಾದರೂ ನೋಡಿದ್ದರೆ ಮೂರ್ಛಿತ ನಾಗಿಯೇ ಹೋಗುತ್ತಿದ್ದ ಎಂದು ಭಾವಿಸಬಹುದು. ಈ ಪಂಡಿತ ಶ್ರೀರಾಮಕೃಷ್ಣರನ್ನು ಇನ್ನೂ ಹಲವು ರೀತಿ ಕಾಡಿದ. ಆ ಕೆಲವು ಘಟನೆಗಳು ಚಿತ್ತಾಕರ್ಷಕವಾಗಿವೆ. ಆತ ಒಂದು ಸಲ ಶ್ರೀರಾಮ ಕೃಷ್ಣರನ್ನು ತಮೋಗುಣಿ ಕಾಳಿಯ ಉಪಾಸನೆಯಿಂದ ಯಾರಾದರೂ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದಿರುವರೆ ಎಂದು ಟೀಕಿಸಿದ. ಶ್ರೀರಾಮಕೃಷ್ಣರು ಗುಡಿಗೆ ಹೋಗಿ ತಾಯಿಯ ಮುಂದೆ, "ಹಲಧಾರಿ ನಿನ್ನನ್ನು ತಮೋಗುಣಿ ಎನ್ನುತ್ತಾನಲ್ಲ?" ಎಂದು ಪ್ರಶ್ನಿಸಿದರು. ಆಗ ತಾಯಿ, ತಾನು ತಮೋಗುಣ ಮಾತ್ರವಲ್ಲ, ರಜಸ್ ಮತ್ತು ಸತ್ತ್ವಗುಣಗಳೂ ಆಗಿರುವೆನು ಮತ್ತು ಆ ಗುಣಗಳಿಗೆ ಅತೀತಳೂ ಆಗಿರುವೆನು ಎಂದು ಹೇಳಿದಳು.

ಮತ್ತೊಮ್ಮೆ ದೀನದರಿದ್ರರು ಊಟ ಮಾಡಿ ಹೋದಮೇಲೆ ಅವರ ಎಂಜಲನ್ನು ಇದು ದರಿದ್ರನಾರಾಯಣನ ಪ್ರಸಾದ ಎಂದು ತೆಗೆದುಕೊಂಡರು. ಇದನ್ನು ನೋಡಿದ ಹಲಧಾರಿ 'ಕುಲಗೆಟ್ಟ ನಿನ್ನ ಮಕ್ಕಳನ್ನು ಯಾರು ಮದುವೆಯಾಗುತ್ತಾರೊ ನೋಡುತ್ತೇನೆ' ಎಂದ. ಆಗ ಶ್ರೀರಾಮಕೃಷ್ಣರು "ಮೂರ್ಖ, ನೀನೇ ಅಲ್ಲವೆ ಹೇಳುವುದು ಬ್ರಹ್ಮ ಒಂದೇ ಸತ್ಯ, ಜಗತ್ತು ಮಿಥ್ಯ ಎಂದು. ನಾನು ಹಾಗೆ ತಿಳಿದುಕೊಂಡಿದ್ದೂ ಮಕ್ಕಳನ್ನು ಹುಟ್ಟಿಸು ತ್ತೇನೆ ಎಂದು ತಿಳಿದೆಯಾ? ಸುಡು ನಿನ್ನ ಶಾಸ್ತ್ರಪಾಂಡಿತ್ಯವನ್ನು" ಎಂದರು. ಇನ್ನೊಂದು ಸಲ ಇದೇ ಪಂಡಿತ ಶ್ರೀರಾಮಕೃಷ್ಣರಿಗೆ ಆದ ದಿವ್ಯ ಅನುಭವಗಳೆಲ್ಲ ಭ್ರಾಂತಿ ಎಂದು ಶ್ಲೋಕಗಳನ್ನು

ಉದಹರಿಸಿ ವಿವರಿಸತೊಡಗಿದ. ಶ್ರೀರಾಮಕೃಷ್ಣರು ಸಣ್ಣ ಮಗುವಿನಂತೆ ದೇವಿ ಬಳಿಗೆ ಓಡಿ 'ತಾಯಿ ಇದೆಲ್ಲ ಏನು ಭ್ರಾಂತಿಯೆ' ಎಂದು ಅತ್ತರು. ಆಗ ತಾಯಿ ಇವೆಲ್ಲ ಜಗತ್ತು ಎಷ್ಟು ನಿಜವೋ ಅಷ್ಟೇ ನಿಜ ಎಂದು ಸಮಾಧಾನ ಮಾಡಿದಳು. ಅಂದರೆ ಭಾವರಾಜ್ಯದಲ್ಲಿ ಇವುಗಳೆಲ್ಲ ಸತ್ಯ. ಕಾಲದೇಶ ನಿಮಿತ್ತಕ್ಕೆ ಅತೀತರಾಗಿ ಹೋದರೆ ಇರುವುದು ಅಖಂಡ ಬ್ರಹ್ಮನೊಂದೆ. ಅಲ್ಲಿ ಹಲವದರ ಮಾತೇ ಇಲ್ಲ.

ಇದೇ ಸಮಯದಲ್ಲಿ ಶ್ರೀರಾಮಕೃಷ್ಣರು ಗಂಗಾನದಿಯ ದಡದಮೇಲೆ ಕುಳಿತುಕೊಂಡು ಒಂದು ಕೈಯಲ್ಲಿ ಹಣ ಮತ್ತೊಂದು ಕೈಯಲ್ಲಿ ಮಣ್ಣನ್ನು ಹಿಡಿದುಕೊಂಡು ಹಣವನ್ನು ನೋಡಿ, "ಇದೇ ಹಣ, ಇದು ಪ್ರಪಂಚದ ಸುಖಭೋಗಗಳನ್ನು ಕೊಡುವುದು. ಜನ ಹುಚ್ಚರಾಗಿ ಇದನ್ನು ಹುಡುಕುತ್ತಿರುವರು. ಆದರೆ ಇದರಿಂದ ದೇವರು ದೊರಕುವುದಿಲ್ಲ. ಇದು ಆಧ್ಯಾತ್ಮಿಕ ದೃಷ್ಟಿಯಿಂದ ಮಣ್ಣಿಗೆ ಸಮ" ಎಂದು ಎರಡನ್ನೂ ಗಂಗಾನದಿಗೆ ಬಿಸುಟರು.

ಮಥುರನಾಥರಿಗೆ ಶ್ರೀರಾಮಕೃಷ್ಣರ ಮೇಲೆ ಮೊದಲಿನಿಂದಲೂ ಅಪೂರ್ವವಾದ ಶ್ರದ್ಧೆ ಭಕ್ತಿಗಳು ಇದ್ದವು. ಆದರೆ ಅವರಿಗಾದ ಅನುಭವಗಳನ್ನು ಇವನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಮುಂದುವರಿದ ಸಾಧಕನಾಗಿದ್ದರೆ ಅವನು ಅರ್ಥಮಾಡಿಕೊಳ್ಳುತ್ತಿದ್ದ. ಆದರೆ ಅವನು ಆ ಗುಂಪಿಗೆ ಸೇರಿದವನಲ್ಲ. ಶ್ರೀರಾಮಕೃಷ್ಣರಲ್ಲಿ ದೇವರ ಭಕ್ತಿಯು ಜೊತೆಗೆ ಸ್ವಲ್ಪ ಮನೋದೌರ್ಬಲ್ಯವೂ ಬೆರತಿರಬೇಕೆಂದು ತನ್ನ ಮನೆಯಲ್ಲಿ ಅವರನ್ನು ಇಟ್ಟುಕೊಂಡು ವೈದ್ಯರಿಂದ ಔಷಧಿಯನ್ನು ಕೊಡಿಸಿದ. ಆದರೆ ಶ್ರೀರಾಮಕೃಷ್ಣರ ದೈವೋನ್ಮಾದವನ್ನು ತಗ್ಗಿಸುವ ಔಷಧ

ಯಾವ ಪಂಡಿತನ ಹತ್ತಿರ ಇರಬಲ್ಲದು. ದೀರ್ಘಕಾಲದ ಬ್ರಹ್ಮ ಚರ್ಯದಿಂದ ಈ ಹುಡುಗ ಹೀಗೆ ಆಗಿರಬೇಕು. ಅದು ಸ್ವಲ್ಪ ಸಡಿಲ ವಾದರೆ ಇವರು ಸ್ವಲ್ಪ ಸಾಧಾರಣ ಸ್ಥಿತಿಗೆ ಇಳಿಯಬಲ್ಲರೆಂದು ಒಂದು ದಿನ ಒಬ್ಬ ವೇಶ್ಯೆಯ ಮನೆಗೆ ಕರೆದುಕೊಂಡು ಹೋಗಿ, ಅವಳಿಗೆ ಶ್ರೀರಾಮಕೃಷ್ಣರ ಮೇಲೆ ತನ್ನ ಪ್ರಭಾವವನ್ನು ಬೀರುವಂತೆ ಹೇಳಿದ. ಶ್ರೀರಾಮಕೃಷ್ಣರು ಒಬ್ಬರೇ ಇರುವಾಗ ಆಕೆಯನ್ನು ನೋಡಿದೊಡನೆ ಜಗನ್ಮಾತೆಯ ಜ್ಞಾಪಕ ಬಂದು ಆಕೆಯನ್ನು ತಾಯಿ ಎಂದು ಕರೆದರು. ಈ ಮಾತು ಅವರ ಬಾಯಿಂದ ಬಂದುದೇ ತಡ ಆ ವೇಶ್ಯೆ ಹೃದಯದಲ್ಲಿ ತಾಯಿಯ ವಾತ್ಸಲ್ಯ ಮೂಡಿತು. ಶ್ರೀರಾಮಕೃಷ್ಣರನ್ನು ಪೂಜ್ಯದೃಷ್ಟಿಯಿಂದ ನೋಡಿ, ಇಂತಹ ದೈವಭಕ್ತನನ್ನು ಕೆಡಿಸಲು ಇಲ್ಲಿಗೆ ಕರೆದು ತಂದಿರುವೆಯಲ್ಲ ಎಂದು ಆಕೆ ಮಥುರನಾಥನನ್ನೇ ಜರಿದಳು. ಆಕೆ ತಾನು ಮಹಾಪಾತಕ ಮಾಡಿರುವಳೆಂದು ತನ್ನನ್ನು ಉದ್ಧಾರ ಮಾಡಬೇಕೆಂದು ಶ್ರೀರಾಮಕೃಷ್ಣರ ಪಾದಗಳಿಗೆ ಕಣ್ಣೀರು ಕರೆಯುತ್ತ ಮಣಿದಳು. ಆಕೆ ತನ್ನ ಪ್ರಭಾವವನ್ನು ಬೀರುವುದಿರಲಿ, ಶ್ರೀರಾಮಕೃಷ್ಣರ ಪ್ರಭಾವದ ಹುಚ್ಚುಹೊಳೆಯೊಳಗೆ ಅವಳೇ ಕೊಚ್ಚಿಕೊಂಡು ಹೋದಳು.

ಶ್ರೀರಾಮಕೃಷ್ಣರು ದೇವರ ಹೆಸರಿನಲ್ಲಿ ಹುಚ್ಚರಾಗಿ ಹೋಗಿರುವರು ಎಂಬ ಸುದ್ದಿ ಕಾಮಾರಪುಕುರದಲ್ಲಿದ್ದ ಅವರ ತಾಯಿಗೆ ತಿಳಿಯಿತು. ಅವರು ಮಗನನ್ನು ತಮ್ಮ ಹಳ್ಳಿಗೆ ಕರೆಸಿಕೊಂಡು ಔಷಧೋಪಚಾರಗಳನ್ನು ಮಾಡಿದರು. ದೇಹದ ಸ್ಥಿತಿ ಉತ್ತಮಗೊಂಡರೂ ದೇವರ ಮೇಲಿನ ಹುಚ್ಚು ಮಾತ್ರ ಇವರನ್ನು ಬಿಟ್ಟುಹೋಗಲಿಲ್ಲ. ಆಗ ಒಬ್ಬ ಮಂತ್ರವಾದಿ ಯನ್ನು ಕರೆಸಿದರು. ಆತ ಒಂದು ಭೂತವನ್ನು ಬರುವಂತೆ

ಮಾಡಿದ. ಅದು ಹೇಳಿದ ಉತ್ತರದಲ್ಲಿ ಶ್ರೀರಾಮಕೃಷ್ಣರದು ಹುಚ್ಚಲ್ಲ. ಅದು ಭಗವತ್ ಭಕ್ತಿಯ ಆಧಿಕ್ಯ ಎಂದು ಹೇಳಿತು. ಅಂತು ಏನೇನೋ ಮಾಡಿದರು. ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ಯಾರೊ ಬುದ್ಧಿವಂತರು ಸೂಚಿಸಿದರು. ಆಗ ಶ್ರೀರಾಮಕೃಷ್ಣರಿಗೆ ೨೩ ವಯಸ್ಸು. ಅವರಿಗೆ ಯಾವುದಾದರೂ ಹುಡುಗಿಯೊಂದಿಗೆ ಮದುವೆ ಮಾಡಿಬಿಟ್ಟರೆ ಹುಚ್ಚೆಲ್ಲ ಬಿಟ್ಟು ಹೋಗುವುದು ಎಂದು. ಚಂದ್ರಮಣಿ ಶ್ರೀರಾಮಕೃಷ್ಣರಿಗೆ ಹೇಳದೆ ಒಂದು ಹೆಣ್ಣನ್ನು ಹುಡುಕಲು ಮೊದಲುಮಾಡಿದರು. ಎಲ್ಲಿಯೂ ಸರಿಯಾದ ಹೆಣ್ಣು ಸಿಕ್ಕಲಿಲ್ಲ. ತುಂಬಾ ವ್ಯಥೆ ಪಡುತ್ತಿದ್ದರು ತಾಯಿ. ಒಂದು ದಿನ ಶ್ರೀರಾಮಕೃಷ್ಣರು ತಾಯಿಯ ವ್ಯಥೆಗೆ ಕಾರಣವನ್ನು ಕೇಳಲಾಗಿ ಅವರು ವಿಧಿಯಿಲ್ಲದೆ ಕಾರಣ ಹೇಳಲೇಬೇಕಾಗಿ ಬಂತು. ಅವರು ಹೇಳಿದರು ನಿನಗೆ ಮದುವೆ ಮಾಡಬೇಕೆಂದು ಒಂದು ಹೆಣ್ಣನ್ನು ಹುಡುಕುತ್ತಿರುವೆವು. ಆದರೆ ಎಲ್ಲಿಯೂ ಸಿಕ್ಕಲಿಲ್ಲ ಎಂದು. ಆಗ ಶ್ರೀರಾಮಕೃಷ್ಣರು "ನೀವು ನನಗೆ ಮದುವೆ ಮಾಡಬೇಕಾದರೆ ಹೆಣ್ಣನ್ನು ಎಲ್ಲೆಲ್ಲೊ ಹುಡುಕಿದರೆ ಸಿಕ್ಕುವುದೆ. ಜಯರಾಮವಟಿಯಲ್ಲಿ ರಾಮಚಂದ್ರ ಮುಖ್ಯೋಪಾಧ್ಯಾಯರ ಮನೆಯಲ್ಲಿ ನನಗೊಂದು ಹೆಣ್ಣು ಬೆಳೆಯುತ್ತಿದೆ. ಅಲ್ಲಿ ವಿಚಾರಿಸಿ" ಎಂದರು. ಹುಡುಗನ ಮಾತಿನಲ್ಲಿ ಕೇಳಿದವರಿಗೆ ನಂಬಿಕೆ ಇರಲಿಲ್ಲ. ಅಂತೂ ಒಂದು ಸಲ ವಿಚಾರಿಸಿ ನೋಡೋಣ ಎಂದು ಆ ಊರಿಗೆ ಹೋದರು. ಅಲ್ಲಿ ವಿಚಾರಿಸಿದಾಗ ಅವರ ಮನೆಯಲ್ಲಿ ಶಾರದೆ ಎಂಬ ಐದು ವರುಷದ ಹುಡುಗಿ ಇದ್ದಳು. ಆಗ ರಾಮಕೃಷ್ಣರಿಗೆ ೨೩ ವಯಸ್ಸು. ಇಂತಹ ಗೊಂಬೆಯೊಂದಿಗೆ ಆಟವಾಡುವ ಹುಡುಗಿಯನ್ನು ಕಟ್ಟಿದರೆ ಹುಚ್ಚು ಇಳಿಯುವುದೇ ಎಂಬ ಸಂದೇಹ.

ಆದರೆ ಸಣ್ಣದೋ ದೊಡ್ಡದೋ ಅಂತೂ ಒಂದು ಹೆಣ್ಣು ತಾನೆ. ಗಂಡಸಿಗೆ ಒಂದು ಹೆಣ್ಣು ಸಾಕು ಅವನ ದೇವರ ಹಂಚ್ಕನ್ನು ಬಿಡಿಸಲು ಎಂದು ನಿರ್ಧರಿಸಿದರು. ಲಗ್ನ ನಿಶ್ಚಯವಾಯಿತು. ಶ್ರೀರಾಮಕೃಷ್ಣರ ತಾಯಿ ತನ್ನ ಮುದ್ದು ಸೊಸೆಗೆ ಮದುವೆ ಸಮಯದಲ್ಲಿ ಮೈತುಂಬಾ ಆಭರಣ ಹಾಕಿ ಧಾರೆ ಎರೆಸಿಕೊಳ್ಳ ಬೇಕೆಂದು ಆಸೆ. ಅದಕ್ಕಾಗಿ ಅವರು ಒಬ್ಬ ಶ್ರೀಮಂತರ ಮನೆಯಿಂದ ನಗನಾಣ್ಯಗಳನ್ನು ಎರವಲಾಗಿ ತಂದು ಸೊಸೆಗೆ ತೊಡಿಸಿದರು. ಎರಡು ದಿನಗಳಾದ ಮೇಲೆ ಆ ಒಡವೆಗಳನ್ನು ಹಿಂತಿರುಗಿ ಕೊಡಬೇಕಾದ ಸಮಯ ಬಂತು. ಚಂದ್ರಮಣಿ ಶ್ರೀ ಶಾರದಾದೇವಿ ಅವರನ್ನು ಒಡವೆ ಕೇಳಿದರು. ಆ ಹುಡುಗಿ ಕೊಡಲು ಒಪ್ಪಲಿಲ್ಲ. ಅಳಲು ಮೊದಲುಮಾಡಿತು. ತಾಯಿ ಪರಿಸ್ಥಿತಿಯನ್ನು ಶ್ರೀರಾಮಕೃಷ್ಣರಿಗೆ ವಿವರಿಸಿದಳು. ಶ್ರೀರಾಮ ಕೃಷ್ಣರು ತಾಯಿಗೆ ಸಮಾಧಾನಮಾಡಿದರು. ರಾತ್ರಿ ಶ್ರೀಶಾರದಾ ದೇವಿ ಮಲಗಿರುವಾಗ ಅವರಿಗೆ ಸ್ವಲ್ಪವೂ ಎಚ್ಚರವಾಗದ ರೀತಿಯಲ್ಲಿ ಶ್ರೀರಾಮಕೃಷ್ಣರು ತಮ್ಮ ಹೆಂಡತಿಯ ಮೇಲೆ ತೊಡಿಸಿದ ನಗಗಳನ್ನೆಲ್ಲ ಬಿಚ್ಚಿ ತಾಯಿಗೆ ಕೊಟ್ಟರು. ಆಕೆ ತಂದ ಮನೆಗೆ ಅದನ್ನು ತಲುಪಿಸಿದರು. ಮಾರನೆ ದಿನ ಬೆಳಿಗ್ಗೆ ಶ್ರೀಶಾರದಾದೇವಿ ಎದ್ದಾಗ ತಮ್ಮ ಮೈಮೇಲೆ ಇದ್ದ ಒಡವೆ ಗಳೆಲ್ಲ ಮಾಯವಾಗಿದ್ದವು. ಅವರು ತಮ್ಮ ತಾಯಿ ಮತ್ತು ತಂದೆಗೆ ಹೇಳಿದರು. ಆಗ ಒಂದು ದೊಡ್ಡ ಗೊಂದಲವೇ ಆಯಿತು. ಅವರು ಹುಡುಗಿಯನ್ನು ಎತ್ತಿಕೊಂಡು ಹೊರಟೇ ಹೋದರು. ಶ್ರೀರಾಮಕೃಷ್ಣರಿಗೆ ಇದು ಗೊತ್ತಾದಾಗ ಅವರು ಹಾಸ್ಯವಾಗಿ ಹೇಳಿದರು: "ಈಗ ಹೆಂಡತಿಯನ್ನು ಅವರು ಹೊತ್ತುಕೊಂಡು ಹೋದರೆ ಏನಾಯಿತು. ಆಗಿರುವ ಮದುವೆ ಯನ್ನು ರದ್ದುಮಾಡಲಾಗುವುದೆ!"

ಶ್ರೀರಾಮಕೃಷ್ಣರು ಮದುವೆಗೆ ಬಂದವರು ಸುಮಾರು ಒಂದೂವರೆ ವರುಷವನ್ನು ತಮ್ಮ ಹಳ್ಳಿಯಲ್ಲೆ ಕಳೆದರು. ಅನಂತರ ದಕ್ಷಿಣೇಶ್ವರಕ್ಕೆ ಹೊರಟರು. ಅಲ್ಲಿಗೆ ಹೋದೊಡನೆಯೆ ಮತ್ತೊಂದು ಆಧ್ಯಾತ್ಮಿಕ ಸುಂಟರ ಗಾಳಿಯಲ್ಲಿ ಸಿಕ್ಕಿಕೊಂಡರು. ನೆಂಟರು ಇಷ್ಟರು ಎಲ್ಲರನ್ನೂ ಮರೆತರು. ಬಾಹ್ಯಪ್ರಪಂಚದ ಅರಿವೇ ಅವರಿಗೆ ಇರುತ್ತಿರಲಿಲ್ಲ. ದಿನದ ಬಹುಭಾಗವೆಲ್ಲ ಯಾವುದಾದರೂ ಒಂದು ಭಾವದಲ್ಲಿ ತಲ್ಲೀನರಾಗುತ್ತಿದ್ದರು. ಆರು ವರುಷಗಳವರೆಗೆ ಅತ್ಯಂತ ಕಠಿಣವಾದ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ್ದರು.

ಒಂದು ದಿನ ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ತಮ್ಮ ಕೋಣೆಯಲ್ಲಿದ್ದಾಗ ಗಂಗಾನದಿಯ ತೀರದಲ್ಲಿ ಸುಮಾರು ನಲವತ್ತು ವಯಸ್ಸಿನ ಮಹಾತೇಜಸ್ವಿ ಸ್ತ್ರೀಯೊಬ್ಬಳು ದೋಣಿ ಯಿಂದ ಇಳಿಯುತ್ತಿದ್ದುದನ್ನು ಕಂಡರು. ಶ್ರೀರಾಮಕೃಷ್ಣರು ತಮ್ಮ ಹತ್ತಿರ ಇದ್ದ ಹೃದಯನಿಗೆ ಆ ಸ್ತ್ರೀಯನ್ನು ಇಲ್ಲಿಗೆ ಕರೆದುಕೊಂಡು ಬರುವಂತೆ ಹೇಳಿಕಳುಹಿಸಿದರು. ಹೃದಯ ಹೇಳಿದೊಡನೆಯೆ ಆಕೆ ಶ್ರೀರಾಮಕೃಷ್ಣರ ಬಳಿಗೆ ಬಂದಳು. ಶ್ರೀರಾಮಕೃಷ್ಣರನ್ನು ಕಂಡೊಡನೆಯೇ ಆಕೆ, "ನೀನು ಇಲ್ಲಿರುವೆಯಾ? ನಾನು ಎಲ್ಲೆಲ್ಲೊ ನಿನಗಾಗಿ ಹುಡುಕಾಡು ತ್ತಿದ್ದೆ" ಎಂದಳು. ಆಕೆಯು ಭೈರವಿ ಬ್ರಾಹ್ಮಣಿ ಎಂಬ ಸನ್ಯಾಸಿನಿ. ಮಹಾ ವಿದ್ವಾಂಸೆ. ದೊಡ್ಡ ಸಾಧಿಕೆ. ತಾವು ಈ ಜನ್ಮದಲ್ಲಿ ಶ್ರೀರಾಮಕೃಷ್ಣರ ಸಾಧನೆಗೆ ಸಹಾಯಕವಾಗುವುದು ದೇವರ ನಿಯಾಮಕ ಎಂದು ಆಕೆ ಅರಿತಳು. ಶ್ರೀರಾಮ ಕೃಷ್ಣರಿಗೆ ಇದುವರೆಗೂ ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿ ದವರ ಪರಿಚಯ ಆಗಿರಲಿಲ್ಲ. ಅವರನ್ನು ಪ್ರೀತಿಸುತ್ತಿದ್ದವರು

ಇದ್ದರು. ಅವರನ್ನು ಸಂದೇಹ ಪಡುತ್ತಿದ್ದ ಪಂಡಿತರಿದ್ದರು. ಆದರೆ ಅವರಿಬ್ಬರಿಗೂ ಶ್ರೀ ರಾಮಕೃಷ್ಣರನ್ನು ತಿಳಿದುಕೊಳ್ಳು ವುದಕ್ಕೆ ಸಾಧ್ಯವಿರಲಿಲ್ಲ. ಶ್ರೀರಾಮಕೃಷ್ಣರು ತಮಗಾದ ಆಧ್ಯಾ ತ್ಮಿಕ ಭಾವನೆಗಳನ್ನೆಲ್ಲ ಭೈರವಿ ಬ್ರಾಹ್ಮಣಿಗೆ ನಿಸ್ಸಂಕೋಚ ವಾಗಿ ಹೇಳತೊಡಗಿದರು. ಜನ ತಮ್ಮನ್ನು ಹುಚ್ಚರೆನ್ನುತ್ತಿರು ವರು ಎಂದರು. ಆಗ ಭೈರವಿ ಬ್ರಾಹ್ಮಣಿ ಅದು ಹುಚ್ಚಲ್ಲ, ಮಹಾಭಾವ. ಚೈತನ್ಯರಿಗೆ ಅದು ಇತ್ತು ಎಂದಳು. ಮಥುರ ನಾಥನಿಗೆ ಹೇಳಿ ದಕ್ಷಿಣೇಶ್ವರದಲ್ಲಿ ಒಂದು ದೊಡ್ಡ ಪಂಡಿತರ ಚರ್ಚೆಯನ್ನು ಅಣಿಮಾಡಿದರು. ಕಲ್ಕತ್ತೆಯ ಪ್ರಖ್ಯಾತ ವಿದ್ವಾಂಸ ವೈಷ್ಣವಚರಣ ಎನ್ನುವನೂ ಅಲ್ಲಿಗೆ ಬಂದಿದ್ದ. ಭೈರವಿ ಬ್ರಾಹ್ಮಣಿ ತುಂಬಿದ ಸಭೆಯಲ್ಲಿ ಶ್ರೀರಾಮಕೃಷ್ಣರ ಭಾವ ಶ್ರೀ ಚೈತನ್ಯರೇ ಮುಂತಾದ ಎಲ್ಲೋ ಕೆಲವು ಅವತಾರ ಗಳಲ್ಲಿ ಆವಿರ್ಭವಿಸುವ ಮಹಾಭಾವ ಎಂದು ಪ್ರಮಾಣವಾಗಿ ತೋರಿದಳು. ಈಕೆಯ ವಿದ್ವತ್ತಿಗೆ ಜನ ಮಾರುಹೋದರು. ಎಲ್ಲರೂ ಆಕೆ ಹೇಳಿದುದನ್ನು ಒಪ್ಪಿಕೊಂಡರು. ಶ್ರೀರಾಮ ಕೃಷ್ಣರು ಒಬ್ಬ ಅವತಾರಪುರುಷರೇ ಇರಬೇಕು ಎಂದು ತೀರ್ಮಾನಿಸಿದರು. ಆದರೆ ಇದನ್ನೆಲ್ಲ ಮಗುವಿನಂತೆ ನೋಡು ತ್ತಿದ್ದ ಶ್ರೀರಾಮಕೃಷ್ಣರಾದರೋ ನಕ್ಕು ಹೇಳಿದರು "ಅವತಾರವೊ ಅಲ್ಲವೊ, ಅಂತು ಇದು ಹುಚ್ಚಲ್ಲ ಎನ್ನುವುದು ಸತ್ಯವಾಯಿತಲ್ಲ, ಸಾಕು ಅಷ್ಟು!"

ಶ್ರೀ ರಾಮಕೃಷ್ಣರ ಮೈಯೆಲ್ಲ ಉರಿಯುತ್ತಿತ್ತು. ಮಥುರ ನಾಥ ಕವಿರಾಜರ ಕೈಯಿಂದ ಯಾವ ಔಷಧಿಯನ್ನು ಕೊಟ್ಟರೂ ಪ್ರಯೋಜನವಾಗಲಿಲ್ಲ. ಭೈರವಿ ಅವನಿಗೆ ಒಂದು ಸೋಜಿಗದ ಔಷಧಿಯನ್ನು ಸೂಚಿಸಿದಳು. ಅದೇ ಕೊರಳಿಗೆ ಹೂವಿನ

ಮಾಲೆ, ಮೈಗೆಲ್ಲ ಗಂಧದ ಲೇಪನ. ಮೊದಲು ಮಥುರನಾಥನಿಗೆ ನಗು. ಪಂಡಿತರ ಕಷಾಯ ತೈಲಗಳಿಗೆ ಜಗ್ಗದ ರೋಗ ಭೈರವಿಯ ಮಾಲೆ ಮತ್ತು ಚಂದನಕ್ಕೆ ಬಾಗುವುದೇ ಎಂದು. ಆದರೆ ಅದನ್ನು ಪ್ರಯೋಗ ಮಾಡಿದಾಗ ಶ್ರೀರಾಮಕೃಷ್ಣರು ಗುಣಮುಖರಾದರು.

ಭೈರವಿ ಶ್ರೀರಾಮಕೃಷ್ಣರಿಗೆ ತಾಂತ್ರಿಕ ಸಾಧನೆಗೆ ಸಹಾಯ ಮಾಡಿದಳು. ಅಪರೂಪ ಈ ದಾರಿಯಲ್ಲಿ ಜಾರದೆ ಮುಂದುವರಿದವರು. ಆದರೆ ಶ್ರೀರಾಮಕೃಷ್ಣರು ಭೈರವಿ ಬ್ರಾಹ್ಮಣಿಯ ನೇತೃತ್ವದಲ್ಲಿ ಆದಕ್ಕೆ ಸಂಬಂಧಪಟ್ಟ ಸಾಧನೆಯನ್ನೆಲ್ಲ ಮಾಡಿ ಸಾಧನೆಯ ತುತ್ತತುದಿಯಾದ ಜಗನ್ಮಾತೆಯ ಅನುಭವದಲ್ಲಿ ಪ್ರತಿಷ್ಠಿತರಾದರು.

ಹಲವು ಬಗೆಯ ಸಾಧುಗಳು ದಕ್ಷಿಣೇಶ್ವರಕ್ಕೆ ಬರುತ್ತಿದ್ದರು. ಅವರಲ್ಲಿ ಜಟಾಧಾರಿ ಎಂಬ ರಾಮಭಕ್ತ ಬಾಲ್ಯದಿಂದಲೂ ಶ್ರೀರಾಮಚಂದ್ರನನ್ನು ತನ್ನ ಇಷ್ಟಮೂರ್ತಿಯಾಗಿ ಉಪಾಸನೆ ಮಾಡುತ್ತಿದ್ದ. ಎಲ್ಲಿಗೆ ಹೋದರೂ ಅವನು ಒಂದು ಬಾಲ ಶ್ರೀರಾಮಚಂದ್ರನ ವಿಗ್ರಹವನ್ನು ತೆಗೆದುಕೊಂಡು ಹೋಗುತ್ತಿದ್ದ. ಆದರೆ ಅವನ ಪಾಲಿಗೆ ಅದು ವಿಗ್ರಹವಾಗಿರಲಿಲ್ಲ, ಸಚೇತನವಾಗಿತ್ತು. ಶ್ರೀರಾಮ ಸಣ್ಣ ಹುಡುಗನಾಗಿ ಜಟಾಧಾರಿಯೊಂದಿಗೆ ಆಡುತ್ತಿದ್ದ. ಅವನ ಹೃದಯವನ್ನು ಪರಮಾನಂದದಲ್ಲಿ ತುಂಬಿದ್ದ. ಇದು ಹೊರಗಿನಿಂದ ನೋಡಿದವರಿಗೆ ಗೊತ್ತಾಗುತ್ತಿರಲಿಲ್ಲ. ಆದರೆ ಶ್ರೀರಾಮಕೃಷ್ಣರು ಜಟಾಧಾರಿಯನ್ನು ನೋಡಿದೊಡನೆ ಅವನ ಮೇಲೆ ಆಕರ್ಷಿತರಾದರು. ಅವನ ಹತ್ತಿರ ಬಹಳಕಾಲ ಮಾತುಕತೆ ಆಡುತ್ತಿದ್ದರು. ಅವನಿಂದ ಶ್ರೀರಾಮಚಂದ್ರನ ಮಂತ್ರವನ್ನು ಉಪದೇಶ

ಪಡೆದು ಸಾಧನೆ ಮಾಡತೊಡಗಿದರು. ಅನಂತರ ರಾಮಲಾಲ ಇವರ ಕಣ್ಣಿಗೂ ಕಾಣತೊಡಗಿದನು. ಅವರಿಗೂ ಶ್ರೀರಾಮ ಕೃಷ್ಣರಿಗೂ ಇದ್ದ ಸಂಬಂಧವನ್ನು ಶ್ರೀರಾಮಕೃಷ್ಣರ ಮಾತಿನಲ್ಲೆ ಕೇಳೋಣ :

ದಿನಕಳೆದಂತೆ ರಾಮಲಾಲನ ಪ್ರೀತಿ ನನ್ನ ಮೇಲೆ ಹೆಚ್ಚ ತೊಡಗಿತು. ನಾನು ಜಟಾಧಾರಿಯೊಂದಿಗೆ ಇರುವ ತನಕ ರಾಮಲಾಲನಿಗೆ ಆನಂದವಾಗುತ್ತಿತ್ತು. ಕೇಕೆಹಾಕಿ ನೆಗೆದಾಡುತ್ತಿದ್ದ. ಆದರೆ ನಾನು ಆ ಸ್ಥಳ ಬಿಟ್ಟು ನನ್ನ ಕೋಣೆಗೆ ಬಂದೊಡನೆಯೆ ಅವನೂ ನನ್ನ ಹಿಂದೆಯೇ ಬಂದನು. ನಾನು ಹಿಂದೆ ಬರಬೇಡವೆಂದು ಎಷ್ಟು ಗದರಿಸಿದರೂ ಅವನು ಕೇಳಲಿಲ್ಲ. ಮೊದಲು ಇದೆಲ್ಲ ನನ್ನ ಭ್ರಾಂತಿ ಎಂದು ಭಾವಿಸಿದೆ. ಇಲ್ಲದೇ ಇದ್ದರೆ ಇಡೀ ಜೀವನ ಭಯಭಕ್ತಿಯಿಂದ ಪೂಜೆ ಮಾಡಿದ ಸಾಧುವಿಗಿಂತ ನನ್ನನ್ನು ಹೆಚ್ಚಾಗಿ ಪ್ರೀತಿಸುವನು ಎಂದು ಹೇಗೆ ಭಾವಿಸಬೇಕು. ನಾನು ಕಣ್ಣೆದುರಿಗೆ ನಿಮ್ಮನ್ನು ನೋಡುವಂತೆಯೇ ಅವನನ್ನು ನೋಡಿದೆ. ಕುಣಿಕುಣಿಯುತ್ತ ರಾಮಲಾಲ ನನ್ನ ಮುಂದೆ ಹೋಗುವನು, ಕೆಲವು ವೇಳೆ ನನ್ನ ಹಿಂದೆ ಬರುವನು, ಕೆಲವು ವೇಳೆ ನನ್ನನ್ನು ಎತ್ತಿಕೋ ಎಂದು ಹಟ ಮಾಡುವನು. ಎತ್ತಿಕೊಂಡರೆ ಬಹಳ ಹೊತ್ತು ಇರುತ್ತಿರಲಿಲ್ಲ. ಪುನಃ ನೆಗೆದು ಬರುವನು. ಅಲ್ಲಿ ಇಲ್ಲಿ ಓಡಾಡುವನು. ಮುಳ್ಳಿನ ಪೊದೆಯಲ್ಲಿ ಹೂವನ್ನು ಬಿಡಿಸುವನು. ಇಲ್ಲದೇ ಇದ್ದರೆ ಈಜುವುದಕ್ಕೆ ಗಂಗಾನದಿಗೆ ಹೋಗುವನು. "ಮಗು ಬಿಸಿಲಿ ನಲ್ಲಿ ಅಲೆಯಬೇಡ, ಕಾಲಿನಲ್ಲಿ ಹೊಪ್ಪಳೆ ಬರುವುದು, ನೀರಿನಲ್ಲಿ ಅಷ್ಟು ಹೊತ್ತು ಇರಬೇಡ ನೆಗಡಿ ಬರುವುದು" ಎಂದು ಎಷ್ಟು ಹೇಳಿದರೂ ಕೇಳಲೊಲ್ಲ. ನಾನು ಇನ್ನಾರಿಗೊ ಹೇಳುತ್ತಿರುವಂತೆ

ನನ್ನ ಮಾತಿಗೆ ಕಿವಿಯೇ ಕೊಡಲಿಲ್ಲ. ಕೆಲವು ವೇಳೆ ಅಣಕಿಸುತ್ತ ಕಮಲದಂತಿರುವ ತನ್ನ ಕಣ್ಣುಗಳಿಂದ ನೋಡುವನು. ಆಗ ಕೋಪಗೊಂಡು ಅವನನ್ನೂ ಬೈಯ್ಯುತ್ತಿದ್ದೆ; "ತುಂಟ ತಾಳು ಚೆನ್ನಾಗಿ ಹೊಡೆಯುತ್ತೇನೆ. ನಿನ್ನ ಬೆನ್ನಿನ ಮೂಳೆ ಮುರಿಯುತ್ತೇನೆ" ಎಂದು ಅವನನ್ನು ಎಳೆದು ತಂದು ಕೋಣೆಯಲ್ಲಿರಿಸಿ ಅವನಿಗೆ ತಿನ್ನಲು ಏನಾದರೂ ಕೊಡುತ್ತಿದ್ದೆ. ಅವನ ತುಂಟುತನವನ್ನು ತಾಳಲಾರದೆ ಒಂದೆರಡೇಟನ್ನೂ ಕೆಲವು ವೇಳೆ ಕೊಡುತ್ತಿದ್ದೆ. ಅಯ್ಯೋ ಹಾಗೆ ಹೊಡೆದಾಗ. ತನ್ನ ಸುಂದರವಾದ ಬಾಯಿತೆರೆದು ಕಣ್ಣೀರನ್ನು ಸುರಿಸುತ್ತ ನನ್ನನ್ನು ನೋಡಿ ಅಳುವನು. ಇದನ್ನು ನೋಡಿದಾಗ ನನ್ನ ವ್ಯಥೆ ಹೇಳತೀರದು. ಆಗ ಅವನನ್ನು ಪ್ರೀತಿಯಿಂದ ನನ್ನ ತೊಡೆಯಮೇಲೆ ಎತ್ತಿಕೊಂಡು ಮುದ್ದಿಸುತ್ತಿದ್ದೆ.

"ನಾನೊಂದು ದಿನ ಸ್ನಾನಕ್ಕೆ ನದಿಗೆ ಹೋಗುತ್ತಿದ್ದೆ. ನಾನೂ ಬರುತ್ತೇನೆ ಎಂದು ರಾಮಲಾಲ ಹಟ ಮಾಡಿದ. ವಿಧಿಯಿಲ್ಲದೆ ಅವನನ್ನು ಕರೆದುಕೊಂಡು ಹೋದೆ. ಅವನು ಆಡಲು ನೀರಿಗೆ ಇಳಿದವನು ಎಷ್ಟು ಹೊತ್ತಾದರೂ ಎದ್ದುಬರಲಿಲ್ಲ. ನನಗೆ ಕೋಪ ಬಂತು. ನೀರಿನಲ್ಲಿ ಅವನನ್ನು ಕ್ಷಣಕಾಲ ಅದುಮಿ ಹಿಡಿದು "ತುಂಟ ಈಗ ನೀರಿನಲ್ಲಿ ಎಷ್ಟು ಹೊತ್ತಾದರೂ ಇರು!" ಎಂದೆ. ಆದರೆ ನೀರಿನಲ್ಲಿ ಉಸಿರುಕಟ್ಟಿ ತಳಮಳಿಸುತ್ತಿದ್ದ ಬಾಲಕನನ್ನು ಕಂಡೊಡನೆಯೆ ನನ್ನ ಎದೆ ಕರಗಿ ನೀರಿನಿಂದ ಅವನನ್ನು ಎತ್ತಿಕೊಂಡೆ."

"ಒಂದು ದಿನ ರಾಮಲಾಲ ಏನಾದರೂ ಕೊಡು ತಿನ್ನುವುದಕ್ಕೆ ಎಂದು ಹಟ ಮಾಡಿದ. ಅವನನ್ನು ಸಮಾಧಾನ ಮಾಡುವುದಕ್ಕೆ ಭತ್ತಮಿಶ್ರಿತವಾದ ಅರಳನ್ನು ಕೊಟ್ಟೆ. ಅವನು

ಅದನ್ನು ಅಗಿಯುವಾಗ ಬಾಯಿಂಗೆ ಭತ್ತ ಸಿಕ್ಕಿಕೊಂಡು ರಕ್ತ ಬರುವುದನ್ನು ನೋಡಿದೆ. ಅಬ್ಬ ! ಆಗ ನನ್ನ ಎದೆಯನ್ನು ಯಾರೊ ಹಿಂಡಿದಂತಾಯಿತು. ಅವನನ್ನು ಎತ್ತಿಕೊಂಡು ಮುದ್ದಾಡಿ "ಯಾವ ಕೌಸಲ್ಯ ನಿನ್ನ ಬಾಯಿಗೆ ಬೆಣ್ಣೆ ಕೆನೆ ಹಾಲನ್ನು ಕೊಡುತ್ತಿದ್ದಳೊ ಅಂತಹ ಬಾಯಿಂಗೆ ಇಂತಹ ಹಾಳು ತಿಂಡಿಯನ್ನು ಹಾಕಿದೆನಲ್ಲ ನಾನೆಷ್ಟು ಮೂಢ ಎಂದು ಅತ್ತೆ."

ಕೆಲವು ದಿನಗಳಾದ ಮೇಲೆ ಜಟಾಧಾರಿ ರಾಮಲಾಲನನ್ನು ಶ್ರೀರಾಮಕೃಷ್ಣರ ಸಮೀಪದಲ್ಲಿಯೇ ಬಿಟ್ಟು ಹೋದ. ಇನ್ನು ಮೇಲೆ ಅವರ ಮನಸ್ಸು, ಅವನ ಇಷ್ಟಮೂರ್ತಿಯು ಯಾವ ಪ್ರತೀಕದ ಆಸರೆಯೂ ಇಲ್ಲದೆ ಇವನ ಕಣ್ಣ ಮುಂದೆ ಸುಳಿಯು ತ್ತಿತ್ತು.

ವೈಷ್ಣವರಲ್ಲಿ ಶಾಂತ, ದಾಸ್ಯ, ವಾತ್ಸಲ್ಯ, ಸಖ್ಯ, ಮಧುರ ಭಾವಗಳೆಂಬ ಪಂಚ ಭಾವಗಳಿವೆ. ಮಾನವ ಮತ್ತೊಬ್ಬನನ್ನು ಯಾವ ಯಾವ ಭಾವದ ಮೂಲಕ ಪ್ರೀತಿಸುತ್ತಾನೆಯೋ ಭಕ್ತ ಆ ಭಾವದ ಮೂಲಕವಾಗೆಲ್ಲ ಭಗವಂತನನ್ನು ಪ್ರೀತಿಸುತ್ತಾನೆ. ಮಾನವ ಎಲ್ಲಿಯವರೆಗೆ ಮಾನವನಾಗಿರುವನೋ ಅಲ್ಲಿಯವರೆಗೆ ದೇವರನ್ನೂ ಮಾನವನಂತೆ ಪ್ರೀತಿಸದೆ ವಿಧಿಯಿಲ್ಲ. ಶ್ರೀರಾಮ ಕೃಷ್ಣರು ಮೊದಲಿನಿಂದಲೂ ಶಾಂತಭಾವದಲ್ಲಿದ್ದರು. ಹನುಮಂತನ ಭಾರವನ್ನು ಆರೋಪಿಸಿಕೊಂಡು ದಾಸ್ಯಭಾವವನ್ನು ಅಭ್ಯಾಸ ಮಾಡಿದರು. ಜಟಾಧಾರಿಯಿಂದ ದೇವರನ್ನು ನಮ್ಮ ಮಗುವೆಂದು ನೋಡುವ ವಾತ್ಸಲ್ಯಭಾವವನ್ನು ಕಲಿತರು. ಅರ್ಜುನನಿಗೂ ಕೃಷ್ಣನಿಗೂ ಇದ್ದ ಸಂಬಂಧದಲ್ಲಿ ಸಖ್ಯಭಾವವನ್ನು ನೋಡುವೆವು. ಶ್ರೀರಾಮಕೃಷ್ಣರು ಅದನ್ನೂ ಅಭ್ಯಾಸ ಮಾಡಿದ್ದರು. ಕೊನೆಯದೇ ಮಧುರಭಾವ. ಭಾವಗಳಲ್ಲೆಲ್ಲ

ಅತಿ ಉತ್ಕಟವಾದುದು. ಅದರಲ್ಲಿ ಸಾಧಕ ತಾನು ಗೋಪಿಯಂತೆ, ದೇವರನ್ನು ಕೃಷ್ಣನೆಂದು ಪ್ರೀತಿಸುವನು. ಶ್ರೀರಾಮಕೃಷ್ಣರು ಮಥುರನಾಥನ ಮನೆಯಲ್ಲಿದ್ದಾಗ ಈ ಭಾವವನ್ನು ಅಭ್ಯಾಸ ಮಾಡಿದರು. ಸಂಪೂರ್ಣವಾಗಿ ಸ್ತ್ರೀಯಂತೆ ವೇಷ ಭೂಷಣಗಳನ್ನು ಧರಿಸಿದರು. ಶ್ರೀಕೃಷ್ಣನಿಗೆ ಹೂವಿನ ಹಾರ ಮಾಡುವುದು, ಅವನಿಗೆ ಚಾಮರ ಹಾಕುವುದು, ಅವನ ಪ್ರೀತಿಗೆ ಸಂಬಂಧಪಟ್ಟ ಹಾಡುಗಳನ್ನು ಹಾಡುವುದು, ಇವುಗಳಲ್ಲಿ ನಿರತರಾದರು. ರಾಧೆ ಈ ಭಾವಕ್ಕೆ ಒಂದು ಜ್ವಲಂತ ಉದಾಹರಣೆ. ಶ್ರೀರಾಮ ಕೃಷ್ಣರಿಗೆ ಮೊದಲು ಅವಳ ದರ್ಶನವಾಯಿತು. ಅನಂತರ ಅವಳ ಆರಾಧ್ಯದೇವತೆಯಾದ ಶ್ರೀಕೃಷ್ಣನ ದರ್ಶನವೂ ಆಯಿತು.

ಶ್ರೀರಾಮಕೃಷ್ಣರ ತಾಯಿಗೆ ವಯಸ್ಸಾದಾಗ ತಮ್ಮ ಜೀವನದ ಕೊನೆಗಾಲವನ್ನು ತಮ್ಮ ಮಗನೊಡನೆ ಗಂಗಾತೀರದಲ್ಲಿ ಕಳೆಯಬೇಕೆಂದು ದಕ್ಷಿಣೇಶ್ವರಕ್ಕೆ ಬಂದರು. ಶ್ರೀರಾಮಕೃಷ್ಣರು ಆದರದಿಂದ ತಾಯಿಯನ್ನು ನೋಡಿಕೊಳ್ಳುತ್ತಿದ್ದರು. ತಾಯಿಯ ಊಟಉಪಚಾರಗಳಿಗೆ ಬೇಕಾಗುವುದನ್ನೆಲ್ಲ ಮಥುರನಾಥ ಒದಗಿಸುತ್ತಿದ್ದ. ಮಥುರನಾಥನಿಗೆ ಶ್ರೀರಾಮಕೃಷ್ಣರ ತಾಯಿಯ ಸರಳತೆ, ಅವರ ಪ್ರೀತಿ ವಾತ್ಸಲ್ಯಗಳು ತುಂಬಾ ಪ್ರಿಯವಾಯಿತು. ದಕ್ಷಿಣೇಶ್ವರಕ್ಕೆ ಬಂದಾಗಲೆಲ್ಲ ಅವರ ಹತ್ತಿರ ಹೋಗಿ 'ಅಜ್ಜಿ' ಎಂದು ಅವರನ್ನು ಕರೆದು ಅವರ ಯೋಗಕ್ಷೇಮವನ್ನು ವಿಚಾರಿಸಿ ಕೊಂಡು ಹೋಗುತ್ತಿದ್ದನು. ತಾನು ಏನಾದರೂ ಅವರಿಗೆ ಕೊಡಬೇಕೆಂದು ಆಸೆ. ಆದರೆ ಅವರಿಗೆ ಯಾವುದು ಬೇಕೊ ಹೇಳಿ ಎಂದು ಕೇಳುತ್ತಿದ್ದ. ಚಂದ್ರಮಣಿ ಅವರಿಗೆ ಏನೂ ಬೇಡ ಎಂದರೆ ಏನಾದರೂ ತಿಳಿದುಕೊಳ್ಳುವನೆಂದು. ಅವನ ಬಲಾತ್ಕಾರ ಬಲವಾದಾಗ ತಮಗೆ ಹಲ್ಲಿನ ಪುಡಿಗೆ ಮೂರು

ಕಾಸಿನ ಹೊಗೆಸೊಪ್ಪು ತಂದು ಕೊಡು ಎಂದು ಕೇಳಿದರು. ಮಥುರನಾಥ ಸಾವಿರಾರು ರೂಪಾಯಿಯನ್ನು ಅವರಿಗೆ ಕೊಡಲು ಸಿದ್ಧನಾಗಿದ್ದ. ಆದರೆ ಅವರು ಬೇಡಿದ್ದು ಮೂರು ಕಾಸಿನ ಹೊಗೆಸೊಪ್ಪನ್ನು. ಇದನ್ನು ಕೇಳಿದಾಗ ಮಥುರನಾಥನ ಕಣ್ಣು ಹನಿಗೂಡಿತು. "ನಿಮ್ಮಂತಹ ತಾಯಿಯಲ್ಲದೆ ಮತ್ತಾರು ಶ್ರೀರಾಮಕೃಷ್ಣರಂತಹವರಿಗೆ ಜನ್ಮ ನೀಡಬಲ್ಲರು" ಎಂದು ಆಶ್ಚರ್ಯಪಟ್ಟ. ಅವರು ಕೇಳಿದುದನ್ನು ಮತ್ತೊಮ್ಮೆ ಬರುವಾಗ ತಂದುಕೊಟ್ಟ.

ಶ್ರೀರಾಮಕೃಷ್ಣರು ಇದುವರೆಗೆ ದ್ವೈತಭೂಮಿಕೆಯಲ್ಲಿ ದೇವರೊಂದಿಗೆ ಹಲವು ಸಂಬಂಧಗಳನ್ನು ಕಲ್ಪಿಸಿಕೊಂಡಿದ್ದರು. ಸ್ವಾಮಿಯಂತೆ, ಸಖನಂತೆ, ಪ್ರಿಯತಮನಂತೆ, ತಾಯಿಯಂತೆ ಕಂಡು ಪ್ರೀತಿಸಿದ್ದರು. ಆದರೆ ಇವೆಲ್ಲ ನಾಮರೂಪ ಜಗತ್ತಿನಲ್ಲಿವೆ. ಅದ್ವೈತಾನುಭವ ಒಂದೇ ಜೀವಿಯನ್ನು ನಾಮರೂಪ ನಿಮಿತ್ತದ ಆಚೆ ಒಯ್ಯಬಲ್ಲದು. ಭಗವಂತನ ನಾಮರೂಪ ಎಷ್ಟೇ ಪ್ರಿಯವಾಗಲಿ, ಮೋಹಕವಾಗಲಿ ಅದೊಂದು ಗುರಿಯೆಡೆಗೆ ಹೋಗುವಾಗ ದಾರಿಯಲ್ಲಿ ಸಿಕ್ಕುವ ನಿಲ್ದಾಣ. ಅದೇ ಗುರಿಯಲ್ಲ ಶ್ರೀರಾಮಕೃಷ್ಣರು ಸಾಕಾರ ಸಗುಣದ ಎಲ್ಲೆಯನ್ನು ಮೀರಿ ಹೋಗುವ ಸಮಯ ಬಂದಿತು. ಒಂದು ದಿನ ಶ್ರೀರಾಮ ಕೃಷ್ಣರು ಬೆಳಿಗ್ಗೆ ಸಮಯದಲ್ಲಿ ದಕ್ಷಿಣೇಶ್ವರದ ದೇವಸ್ಥಾನದ ಮೆಟ್ಟಿಲಿನ ಮೇಲೆ ಪೂಜೆ ಆದಮೇಲೆ ಕುಳಿತಿದ್ದರು. ಆ ಸಮಯ ದಲ್ಲಿ ಅಲ್ಲಿ ತೋತಾಪುರಿ ಎಂಬ ಅದ್ವೈತ ಸನ್ಯಾಸಿ ಬಂದ. ಹುಟ್ಟಿದಾಗಿನಿಂದಲೂ ಸನ್ಯಾಸಿಗಳ ಆಶ್ರಮದಲ್ಲಿ ಕಾಲ ಕಳೆದವನು. ವೇದಾಂತಾದಿ ಗ್ರಂಥಗಳನ್ನು ಚೆನ್ನಾಗಿ ಬಲ್ಲವನು. ಜೊತೆಗೆ ಅದ್ವೈತಾನುಭವವನ್ನು ಗಳಿಸಿಕೊಂಡವನು. ಮೈಮೇಲೆ ಆತನಿಗೆ

ಯಾವ ಬಟ್ಟೆಯೂ ಇರಲಿಲ್ಲ. ಆಕಾಶವೇ ಹೊದ್ದಿಕೆ, ಭೂಮಿಯೇ ಹಾಸಿಗೆ, ಭಿಕ್ಷೆಯ ಮೂಲಕ ಏನು ಸಿಕ್ಕುವುದೋ ಅದೇ ಆಹಾರ. ದೇಶಕಾಲದಲ್ಲಿರುವ ಜಗತ್ತು ಒಂದು ಕನಸು ಎಂದು ಹೃದ್‌ಗತ ಮಾಡಿಕೊಂಡವನು. ಶ್ರೀರಾಮಕೃಷ್ಣರನ್ನು ನೋಡಿದೊಡನೆಯೇ ಅವರು ಅತ್ಯಂತ ಮುಂದುವರಿದ ಸಾಧಕರು ಎಂದು ಗೊತ್ತಾಯಿತು. ಅದ್ವೈತವನ್ನು ಇವರಿಗೆ ಬೋಧಿಸಿದರೆ ಅದು ಫಲಕಾರಿ ಆಗೀತು ಎಂದು ಆಶಿಸಿದ. "ಏನು ನಿನಗೆ ಅದ್ವೈತವನ್ನು ಬೋಧಿಸಲೆ?" ಎಂದು ಕೇಳಿದ. ಶ್ರೀರಾಮಕೃಷ್ಣರು ಎಳೆಹಸುಳೆಯಂತೆ "ನನಗೇನೂ ಗೊತ್ತಿಲ್ಲ. ನಾನು ತಾಯಿಯನ್ನು ಕೇಳಿಕೊಂಡು ಬರುತ್ತೇನೆ" ಎಂದು ಗುಡಿ ಒಳಗೆ ಹೋಗಿ ತಾಯಿಯನ್ನು ಕೇಳಿದರು. ತಾಯಿ, "ಕಲಿತುಕೋ, ಅದಕ್ಕಾಗಿ ಅವನನ್ನು ಇಲ್ಲಿಗೆ ಕರೆತಂದಿರುವುದು" ಎಂದು ಹೇಳಿದಂತೆ ಆಯಿತು. ಶ್ರೀರಾಮಕೃಷ್ಣರು ತಮಗೆ ಮದುವೆ ಆಗಿದೆ ಎಂದು ಹೇಳಿದರು. ಅದಕ್ಕೆ ತೋತಾಪುರಿ ಚಿಂತೆಯಿಲ್ಲ. ಯಾರು ಹೆಂಡತಿ ಪಕ್ಕದಲ್ಲಿದ್ದರೂ ವೈರಾಗ್ಯ ವಿವೇಕದಲ್ಲಿ ಸ್ಥಿರವಾಗಿ ನೆಲಸಿರುವರೋ ಅವರೇ ನಿಜವಾದ ಬ್ರಹ್ಮಜ್ಞಾನದಲ್ಲಿ ಪ್ರತಿಷ್ಠಿತರು. ತಮ್ಮ ಬ್ರಹ್ಮಜ್ಞಾನವನ್ನು ಒರೆ ಹಚ್ಚಿ ನೋಡುವುದಕ್ಕೆ ಇದೊಂದು ಅವಕಾಶ ಎಂದನು.

ದಕ್ಷಿಣೇಶ್ವರದಲ್ಲಿ ಪಂಚವಟೀ ತಟಿಯಲ್ಲಿರುವ ಸಾಧನಾ ಕುಟೀರದಲ್ಲಿ ಅದ್ವೈತ ಸಾಧನೆಗೆ ಅಣಿ ಆಯಿತು. ಸನ್ಯಾಸ ಧಾರಣ ಪವಿತ್ರದಿನಕ್ಕೆ ಮುಂಚೆ ಪಿತೃ ಮುಂತಾದವರಿಗೆ ಪಿಂಡ ಕೊಟ್ಟು ತಮಗೂ ಆತ್ಮಪಿಂಡವನ್ನು ಕೊಟ್ಟುಕೊಂಡರು. ಮಾರನೆ ದಿನ ಬೆಳಗಿನ ಝಾವದಲ್ಲಿ ವಿರಜಾ ಹೋಮವನ್ನು

ಮಾಡಿ ಅದಕ್ಕೆ ತಮ್ಮ ಜುಟ್ಟು ಜನಿವಾರವನ್ನು ಹಾಕಿದರು. ಗುರುಕೊಟ್ಟ ಕೌಪೀನವನ್ನು ಧರಿಸಿ ತೋತಾಪುರಿ ಹೇಳಿದ ಅದ್ವೈತ ಬೋಧನೆಯನ್ನು ಕೇಳತೊಡಗಿದರು : "ಮಾಯಾ ಪ್ರಪಂಚದಲ್ಲಿರುವುದೆಲ್ಲ ಅಸತ್ಯ. ಅದನ್ನು ತ್ಯಜಿಸು. ಜ್ಞಾನಗದೆ ಯಿಂದ ನಾಮರೂಪಗಳ ಸೆರೆಮನೆಯನ್ನು ಒಡೆದು ಸಿಂಹದಂತೆ ಹೊರಕ್ಕೆ ಬಾ. ಪರಬ್ರಹ್ಮನಲ್ಲಿ ನೆಲಸಿ ಸಮಾಧಿಯಲ್ಲಿ ಸ್ಥಿರನಾಗು. ಆಗ ನಾಮರೂಪಗಳ ಜಗತ್ತು ಮಾಯವಾಗುವುದು. ಕ್ಷುದ್ರ ಅಹಂಕಾರ ವಿಭುವಾದ ಬ್ರಹ್ಮನಲ್ಲಿ ಐಕ್ಯವಾಗುವುದು. ಸಚ್ಚಿದಾ ನಂದವಾದ ಕೇವಲ ಬ್ರಹ್ಮವೇ ನೀನು ತತ್ತ್ವಮಸಿ" ಎಂದು ತೋತಾಪುರಿ ಬೋಧಿಸಿದ. ಪರಬ್ರಹ್ಮನನ್ನು ಕುರಿತು ಚಿಂತಿಸು ಎಂದು ತೋತಾಪುರಿ ಶ್ರೀರಾಮಕೃಷ್ಣರಿಗೆ ಹೇಳಿದ. ಆದರೆ ಶ್ರೀರಾಮಕೃಷ್ಣರು ನಿರ್ಗುಣ ನಿರಾಕಾರ ಬ್ರಹ್ಮನನ್ನು ಕುರಿತು ಚಿಂತಿಸಲು ಪ್ರಯತ್ನ ಮಾಡಿದಾಗಲೆಲ್ಲ, ಸಗುಣ ಸಾಕಾರಳಾದ ಶ್ರೀ ಕಾಳಿಕಾಮಾತೆ ಅವರ ಮುಂದೆ ಬಂದು ನಿಲ್ಲುತ್ತಿದ್ದಳು. ನಂತರ ಶ್ರೀರಾಮಕೃಷ್ಣರು ತೋತಾಪುರಿಗೆ, ತಮಗೆ ನಿರ್ಗುಣದ ಕಡೆ ಮನಸ್ಸನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದರು. ಆಗ ತೋತಾಪುರಿ ಸಾಧ್ಯವಿಲ್ಲವೆ? ಅದು ಸಾಧ್ಯ ವಾಗಲೇಬೇಕು. ಹಣೆಯ ಮಧ್ಯದಲ್ಲಿ ಧ್ಯಾನಿಸು. ನಿನ್ನ ಸಾಕಾರ ಸಗುಣ ಬಂದು ನಿಂತರೆ ಜ್ಞಾನ ಖಡ್ಗದಿಂದ ಅದನ್ನು ಛೇದಿಸು" ಎಂದನು. ಶ್ರೀರಾಮಕೃಷ್ಣರು ಹಾಗೆಯೇ ಮಾಡಿ ದರು. ಮನಸ್ಸು ಸಂಪೂರ್ಣ ನಿರ್ವಿಕಲ್ಪದ ಕಡೆ ಹೊರಟಿತು. ದೇಹ ನಿಸ್ಪಂದವಾಯಿತು. ಒಂದು ಶಿಲಾಮೂರ್ತಿಯಂತಾದರು ಶ್ರೀರಾಮಕೃಷ್ಣರು. ತೋತಾಪುರಿ ಕೆಲವು ಕಾಲ ಶ್ರೀರಾಮ ಕೃಷ್ಣರು ಆ ಸ್ಥಿತಿಯಲ್ಲಿಯೇ ಇರಲಿ ಎಂದು ಪರ್ಣಶಾಲೆಯ

ಬಾಗಿಲನ್ನು ಹಾಕಿ ಬಂದನು. ಅಂದಿನ ಸಂಜೆ ಬಂದು ನೋಡಿದಾಗಲೂ ಹಾಗೆಯೇ ಇದ್ದರು. ಅನಂತರ ಮೂರು ದಿನಗಳ ವರೆಗೂ ಹಾಗೆಯೇ ಇದ್ದರು. ತೋತಾಪುರಿಗೆ ಆಶ್ಚರ್ಯ. ತಾನು ಯಾವುದನ್ನು ಪಡೆದುಕೊಳ್ಳಲು ನಲವತ್ತು ವರುಷಗಳು ಪ್ರಯತ್ನಪಟ್ಟನೊ ಅದನ್ನು ಶ್ರೀರಾಮಕೃಷ್ಣರು ಅಷ್ಟು ಸುಲಭವಾಗಿ ಪಡೆದುಕೊಂಡಿದ್ದರು. ಅನಂತರ ಶಿವೋಹಂ ಮಂತ್ರವನ್ನು ಉಚ್ಚರಿಸಿ ದ್ವೈತ ಸ್ಥಿತಿಗೆ ತಂದರು. ಆತ ಎಲ್ಲಿಯೂ ಮೂರು ದಿನಗಳಿಗಿಂತ ಹೆಚ್ಚು ನಿಲ್ಲುತ್ತಿರಲಿಲ್ಲ. ಆದರೆ ದಕ್ಷಿಣೇಶ್ವರದಲ್ಲಿ ಹನ್ನೊಂದು ತಿಂಗಳುಕಾಲ ಇದ್ದು ಶ್ರೀರಾಮಕೃಷ್ಣರಿಗೆ ಅದ್ವೈತವನ್ನು ಬೋಧನೆ ಮಾಡಿದನು. ಶ್ರೀರಾಮಕೃಷ್ಣರು ಅದ್ವೈತವನ್ನು ಬಿಟ್ಟು ಯಾವಾಗ ದ್ವೈತ ಭೂಮಿಕೆಗೆ ಬರುತ್ತಿದ್ದರೋ ಆಗ ಅವರಲ್ಲಿ ಭಕ್ತನ ಭಾವವನ್ನು ನೋಡುತ್ತೇವೆ. ತಮ್ಮಲ್ಲಿ ಜೀವದ ಉಪಾಧಿ ಇರುವವರೆಗೆ ಜಗತ್ತು ಮತ್ತು ಅದಕ್ಕೆ ಒಡೆಯನಾದ ಈಶ್ವರ ಎರಡನ್ನೂ ಒಪ್ಪಿಕೊಳ್ಳುತ್ತಿದ್ದರು. ಅದ್ವೈತ ಬಂದ ಮೇಲೆ ಅವರ ದ್ವೈತಭಾವ ಹೋಗಲಿಲ್ಲ. ಅವರು ಯಾವ ಭೂಮಿಕೆಯ ಮೇಲೆ ಬೇಕಾದರೂ ಇರಬಲ್ಲವರಾಗಿದ್ದರು. ಅನೇಕ ವೇಳೆ ಒಂದು ನಿಜ ಮತ್ತೊಂದು ಸುಳ್ಳು ಎನ್ನುವುದನ್ನು ಕೇಳುವೆವು. ಆದರೆ ಶ್ರೀರಾಮಕೃಷ್ಣರ ಜೀವನದಲ್ಲಿ ನಾಮರೂಪ ನಿಮಿತ್ತದ ಒಳಗೆ ಜೀವಿ ಸಂಚರಿಸುತ್ತಿರುವಾಗ ಸಾಕಾರ ಮತ್ತು ಸಗುಣ ಪರಮಾತ್ಮನನ್ನು ಒಪ್ಪಿಕೊಳ್ಳದೇ ವಿಧಿಯಿಲ್ಲ ಎಂದು ಹೇಳುತ್ತಿದ್ದರು. ಆದರೆ ಮನಸ್ಸು ಇದನ್ನು ದಾಟಿಹೋದರೆ ನಿರ್ಗುಣ ನಿರಾಕಾರ ಪರಬ್ರಹ್ಮನೊಂದೇ ಸತ್ಯ ಎಂಬುದು ಅವರ ಅನುಭವದ ಮಾತು.

ತೋತಾಪುರಿ ಹೊರಟುಹೋದಮೇಲೆ ಆರು ತಿಂಗಳಕಾಲ

ಶ್ರೀರಾಮಕೃಷ್ಣರು ನಿರ್ವಿಕಲ್ಪ ಸಮಾಧಿಯಲ್ಲಿ ನಿರತರಾಗಿದ್ದರು. ಆ ಸಮಯದಲ್ಲಿ ನಿದ್ರಾಹಾರಗಳಿರಲಿಲ್ಲ. ಶರೀರ ಒಂದು ಶವದಂತೆ ಇತ್ತು. ನೊಣ ಅವರ ಮೂಗು ಕಿವಿಯೊಳಗೆ ಹೋಗುತ್ತಿದ್ದವು. ಅವರ ತಲೆ ಮೇಲೆ ಹಕ್ಕಿಗಳು ಬಂದು ಕುಳಿತುಕೊಳ್ಳುತ್ತಿದ್ದವು. ಹಾವುಗಳು ಅವರ ನಿಷ್ಪಂದ ದೇಹದ ಮೇಲೆ ಸಂಚರಿಸುತ್ತಿದ್ದವು ಯಾರೋ ಒಬ್ಬ ಸಾಧು ಅವರ ಸ್ಥಿತಿಯನ್ನು ಅರಿತು, ಬಲಾತ್ಕಾರವಾಗಿ ಬಾಯಿ ಬಿಡಿಸಿ ಸ್ವಲ್ಪ ಆಹಾರವನ್ನು ತುರುಕಿ ಹೋಗುತ್ತಿದ್ದ. ಅವರು ಬದುಕಿದರೆ ಜಗತ್ತಿಗೆ ಮುಂದೆ ಕಲ್ಯಾಣವಾಗುವುದೆಂದು ಭಾವಿಸಿದ. ಆರು ತಿಂಗಳಾದ ಮೇಲೆ ಅವರ ಮನಸ್ಸು ಜಗತ್ತಿನ ಕಡೆ ಬಂದಿತು. ಪುನಃ ಜಗನ್ಮಾತೆ ಅವರಿಗೆ ಗೋಚರಿಸಿ ನಾಮರೂಪಗಳ ಹೊಸಲಿನ ಮೇಲೆ ಇರು ಎಂದು ಆಜ್ಞಾಪಿಸಿದಳು. ಅನಂತರ ಆ ಸ್ಥಿತಿಯಲ್ಲಿಯೇ ಇದ್ದರು.

ಕೆಲವು ಕಾಲವಾದ ಮೇಲೆ ಗೋವಿಂದರಾಯ್ ಎಂಬುವನಿಂದ ಇಸ್ಲಾಂ ಮತದ ದೀಕ್ಷೆಯನ್ನು ಸ್ವೀಕರಿಸಿದರು. ಆ ಸಮಯದಲ್ಲಿ ಕಾಳಿಕಾ ದೇವಾಲಯದ ಒಳಗೆ ಕೂಡ ಹೋಗುತ್ತಿರಲಿಲ್ಲ. ಹಿಂದೂ ದೇವದೇವಿಯರ ಹೆಸರನ್ನು ಕೂಡ ಹೇಳುತ್ತಿರಲಿಲ್ಲ. ಮಹಮ್ಮದೀಯರಂತೆ ಅಲ್ಲಾ ಪ್ರಾರ್ಥನೆಯಲ್ಲಿ ತೊಡಗಿದರು. ಅವರಂತೆ ಬಟ್ಟೆಯುಟ್ಟರು. ಅವರು ತಿನ್ನುವ ಆಹಾರವನ್ನು ತಿನ್ನಲು ಅಣಿಯಾದರು. ಕೆಲವು ದಿನಗಳಾದ ಮೇಲೆ ಅವರಿಗೆ ಇಸ್ಲಾಂ ಸತ್ಯದ ಅನುಭವ ಆಯಿತು. ಅವರ ಸಾಕ್ಷಾತ್ಕಾರ ಸಮುದ್ರಕ್ಕೆ ಇಸ್ಲಾಂ ನದಿಯೂ ಸಂಗಮವಾಯಿತು.

ಇದರಂತೆಯೇ ಕ್ರೈಸ್ತ ಧರ್ಮದಲ್ಲಿ ಶಂಬು ಚಂದ್ರಮಲ್ಲಿಕ್ ಎಂಬುವನಿಂದ ದೀಕ್ಷೆ ಪಡೆದು, ಬೈಬಲನ್ನು ಓದಿಸಿ, ಮೇರಿ ಮತ್ತು

ಅವಳ ಮಗು ಕ್ರೈಸ್ತನನ್ನು ಪೂಜಿಸುತ್ತಿದ್ದರು. ಕೆಲವು ಕಾಲದ ಮೇಲೆ ಅವರಿಗೆ ಕ್ರೈಸ್ತನ ದರ್ಶನವಾಯಿತು. ಆ ದರ್ಶನವೂ ಇವರ ದೇಹದಲ್ಲಿ ಲೀನವಾಯಿತು.

ಮಥುರನಾಥನೊಡನೆ ಶ್ರೀರಾಮಕೃಷ್ಣರು ಕಾಶಿ, ಪ್ರಯಾಗ, ಬೃಂದಾವನ ಮುಂತಾದುವನ್ನು ನೋಡಿದರು. ಕೆಲವು ಕಾಲದ ಮೇಲೆ ಶ್ರೀಶಾರದಾದೇವಿಯವರು ತಮ್ಮ ತಂದೆಯೊಡನೆ ದಕ್ಷಿಣೇಶ್ವರಕ್ಕೆ ಬಂದರು. ಆಗ ಅವರಿಗೆ ಹದಿನಾರು ವಯಸ್ಸು. ಗಂಡನಿಗೆ ಕಾದು ಅವರು ಬರದೆ ಇರುವಾಗ ತಂದೆಯನ್ನು ಕರೆದುಕೊಂಡು ಇವರೇ ಬಂದರು. ಶ್ರೀರಾಮಕೃಷ್ಣರು ಅವರನ್ನು ಸ್ವೀಕರಿಸಿದರು. ಹೆಂಡತಿಯ ಮುಂದೆ ಹೀಗೆ ಹೇಳಿದರು: "ನಾನು ಎಲ್ಲಾ ಸ್ತ್ರೀಯರಲ್ಲಿಯೂ ಜಗನ್ಮಾತೆಯನ್ನೇ ನೋಡುತ್ತೇನೆ. ನಿನ್ನಲ್ಲಿಯೂ ನಾನು ಅದನ್ನೇ ನೋಡುತ್ತೇನೆ. ಸಾಧಾರಣ ಮನುಷ್ಯ ನಂತೆ ನಾನು ನಿನ್ನೊಂದಿಗೆ ಇರಲಾರೆ. ಆದರೆ ನೀನು ಸಂಸಾರಕ್ಕೆ ಬೀಳಬೇಕೆಂದಿದ್ದರೆ ನಿನಗೆ ಆ ಅಧಿಕಾರ ಇದೆ. ಬೇಕಾದರೆ ನೀನು ಅದನ್ನು ಮಾಡಬಹುದು. ದೇವರು ಬೇಕಾದರೆ ಅದನ್ನು ತೋರಿಸಬಲ್ಲೆ. ಪ್ರಪಂಚ ಬೇಕಾದರೂ ಅದನ್ನು ಕೇಳು." ಆದರೆ ಶ್ರೀಮಾತೆ ತಮಗೆ ಪತಿಸೇವೆ ಮಾಡಿ ಅವರಂತೆ ದೇವರಲ್ಲಿ ಒಂದಾಗಬೇಕೆಂದು ಇಚ್ಛೆಮಾತ್ರ ಇದೆ ಎಂದೂ ಅವರನ್ನು ಸಂಸಾರದ ಕೆಸರಿಗೆ ಇಳಿಸಬಯಸುವುದಿಲ್ಲ ಎಂದರು. ಶ್ರೀರಾಮ ಕೃಷ್ಣರಿಗೆ ಪರಮಾನಂದವಾಯಿತು. ಅವರನ್ನು ಆಧ್ಯಾತ್ಮಿಕ ಜೀವನದಲ್ಲಿ ಮೆಲ್ಲಮೆಲ್ಲನೆ ನಡೆಸಿ ನಿರ್ವಿಕಲ್ಪ ಸಮಾಧಿಯವರೆಗೂ ಒಯ್ದರು. ಒಂದು ದಿನ ಶ್ರೀಶಾರದಾದೇವಿಯವರನ್ನೇ ತಮ್ಮ ಕೋಣೆಯಲ್ಲಿ ಪೀಠದ ಮೇಲೆ ಕುಳ್ಳಿರಿಸಿ, ಅಲ್ಲಿ ಸಾಕ್ಷಾತ್ ಜಗನ್ಮಯಿಯನ್ನೇ ಆವಾಹನೆ ಮಾಡಿ ಪೂಜೆ ಮಾಡಿ ತಮ್ಮ ತಪಸ್ಸಿನ

ಫಲವನ್ನೆಲ್ಲ ಅವರಿಗೆ ಅರ್ಪಿಸಿದರು. ಇದನ್ನು ಪರಮಹಂಸರ ಸಾಧನೆಯ ತುತ್ತತುದಿ ಎಂದು ಹೇಳಬಹುದು. ಶ್ರೀಶಾರದಾದೇವಿ ಕೈಹಿಡಿದ ಹೆಂಡತಿಯಾಗಿ ಬಂದರೂ, ಅವರ ಪ್ರಥಮ ಶಿಷ್ಯೆ ಆದರು.

೩. ಬೋಧನೆ

ಶ್ರೀರಾಮಕೃಷ್ಣರು ದಕ್ಷಿಣೇಶ್ವರ ದೇವಸ್ಥಾನದಲ್ಲಿ ಘೋರವಾಗಿ ಸಾಧನೆ ಮಾಡಿದರು. ಭಗವಂತನನ್ನು ಹಲವು ಭಾವಗಳ ಮೂಲಕ ನೋಡಿದರು. ಹಲವು ತತ್ತ್ವಗಳ ಮೂಲಕ ನೋಡಿದರು. ಹಲವು ಯೋಗಗಳ ಮೂಲಕ ಪಡೆದರು. ಹಲವು ಧರ್ಮಪಥಗಳಲ್ಲಿ ನಡೆದುಹೋಗಿ ಕೊನೆಗೆ ಒಂದೇ ಗುರಿಯನ್ನು ಸೇರಿದ್ದರು. ಪ್ರಪಂಚದಲ್ಲಿ ಯಾವುದನ್ನು ಪಡೆದರೆ ಕೃತಕೃತ್ಯನಾಗುವನೊ ಅದನ್ನು ಪಡೆದಿದ್ದರು. ಆದರೆ ತಾವು ಯಾವ ಸಾಕ್ಷಾತ್ಕಾರವನ್ನು ಪಡೆದರೋ ಅದನ್ನು ತಾವು ಪ್ರಪಂಚ ತೊರೆಯುವುದಕ್ಕೆ ಮುಂಚೆ ಯೋಗ್ಯ ಶಿಷ್ಯರಿಗೆ ಬಿಟ್ಟು ಹೋಗಬೇಕು. ಆಗ ಮಾತ್ರ ಅದು ಸಾರೋದ್ಧಾರವಾಗಿ ಬದ್ಧ ಜೀವಿಗಳ ಉದ್ಧಾರಕ್ಕೆ ಇರುವುದು. ಅವರು ಬಂದದ್ದು ತಾವು ಮಾತ್ರ ಬೆಳಕನ್ನು ನೋಡುವುದಕ್ಕಲ್ಲ, ಕತ್ತಲಲ್ಲಿರುವವರಿಗೆಲ್ಲ ಬೆಳಕನ್ನು ದಾನ ಮಾಡುವುದಕ್ಕೆ. ಯೋಗ್ಯರಾದ ಶಿಷ್ಯರಿಗೆ ಅವರ ಹೃದಯ ಕಾತರಿಸಿತು. ಸಾಧನೆಯ ಸಮಯದಲ್ಲಿ ಜಗನ್ಮಾತೆಯ ದರ್ಶನಕ್ಕೆ ಎಷ್ಟು ತಪಸ್ಸು ಮಾಡಿದರೋ, ಅಷ್ಟೇ ಕಾತರಿಸಿದರು ತಾ ಉಂಡ ಅಮೃತವನ್ನು ಇತರರಿಗೆ ಧಾರೆಯೆರೆಯುವುದಕ್ಕೆ. ಪ್ರತಿದಿನ ದೇವಸ್ಥಾನದಲ್ಲಿ ಮಂಗಳಾರತಿ ಆದಮೇಲೆ ದೇವಿಯ ಅಡಿದಾವರೆಯಲ್ಲಿ ಭಗವತ್ ಪಿಪಾಸುಗಳನ್ನು ತನ್ನ ಬಳಿಗೆ ಕಳುಹಿಸುವಂತೆ ತಾಯಿಗೆ ಪ್ರಾರ್ಥಿಸುತ್ತಿದ್ದರು. ತಾಯಿಯೂ ಕ್ರಮೇಣ

ಯೋಗ್ಯ ಶಿಷ್ಯರು ಬರುತ್ತಾರೆ ಎಂದು ಭರವಸೆ ಕೊಟ್ಟಿದ್ದಳು. ಮಂಗಳಾರತಿ ಆದಮೇಲೆ ಕಲ್ಕತ್ತೆಯ ಕಡೆ ನೋಡುತ್ತ "ತಾಯಿ, ಎಲ್ಲಿ ನನ್ನ ಮಕ್ಕಳು ಬರಲಿಲ್ಲವಲ್ಲ" ಎಂದು ವ್ಯಥೆ ಪಡುತ್ತಿದ್ದರು.

ಶ್ರೀರಾಮಕೃಷ್ಣರು ಬಹುದಿನ ಹೀಗೆ ವ್ಯಥೆಪಡಬೇಕಾಗಿರಲಿಲ್ಲ. ಒಂದು ದೊಡ್ಡ ಕಮಲ ಅರಳಿದರೆ ಸುತ್ತಮುತ್ತಲಿರುವ ದುಂಬಿಗಳಿಗೆ ಹೇಗೊ ಗೊತ್ತಾಗುತ್ತದೆ. ಅವು ಯಾವ ಆಮಂತ್ರಣಕ್ಕೂ ಕಾಯದೆ ಬಂದು ಅಮೃತಪಾನ ಮಾಡಿ ಹೋಗುವುವು. ಅದರಂತೆಯೇ ಶ್ರೀರಾಮಕೃಷ್ಣರ ಬಳಿಗೆ ಹಲವು ಮುಮುಕ್ಷುಗಳು ಬರತೊಡಗಿದರು. ಅವರಲ್ಲಿ ಹಲವು ಭಾವದವರಿದ್ದರು ಶ್ರೀರಾಮಕೃಷ್ಣರು ಯಾರಿಗೂ ಭಾವನಷ್ಟ ಮಾಡದೆ. ಅವರು ತಮ್ಮದೇ ಹಾದಿಯಲ್ಲಿ ನಡೆದುಕೊಂಡು ಹೋಗಿ ಸತ್ಯವನ್ನು ಸೇರುವಂತೆ ಮಾಡುತ್ತಿದ್ದರು. ಬಂದವರಿಗೆಲ್ಲ ಒಂದೇ ಮಂತ್ರವನ್ನಾಗಲೀ, ಒಂದೇ ಇಷ್ಟದೇವತೆಯನ್ನಾಗಲೀ, ಒಂದೇ ಸಾಧನೆಯನ್ನಾಗಲೀ, ಅವರು ಹೇಳುತ್ತಿರಲಿಲ್ಲ. ಅವರವರ ಯೋಗ್ಯತೆಗೆ ತಕ್ಕಂತೆ ಅದನ್ನು ಹೇಳುತ್ತಿದ್ದರು. ಮೆಟ್ಟಿಲು ಮೆಟ್ಟಿಲಾಗಿ ಅವರನ್ನು ಮೇಲಕ್ಕೆ ಎತ್ತುತ್ತಿದ್ದರು.

ಗುರು ತನ್ನಲ್ಲಿರುವುದನ್ನು ಮತ್ತೊಬ್ಬರಿಗೆ ದಾನ ಮಾಡಬೇಕಾದರೆ ಅದಕ್ಕೊಂದು ಮಧ್ಯವರ್ತಿ ಬೇಕಾಗುತ್ತದೆ. ಅದೇ ಪ್ರೀತಿ. ಶ್ರೀರಾಮಕೃಷ್ಣರಲ್ಲಿ ಶಿಷ್ಯರ ಮೇಲೆ ಇದ್ದ ಪ್ರೀತಿಗೆ ಸರಿಸಮನಾಗಿರುವುದನ್ನು ನಾವು ಪ್ರಪಂಚದಲ್ಲಿ ನೋಡುವುದು ಅಪರೂಪ. ಯಾವುದನ್ನು ತುಂಬಾ ಶ್ರೇಷ್ಠ ಸಾಂಸಾರಿಕ ಪ್ರೀತಿ ಎನ್ನುವೆವೊ ಅವು ಕೂಡ ಶ್ರೀರಾಮಕೃಷ್ಣರಿಗೆ ಶಿಷ್ಯರ ಮೇಲೆ ಇದ್ದ ಪ್ರೀತಿಯ ಬೆಳಕಿನ ಎದುರಿಗೆ ಮ್ಲಾನವಾಗಿ ಹೋಗುವುವು. ಶ್ರೀರಾಮಕೃಷ್ಣರ ಎದೆಯ ಬತ್ತಳಿಕೆಯಲ್ಲಿ ಅಮೋಘವಾದ ಪ್ರೇಮದ

ಬ್ರಹ್ಮಾಸ್ತ್ರವಿತ್ತು. ಒಮ್ಮೆ ಅದು ಮತ್ತೊಬ್ಬನೆದೆಗೆ ತಾಕಿದರೆ ನಿಷ್ಪ್ರಯೋಜನವಾಗುತ್ತಿರಲಿಲ್ಲ. ಅವರೆಡೆಗೆ ಬಂದ ಶಿಷ್ಯರುಗಳಲ್ಲಿ ವಿವೇಕಾನಂದರೆ ಮುಂತಾದವರು, ಗುರುಗಳ ಸಮಾಧಿ ಮುಂತಾದುವುಗಳನ್ನು ತಿಳಿದುಕೊಳ್ಳಲು ಆಗದೆ ಇದ್ದರೂ ಅವರ ಪ್ರೇಮದ ಸವಿಯುನ್ನುಂಡವರು. ಅದಕ್ಕೆ ಎಂದೆಂದಿಗೂ ದಾಸರಾದವರು. ಸ್ವಾಮಿವಿವೇಕಾನಂದರು ಅನಂತರ ತಾವು ಶ್ರೀರಾಮಕೃಷ್ಣರ ಪ್ರೇಮದ ದಾಸ ಎಂದು ಹೇಳಿಕೊಳ್ಳುತ್ತಿದ್ದರು. ಒಮ್ಮೆ ಶಿಷ್ಯರು ಅವರ ಪ್ರೇಮದ ರುಚಿಯನ್ನು ನೋಡಿದರೆ ತಂದೆತಾಯಿಗಳ ಪ್ರೀತಿ, ಗಂಡಹೆಂಡಿರ ಪ್ರೀತಿ ಸಪ್ಪೆಯಾಗುತ್ತಿತ್ತು. ಅವರಲ್ಲಿದ್ದುದು ಪರಮ ಪ್ರೇಮ. ಮರ್ತ್ಯರನ್ನು ಅಮೃತರನ್ನಾಗಿ ಮಾಡುವ ಪ್ರೇಮ. ಮಾಯೆಯಲ್ಲಿರುವವರನ್ನು ಮುಕ್ತರನ್ನಾಗಿ ಮಾಡಲು ತವಕಪಡುವ ಪ್ರೇಮ. ಶ್ರೀರಾಮಕೃಷ್ಣರು ಇಂತಹ ಪ್ರೇಮದ ಅಮೃತದಿಂದ ಶಿಷ್ಯರನ್ನು ಬೆಳೆಸಿದರು.

ಶ್ರೀರಾಮಕೃಷ್ಣರು ಶಿಷ್ಯರ ಬೆಳವಣಿಗೆಗೆ ಬೇಕಾದಷ್ಟು ಸ್ವಾತಂತ್ರ್ಯವನ್ನು ಕೊಡುತ್ತಾರೆ. ಒಂದು ಕಾರ್ಖಾನೆಯಲ್ಲಿ ಸಾಮಾನನ್ನು ತಯಾರು ಮಾಡುವಂತೆ ಎಲ್ಲಾ ಜೀವಿಗಳನ್ನೂ ಒಂದೇ ಎರಕದಲ್ಲಿ ಹಾಕುವುದಕ್ಕೆ ಆಗುವುದಿಲ್ಲ. ವೈವಿಧ್ಯತೆಯೇ ಸೃಷ್ಟಿಯ ನಿಯಮ. ಪ್ರತಿಯೊಂದು ವ್ಯಕ್ತಿಯಲ್ಲಿಯೂ ಒಂದೊಂದು ವಿಶಿಷ್ಟ ಗುಣವಿದೆ. ಅದನ್ನು ಅಳಿಸದೆ ಅವನ ಭಾವಕ್ಕೆ ನಷ್ಟಮಾಡದೆ ಮುಂದುವರಿಯಲು ಸಹಾಯ ಮಾಡುತ್ತಿದ್ದರು.

ಒಬ್ಬ ಶಿಷ್ಯನಿಗೆ "ದೇವರನ್ನು ಪ್ರಾರ್ಥಿಸು ದುಃಖದಿಂದ ಪಾರಾಗುವೆ" ಎಂದರು. ಶಿಷ್ಯನು "ದೇವರು ಇರುವನೊ ಇಲ್ಲವೊ ಎಂಬುದೇ ಸಂದೇಹ. ಹೀಗಿರುವಾಗ ನಾನು ಅವನನ್ನು

ಹೇಗೆ ಪ್ರಾರ್ಥಿಸಲಿ ?" ಎಂದನು. ಅದಕ್ಕೆ ಶ್ರೀರಾಮಕೃಷ್ಣರು, "ದೇವರೆ, ನೀನು ಇದ್ದರೆ ಏತಕ್ಕೆ ನನ್ನನ್ನು ದುಃಖದಿಂದ ಪಾರು ಮಾಡಬಾರದು" ಎಂದು ಪ್ರಾರ್ಥಿಸು ಎಂದರು.

ಶರತ್‌ಚಂದ್ರನನ್ನು "ನಿನ್ನ ಇಷ್ಟದೇವತೆ ಯಾವುದು" ಎಂದು ಕೇಳಿದರು. ಅದಕ್ಕೆ ಆತ ತನಗೆ ಇಷ್ಟ ಮುಂತಾದುವು ಗಳಲ್ಲಿ ನಂಬಿಕೆ ಇಲ್ಲ. ಎಲ್ಲರಲ್ಲಿಯೂ ಎಲ್ಲಾ ಕಾಲದಲ್ಲಿಯೂ ಸರ್ವಾಂತರ್ಯಾಮಿಯನ್ನು ಅನುಭವಿಸಬೇಕು ಎಂದನು. ಅದಕ್ಕೆ ಶ್ರೀರಾಮಕೃಷ್ಣರು, "ಆಧ್ಯಾತ್ಮಿಕ ಜೀವನದಲ್ಲಿಯೇ ಅದು ಕೊನೆಯ ಮೆಟ್ಟಿಲು. ಅದು ಪ್ರಾರಂಭದಲ್ಲಿಯೇ ಹೇಗೆ ಬರುವುದು" ಎಂದರು. ಆದಕ್ಕೆ ಶಿಷ್ಯ ತನಗೆ ಅದು ಬರುವ ತನಕ ತೃಪ್ತಿಯಿಲ್ಲ. ಅದಕ್ಕಾಗಿ ಹೋರಾಡುವೆ ಎಂದನು. ಶ್ರೀರಾಮಕೃಷ್ಣರು 'ಜಗನ್ಮಾತೆ ನಿನ್ನ ಅಭೀಷ್ಟವನ್ನು ನೆರವೇರಿಸಲಿ' ಎಂದರು.

ಶ್ರೀರಾಮಕೃಷ್ಣರು ಶಿಷ್ಯರಿಗೆ ಸ್ವಾತಂತ್ರ್ಯವನ್ನೇನೊ ಕೊಡು ತ್ತಿದ್ದರು. ಆದರೆ ಅದು ಸ್ವಚ್ಛಂದಕ್ಕೆ ತಿರುಗಿದರೆ ಮಿತಿಮೀರಿ ಹೋದರೆ ಅದನ್ನು ತಿದ್ದುತ್ತಿದ್ದರು. ನರೇಂದ್ರ (ವಿವೇಕಾನಂದ) ಮತ್ತು ರಾಖಾಲ್ (ಬ್ರಹ್ಮಾನಂದ) ಶ್ರೀರಾಮಕೃಷ್ಣರ ಬಳಿಗೆ ಬರುತ್ತಿದ್ದರು. ಇಬ್ಬರೂ ಬ್ರಹ್ಮಸಮಾಜಕ್ಕೆ ಸೇರಿದವರು. ಅಲ್ಲಿ ವಿಗ್ರಹ ಪೂಜಿಸುವುದಿಲ್ಲ, ಅದಕ್ಕೆ ಬಾಗುವುದಿಲ್ಲ ಎಂಬ ಶಪಥ ವನ್ನು ಮಾಡಬೇಕು. ರಾಖಾಲ ಶ್ರೀರಾಮಕೃಷ್ಣರೇ ನಮಸ್ಕರಿಸು ತ್ತಿದ್ದ ಶ್ರೀಕಾಳಿಕಾಮಾತೆಯನ್ನು ನೋಡಿದಾಗ ನಮಸ್ಕಾರ ಮಾಡಿ ಬಿಟ್ಟ. ನರೇಂದ್ರ ಇದನ್ನು ನೋಡಿ ಅವನು ಶಪಥಕ್ಕೆ ವಿರೋಧ ವಾಗಿ ಹೋಗಿರುವನು ಎಂದು ಅವನ ಹತ್ತಿರ ಮಾತನಾಡು ವುದನ್ನೇ ಬಿಟ್ಟುಬಿಟ್ಟ. ಶ್ರೀರಾಮಕೃಷ್ಣರು ಇದನ್ನು ಗಮನಿಸಿದರು. ನರೇಂದ್ರನಿಗೆ, "ನೀನೇ ತಾನೆ ದೇವರು ಸರ್ವಾಂತರ್ಯಾಮಿ

ಯೆಂದು ಹೇಳುವುದು. ಅವನು ಎಲ್ಲಾ ಕಡೆಯಲ್ಲಿಯೂ ಇದ್ದರೆ ವಿಗ್ರಹದಲ್ಲಿ ಏಕೆ ಇಲ್ಲ. ಇನ್ನೊಬ್ಬನ ಭಾವಕ್ಕೆ ಏಕೆ ನಷ್ಟವನ್ನು ತರುತ್ತೀಯೆ" ಎಂದು ತಿದ್ದಿದರು.

ಒಂದು ದಿನ ನಿರಂಜನನೆಂಬ ಶಿಷ್ಯ ಕಲ್ಕತ್ತೆಯಿಂದ ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಬರುತ್ತಿದ್ದ. ದೋಣಿಯಲ್ಲಿ ಕುಳಿತ ಕೆಲವರು ಶ್ರೀರಾಮಕೃಷ್ಣರನ್ನು ಟೀಕಿಸುತ್ತಿದ್ದರು. ನಿರಂಜನನಿಗೆ ಅದನ್ನು ಸಹಿಸಲು ಆಗಲಿಲ್ಲ. ದೋಣಿಯ ಒಂದು ಕೊನೆಗೆ ಹೋಗಿ ಅದನ್ನು ಅಲ್ಲಾಡಿಸುತ್ತ ನೀವು ಶ್ರೀರಾಮಕೃಷ್ಣರನ್ನು ದೂರುವುದನ್ನು ಬಿಡದೆ ಇದ್ದರೆ ಈ ದೋಣಿಯನ್ನೇ ಮುಳುಗಿಸಿ ಬಿಡುತ್ತೇನೆ ಎಂದು ಹೆದರಿಸಿದ. ಕುಳಿತವರೆಲ್ಲ ಅಂಜಿಕೆಯಿಂದ ತೆಪ್ಪಗಾದರು. ಶ್ರೀರಾಮಕೃಷ್ಣರ ಬಳಿಗೆ ಬಂದ ಮೇಲೆ ಈ ಘಟನೆಯನ್ನು ವಿವರಿಸಿದ. ಅದಕ್ಕೆ ಅವರು, ಕೋಪದಿಂದ ಎಂತಹ ಅನಾಹುತ ಮಾಡಿಬಿಡುತ್ತಿದ್ದೆ. ಅವರು ಬೈದರೆ ನನಗೇನು, ಸೂರ್ಯನಿಗೆ ಉಗುಳಿದರೆ ಅದಕ್ಕೇನಾದರೂ ಕುಂದೆ ಎಂದು ಸಮಾಧಾನ ಮಾಡಿದರು.

ಯೋಗಿನ್ ಎಂಬ ಮತ್ತೊಬ್ಬ ಶಿಷ್ಯನೂ ಒಂದು ದಿನ ಕಲ್ಕತ್ತೆಯಿಂದ ದೋಣಿಯಲ್ಲಿ ಬರುತ್ತಿದ್ದಾಗ ಹಲವರು ಶ್ರೀರಾಮಕೃಷ್ಣರನ್ನು ಟೀಕಿಸುತ್ತಿದ್ದರು. ಆತನ ಸ್ವಭಾವ ಮೃದು, ಸ್ವಲ್ಪ ಅಂಜಿಕೆಯವನು ಎಂತಲೇ ಹೇಳಬಹುದು. ಅದನ್ನೆಲ್ಲ ಕೇಳಿ ತೆಪ್ಪಗಿದ್ದ. ದಕ್ಷಿಣೇಶ್ವರಕ್ಕೆ ಬಂದ ಮೇಲೆ ನಡೆದುದನ್ನೆಲ್ಲ ಶ್ರೀರಾಮಕೃಷ್ಣರಿಗೆ ಹೇಳಿದ. ಆಗ ಶ್ರೀರಾಮಕೃಷ್ಣರು ಅವನಿಗೆ "ಗುರುನಿಂದೆ ಮಾಡಿದಾಗ ನೀನು ಸುಮ್ಮನೆ ಇದ್ದೆಯೊ ? ಅವರನ್ನು ದಂಡಿಸಬೇಕು, ಇಲ್ಲವೆ ಆ ಸ್ಥಳದಿಂದ ಬಿಟ್ಟು ಬರಬೇಕು ಎಂದು ಶಾಸ್ತ್ರ ಹೇಳುವುದು" ಎಂದರು. ಆ ನಿರ್ಬಲ ಮನಸ್ಸಿನವನಿಗೆ ಸ್ವಲ್ಪ ಧೈರ್ಯ ತುಂಬಬೇಕೆಂದು ಹಾಗೆ ಹೇಳಿದರು.

ವಿಮರ್ಶಾತ್ಮಕ ಬುದ್ಧಿಯನ್ನು ಚೆನ್ನಾಗಿ ರೂಢಿಸಬೇಕೆಂದು ಶಿಷ್ಯರಿಗೆ ಹೇಳುತ್ತಿದ್ದರು. ಎಲ್ಲಾ ಜೀವನಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕ ಜೀವನದಲ್ಲಿ ಮೋಸ ಹೆಚ್ಚು. ಏಕೆಂದರೆ ಇಲ್ಲಿ ಯೋಗ್ಯವಾದುದನ್ನು ಗೊತ್ತು ಹಚ್ಚುವುದು ಬಹಳ ಕಷ್ಟ. ಆದ ಕಾರಣ ಒಬ್ಬರನ್ನು ಸ್ವೀಕರಿಸುವುದಕ್ಕಿಂತ ಮುಂಚೆ ಚೆನ್ನಾಗಿ ಅವರನ್ನು ಪರೀಕ್ಷೆ ಮಾಡಿ ಅನಂತರ ಸ್ವೀಕರಿಸಿ ಎಂದು ಅವರು ಶಿಷ್ಯರಿಗೆ ಹೇಳುತ್ತಿದ್ದರು.

ಶ್ರೀರಾಮಕೃಷ್ಣರೇ ತಮಗಾಗುತ್ತಿದ್ದ ದರ್ಶನಗಳು ಸತ್ಯವೊ ಅಥವಾ ತಮ್ಮ ಕಲ್ಪನೆಯೊ ಎಂದು ಅನುಮಾನಿಸತೊಡಗಿದರು. ತಾಯಿಗೆ ತಾನು ಹೇಳುವುದನ್ನು ಬಡಪೆಟ್ಟಿಗೆ ನಂಬದವನೊಬ್ಬ ನನ್ನು ಕಳುಹಿಸಿ ಎಂದು ಬೇಡಿದರು. ಇವರ ಪ್ರಾರ್ಥನೆ ಕೇಳಿಯೇ ಇರಬೇಕು ತಾಯಿ ನರೇಂದ್ರನನ್ನು ಇವರ ಬಳಿಗೆ ಕಳು ಹಿಸಿದಳು. ಆತ ಶ್ರೀರಾಮಕೃಷ್ಣರನ್ನು ಮೊದಮೊದಲು ಹೆಜ್ಜೆ ಹೆಜ್ಜೆಗೆ ಮೂದಲಿಸತೊಡಗಿದ. ಶ್ರೀರಾಮಕೃಷ್ಣರ ದರ್ಶನ ಗಳನ್ನು ಪಿತ್ತಭ್ರಮಣ ಎಂದ. ಶ್ರೀರಾಮಕೃಷ್ಣರಿಗೆ ಶಿಷ್ಯರ ಮೇಲಿರುವ ಪ್ರೇಮವನ್ನು ಒಂದು ವ್ಯಾಮೋಹ ಎಂದ. ತನ್ನ ವಿಷಯದಲ್ಲಿ ಶ್ರೀರಾಮಕೃಷ್ಣರು ಭವ್ಯ ಭವಿಷ್ಯವನ್ನು ನುಡಿದಾಗ, ಹೀಗೆಲ್ಲ ಹೇಳಬೇಡಿ ಜನ ನಿಮ್ಮನ್ನು ಹುಚ್ಚರೆಂದು ಭಾವಿಸ ಬಹುದು ಎಂದ. ತನಗೇ ಶ್ರೀರಾಮಕೃಷ್ಣರ ಸ್ಪರ್ಶದಿಂದ ಆದ ಅನುಭವವನ್ನು ಇದೇನು ಮನಸ್ಸಿನ ದೌರ್ಬಲ್ಯವೇ ಎಂದು ಅನುಮಾನಿಸಿದ.

ಕಾಮಕಾಂಚನ ತ್ಯಾಗವೇ ಶ್ರೀರಾಮಕೃಷ್ಣರ ಜೀವನದ ಪಲ್ಲವಿಯಾಗಿತ್ತು. ಒಂದು ಸಲ ನರೇಂದ್ರ ಶ್ರೀರಾಮಕೃಷ್ಣರು ಹೊರಗೆ ಹೋಗಿದ್ದಾಗ ಅವರ ಹಾಸಿಗೆಯ ಕೆಳಗೆ ಒಂದು

ರೂಪಾಯಿಯನ್ನು ಬಚ್ಚಿಟ್ಟ. ಶ್ರೀರಾಮಕೃಷ್ಣರು ಬಂದು ಹಾಸಿಗೆಯ ಮೇಲೆ ಕುಳಿತೊಡನೆಯೆ ಅವರಿಗೆ ಒಂದು ಚೇಳು ಕುಟುಕಿದಂತೆ ಆಯಿತು. ಅವರು ಹಾಸಿಗೆಯಿಂದ ತಕ್ಷಣ ಎದ್ದು ಹತ್ತಿರದ್ದವರಿಗೆ ಹಾಸಿಗೆಯ ಕೆಳಗೆ ಏನಾದರೂ ಇದೆಯೆ ನೋಡಿ ಎಂದು ಹೇಳಿದರು. ಹಾಸಿಗೆಯನ್ನು ಕೊಡವಿದಾಗ ಒಂದು ರೂಪಾಯಿ ಕೆಳಗೆ ಬಿತ್ತು. ಶ್ರೀರಾಮಕೃಷ್ಣರು ಯಾವುದನ್ನು ಬಿಟ್ಟೆ ಎಂದು ಹೇಳುತ್ತಿದ್ದರೋ ಅವರ ದೇಹಾದ್ಯಂತವೂ ಬಿಟ್ಟಿತ್ತು. ಇದನ್ನು ಮಾಡಿದವನು ನರೇಂದ್ರನೇ ಎಂದು ಗೊತ್ತಾದ ಮೇಲೆ ಅವರು ಕೋಪಗೊಳ್ಳದೆ "ಅಂಗಡಿಯವನು ಸಾಮಾನನ್ನು ಕೊಂಡವೇಲೆ ಗಿರಾಕಿ ಕೊಡುವ ಹಣವನ್ನು ಪರೀಕ್ಷೆಮಾಡಿ ತೆಗೆದುಕೊಳ್ಳುವಂತೆ ನಾನು ಹೇಳುವುದನ್ನು ಪರೀಕ್ಷೆಮಾಡಿ ನಂತರ ಸ್ವೀಕರಿಸು" ಎಂದು ಹೇಳಿದರು.

ಒಂದು ದಿನ ರಾತ್ರಿ ಪರಮಹಂಸರ ಕೋಣೆಯಲ್ಲಿ ಯೋಗೀಂದ್ರ ಎಂಬ ಒಬ್ಬ ಶಿಷ್ಯ ಮಲಗಿದ್ದ. ಸುಮಾರು ಅರ್ಧರಾತ್ರಿ ಹೊತ್ತಿನಲ್ಲಿ ಶ್ರೀರಾಮಕೃಷ್ಣರು ಎದ್ದು ಹೊರಗೆ ಹೋದರು. ಅದೇ ಸಮಯದಲ್ಲಿ ಯೋಗೀಂದ್ರನಿಗೆ ಎಚ್ಚರವಾಗಿ ನೋಡಿದಾಗ ಶ್ರೀರಾಮಕೃಷ್ಣರು ಹಾಸಿಗೆಯ ಮೇಲೆ ಇರಲಿಲ್ಲ. ತಕ್ಷಣ ಅವನಿಗೆ ಅನುಮಾನ ಬಂತು. ಬಹುಶಃ ಶ್ರೀರಾಮಕೃಷ್ಣರು ಶಾರದಾದೇವಿಯವರ ಕೋಣೆಯ ಕಡೆ ಹೋಗಿರಬಹುದೇನೋ ಎಂದು ತಕ್ಷಣವೇ ಆತನು ಎದ್ದು ಶಾರದಾದೇವಿಯವರ ಕೋಣೆ ಹೊರಗೆ ಕಾಯುತ್ತಿದ್ದ. ಅಷ್ಟು ಹೊತ್ತಿಗೆ ಶ್ರೀರಾಮಕೃಷ್ಣರು ಗಂಗಾನದಿಯ ತೀರದ ಕಡೆಯಿಂದ ಬರುತ್ತಿದ್ದರು. ಯೋಗೀಂದ್ರ ದಾರಿಯಲ್ಲಿ ನಿಂತಿರುವುದನ್ನು ನೋಡಿ, "ಏತಕ್ಕೆ ಇಲ್ಲಿ ನಿಂತಿರುವೆ?" ಎಂದು ವಿಶ್ವಾಸದಿಂದ ಕೇಳಿದರು.

ಯೋಗೀಂದ್ರನಿಗೆ ನಾಚಿಕೆಯಾಗಿ ಮಾತನಾಡದೇ ಹೋದ, ಶ್ರೀರಾಮಕೃಷ್ಣರು ತಮ್ಮ ಶಿಷ್ಯನ ಮನಸ್ಸಿನಲ್ಲಿದ್ದುದನ್ನು ಗ್ರಹಿಸಿ. "ಸಾಧುವನ್ನು ಹಗಲು ಮಾತ್ರ ಪರೀಕ್ಷೆ ಮಾಡಿದರೆ ಸಾಲದು, ರಾತ್ರಿಯೂ ಪರೀಕ್ಷೆ ಮಾಡಬೇಕು" ಎಂದರು.

ಸಾಧಾರಣ ಗುರುಗಳಾಗಿದ್ದರೆ, ಶಿಷ್ಯ ತಮ್ಮಲ್ಲಿ ಇಷ್ಟು ಸಂದೇಹಪಡುತ್ತಾನೆ. ಸ್ವಲ್ಪವೂ ಇವನಲ್ಲಿ ಗುರುಭಕ್ತಿ ಇಲ್ಲ ಎಂದು ಎಷ್ಟು ಕೋಪಿಷ್ಟರಾಗುತ್ತಿದ್ದರೊ ! ಯಾವ ಶಾಪವನ್ನು ಕೊಡುತ್ತಿದ್ದರೊ! ಆದರೆ ಶ್ರೀರಾಮಕೃಷ್ಣರಿಗೆ ಶಿಷ್ಯರಲ್ಲಿ ಇಂತಹ ಚಾಳಿಯನ್ನು ಕಂಡಂತೆಲ್ಲ ಪ್ರೇಮ ಅವರ ಮೇಲೆ ಮತ್ತೂ ಅಧಿಕವಾಗುತ್ತಿತ್ತು. ಇವರು ನಿಜವಾಗಿ ಸತ್ವವಿರುವ ಶಿಷ್ಯರು ಎನ್ನುತ್ತಿದ್ದರು.

ಶ್ರೀರಾಮಕೃಷ್ಣರು ತಮ್ಮ ಶಿಷ್ಯರಿಗೆ ಯಾವಾಗಲೂ ತಮ್ಮ ಸ್ವಂತ ಪ್ರಯತ್ನದ ಮೇಲೆ ನಿಲ್ಲಿ ಎಂದು ಹೇಳುತ್ತಿದ್ದರು. ಶ್ರೀರಾಮಕೃಷ್ಣರು ಸಂದೇಹದಲ್ಲಿ ನರಳಾಡುವ ಶಿಷ್ಯರು ದೇವರಿರುವನೆ, ಇದ್ದರೆ ಅವನನ್ನು ಅನುಭವಿಸಬಹುದೆ ಎಂದು ಪ್ರಶ್ನೆಗಳನ್ನು ಕೇಳಿದಾಗ ಕೆಲವುವೇಳೆ ಅತೀಂದ್ರಿಯ ಅನುಭವದ ರುಚಿಯನ್ನು ತೋರಿಸುತ್ತಿದ್ದರು. ಆದರೆ ಶಿಷ್ಯರಿಗೆ ಅದರಿಂದಲೇ ತೃಪ್ತಿ ಕೊಡುವುದಕ್ಕಲ್ಲ. ಅಂತಹ ಒಂದು ಅನುಭವ ಇದೆ. ಅದನ್ನು ಪಡೆದುಕೊಳ್ಳಬೇಕಾದರೆ ಸಾಧನೆಯ ಬೆಲೆ ಕೊಡಬೇಕು ಎಂಬುದನ್ನು ಒತ್ತಿ ಹೇಳುತ್ತಿದ್ದರು. ಅವರಿತ್ತ ಕ್ಷಣಕಾಲದ ಅನುಭವವನ್ನು ಶಿಷ್ಯರು ತಮ್ಮ ಜೀವನದ ಶಾಶ್ವತ ಅನುಭವವನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರಚಂಡ ಸಾಧನೆಯನ್ನು ಮಾಡಬೇಕಾಗಿ ಬಂದಿತು.

ಭಕ್ತಿ ವೈರಾಗ್ಯ ಇವುಗಳ ನೆಪದಲ್ಲಿ ಅಜಾಗರೂಕತೆ, ಅಸಡ್ಡೆ,

ಅವಿವೇಕ ಇವುಗಳು ಬಂದರೆ ಖಂಡಿಸದೆ ಬಿಡುತ್ತಿರಲಿಲ್ಲ. ಭಗವಂತನ ಮೇಲೆ ನಮಗೆ ಪ್ರೀತಿ ಇದ್ದರೆ ವ್ಯವಹಾರದಲ್ಲಿ ಅಸಡ್ಡೆಯನ್ನು ತೋರಬಾರದು. ಶ್ರೀರಾಮಕೃಷ್ಣರು ಒಂದು ಕ್ಷಣದಲ್ಲಿ ನಿರ್ವಿಕಲ್ಪ ಸಮಾಧಿಗೆ ಹೋಗುತ್ತಿದ್ದರು. ಆದರೂ ತಮ್ಮ ಕೋಣೆಗೆ ಬೀಗ ಹಾಕಿದ ಮೇಲೆ ಮೂರು ಸಲ ಎಳೆದು ನೋಡುತ್ತಿದ್ದರು. ಅದು ಸರಿಯಾಗಿ ಹಾಕಿಕೊಂಡಿದೆಯೆ ಇಲ್ಲವೆ ಎಂಬುದನ್ನು ನೋಡುವುದಕ್ಕಾಗಿ. ಯಾವುದಾದರೂ ಒಂದು ವಸ್ತುವನ್ನು ಒಂದು ಸ್ಥಳದಿಂದ ತೆಗೆದರೆ ಪುನಃ ಅಲ್ಲೇ ಇಡುತ್ತಿದ್ದರು. ಕತ್ತಲಲ್ಲಿ ಬಂದು ತಡಕಿದರೂ ಅದು ಸಿಕ್ಕುವಂತೆ ಇರಬೇಕು ಎನ್ನುತ್ತಿದ್ದರು. ಒಂದು ಸಲ ಯೋಗೀಂದ್ರನಿಗೆ ಒಂದು ಕಾವಲಿ ತರಲು ಹೇಳಿದರು. ಅವನು ಸರಿಯಾಗಿ ನೋಡದೆ ಒಂದು ಬಿರುಕು ಬಿಟ್ಟಿದ್ದನ್ನು ತಂದನು. ಶ್ರೀರಾಮಕೃಷ್ಣರು ಇದನ್ನು ನೋಡಿ "ಭಕ್ತನಾದರೆ ಮೂಢನಂತೆ ವರ್ತಿಸುವುದೆ? ವ್ಯಾಪಾರಿ ಧರ್ಮಕ್ಕಾಗಲ್ಲ ಇರುವುದು. ಅವನು ಕೊಡುವುದನ್ನು ಪರೀಕ್ಷೆ ಮಾಡಿ ತರಬೇಕು. ಕೆಲವು ಸಾಮಾನುಗಳಿಗೆ ಕೊಸರನ್ನು ಕೊಡುವರು. ಅದನ್ನೂ ಬಿಡದೆ ವಸೂಲಿ ಮಾಡಬೇಕು" ಎಂದರು.

ಪವಾಡದ ಮೇಲೆ ಸ್ವಲ್ಪವೂ ಮನಸ್ಸು ಹೋಗಕೂಡದೆಂದು ಶಿಷ್ಯರಿಗೆ ಪದೇ ಪದೇ ಎಚ್ಚರಿಸುತ್ತಿದ್ದರು. ಸಾಧಾರಣ ಮನುಷ್ಯರಿಗೆ ಒಬ್ಬನು ಮಹಾತ್ಮಗಿರಿಯನ್ನು ಅಳೆಯುವುದು ಅವನು ಮಾಡುವ ಪವಾಡಗಳಿಂದ. ಎಷ್ಟು ಜನರ ರೋಗವನ್ನು ಅವನು ಗುಣ ಮಾಡಿರುವನು, ಎಷ್ಟು ಜನರಿಗೆ ಅವನ ಅನುಗ್ರಹದಿಂದ ಮಕ್ಕಳಾಗಿವೆ, ಹಣ ಸಿಕ್ಕಿದೆ, ಪರೀಕ್ಷೆಯಲ್ಲಿ ತೇರ್ಗಡೆ ಆಗಿದೆ ಇತ್ಯಾದಿ. ಇವು ಒಬ್ಬನ ಮಹಾತ್ಮೆಗೆ ಗುರುತಲ್ಲ. ಅಷ್ಟ

ಹಾದಿಗೆ ಬಿದ್ದ ಭ್ರಷ್ಟನ ಗುರುತು. ಇದನ್ನು ನಿದರ್ಶಿಸಲು ಒಂದು ಕಥೆ ಹೇಳುತ್ತಿದ್ದರು : ಒಬ್ಬ ಹನ್ನೆರಡು ವರುಷಗಳು ತಪಸ್ಸು ಮಾಡಿ ನೀರಿನ ಮೇಲೆ ನಡೆಯುವ ವಿದ್ಯೆಯನ್ನು ಕಲಿತುಕೊಂಡ. ಒಂದು ದಿನ ಒಬ್ಬ ಋಷಿ ನದಿಯಲ್ಲಿ ಅತ್ತ ಕಡೆಗೆ ಹೋಗುವುದಕ್ಕೆ ದೋಣಿಯನ್ನು ಕಾಯುತ್ತಿದ್ದ. ಅವನೆದುರಿಗೆ ವರ ಪಡೆದವನು ನೀರಿನ ಮೇಲೆ ನಡೆದುಕೊಂಡು ಬಂದ. ಋಷಿಗೆ ಆಶ್ಚರ್ಯವಾಗಿ ಇದು ಹೇಗೆ ಸಿದ್ಧಿಸಿತು ಎಂದು ಕೇಳಿದ. ಆತ ಇದಕ್ಕೆ ಹನ್ನೆರಡು ವರ್ಷದ ತಪಸ್ಸನ್ನು ಖರ್ಚು ಮಾಡಿರುವೆ ಎಂದ. ಋಷಿ ನಕ್ಕು, ಮೂರು ಕಾಸಿಗೆ ದೋಣಿಯವನು ಇತ್ತ ಕಡೆಯಿಂದ ಅತ್ತಕಡೆಗೆ ಸಾಗಿಸುವನು. ಅದಕ್ಕೆ ಹನ್ನೆರಡು ವರುಷ ತಪಸ್ಸನ್ನು ಏತಕ್ಕೆ ಖರ್ಚು ಮಾಡಿದೆ ಎಂದು ಹಂಗಿಸಿದನು.

ಉಪದೇಶದಲ್ಲಿ ಯಾವುದು ಮುಖ್ಯ, ಯಾವುದು ಗೌಣ ಎಂಬುದನ್ನು ಗ್ರಹಿಸಬೇಕು. ಸುಮ್ಮನೆ ಅಕ್ಷರಶಃ ಹೇಳಿದ್ದನ್ನೆಲ್ಲ ಮಾಡಕೂಡದು. ಇದನ್ನು ನಿದರ್ಶಿಸಲು ಒಂದು ಕಥೆಯನ್ನು ಹೇಳುತ್ತಿದ್ದರು: ಗುರು ಒಬ್ಬ ತನ್ನ ಶಿಷ್ಯನಿಗೆ "ಸರ್ವಂ ಖಲ್ವಿದಂ ಬ್ರಹ್ಮ" ಅಂದರೆ ಎಲ್ಲಾ ಬ್ರಹ್ಮ ಎಂದು ಹೇಳಿದ. ಶಿಷ್ಯ ಪಾಠ ಕೇಳಿಕೊಂಡು ದಾರಿಯಲ್ಲಿ ಬರುತ್ತಿದ್ದ. ದಾರಿಯಲ್ಲಿ ಒಂದು ಆನೆ ಮಾವಟಿಗನ ಹತೋಟಿ ತಪ್ಪಿಸಿಕೊಂಡು ಓಡಿಹೋಗುತ್ತಿತ್ತು. ಮಾವಟಿಗ ದಾರಿ ಬಿಡಿ ದಾರಿ ಎಂದು ಅರಿಚಿಕೊಳ್ಳುತ್ತಿದ್ದ. ದಾರಿಯಲ್ಲಿದ್ದವರೆಲ್ಲ ದಾರಿ ಅತ್ತ ಸರಿದರು. ಎಲ್ಲಾ ಬ್ರಹ್ಮ ಮಯ ಎಂಬ ಉಪದೇಶ ಕೇಳಿದ ಶಿಷ್ಯ ಆಲೋಚನೆ ಮಾಡಿದ, ನಾನು ಬ್ರಹ್ಮ, ಆನೆಯೂ ಬ್ರಹ್ಮ, ನಾನೇಕೆ ದಾರಿ ಬಿಡಬೇಕು ಎಂದು. ಆನೆ ಇವನ ಹತ್ತಿರ ಬಂತು. ಸೊಂಡಿಲಿನಿಂದ ಎತ್ತಿ ಇವನನ್ನು ಆಚೆಗೆ ಒಗೆದು ಹೋಯಿತು. ಅವನು ಪ್ರಜ್ಞೆ

ತಪ್ಪಿಬಿದ್ದನು. ಅವನ ಗುರುಗಳು ಅವನನ್ನು ಹುಡುಕಿಕೊಂಡು ಬಂದರು. ಅವನ ಶೈತ್ಯೋಪಚಾರಮಾಡಿದ ಮೇಲೆ ಅವನಿಗೆ ಪ್ರಜ್ಞೆ ಬಂತು. ಏತಕ್ಕೆ ಹೀಗಾಯಿತು ಎಂದು ಕೇಳಿದರು. ಅದಕ್ಕೆ ಶಿಷ್ಯ, ನೀವೇ ಎಲ್ಲ ಬ್ರಹ್ಮಮಯ ಎಂದು ಹೇಳಿದಿರಿ. ಆದಕ್ಕೆ ಆನೆಗೆ ದಾರಿ ಬಿಡಲಿಲ್ಲ ಎಂದ. ಅದಕ್ಕೆ ಗುರುಗಳು ಮೇಲಿದ್ದ ಮಾವಟಿಗನೂ ಬ್ರಹ್ಮನೆ ; ಅವನ ಮಾತನ್ನೇಕೆ ಕೇಳಲಿಲ್ಲ ಎಂದರು.

ಕೋಪವನ್ನು ನಟಿಸು, ಆದರೆ ಪ್ರತೀಕಾರ ಮಾಡಬೇಡ ಎಂಬುದನ್ನು ವಿವರಿಸುವುದಕ್ಕೆ ಮತ್ತೊಂದು ಕಥೆಯನ್ನು ಹೇಳಿದರು : ಒಂದು ಸರ್ಪ ಒಂದು ಕಡೆ ವಾಸವಾಗಿತ್ತು. ಯಾರಿಗೂ ಆ ದಾರಿಯಲ್ಲಿ ಹೋಗಲು ಧೈರ್ಯವಿರಲಿಲ್ಲ. ಯಾರು ಆ ದಾರಿಯಲ್ಲಿ ಹೋದರೂ ಇದು ಅವರನ್ನು ಕಚ್ಚಿ ಸಾಯಿಸುತ್ತಿತ್ತು. ಒಂದು ದಿನ ಒಬ್ಬ ಸಾಧು ಅಲ್ಲಿಗೆ ಹೋಗು ತ್ತಿದ್ದನು. ಹಿಂದಿನಂತೆ ಆ ಸರ್ಪ ಇವನನ್ನು ಕಚ್ಚಬೇಕೆಂದು ಅಟ್ಟಿಸಿಕೊಂಡು ಬಂದಿತು. ಆದರೆ ಅದು ಪುಣ್ಯಾತ್ಮನನ್ನು ಸಮೀಪಿಸಿದಾಗ ತನ್ನ ಧೈರ್ಯವನ್ನೆಲ್ಲ ಕಳೆದುಕೊಂಡು ಅವನ ಸಾಧುತ್ವಕ್ಕೆ ವಶವಾಯಿತು. ಹಾವನ್ನು ನೋಡಿ ಆ ಸಾಧು "ಏನು ಸ್ನೇಹಿತನೆ, ನೀನು ನನ್ನನ್ನು ಕಚ್ಚಬೇಕೇ?" ಎಂದನು ಸರ್ಪಕ್ಕೆ ನಾಚಿಕೆಯಾಗಿ ಅದು ಉತ್ತರ ಕೊಡಲಿಲ್ಲ. ಸಾಧು "ಸ್ನೇಹಿತನೆ ಕೇಳು, ಇನ್ನು ಮುಂದೆ ಯಾರಿಗೂ ಹಿಂಸೆಯನ್ನು ಕೊಡಬೇಡ" ಎಂದನು. ಹಾವು ಅವನಿಗೆ ನಮಸ್ಕಾರ ಮಾಡಿ ಒಪ್ಪಿಕೊಂಡಿತು. ಸಾಧು ತನ್ನ ದಾರಿಯನ್ನು ಹಿಡಿದುಕೊಂಡು ಹೋದ ಮೇಲೆ ಹಾವು ಬಿಲವನ್ನು ಸೇರಿತು. ಅಂದಿನಿಂದ ಸರ್ಪ ಮತ್ತೊಬ್ಬರಿಗೆ ಹಿಂಸೆಯನ್ನು ಕೊಡುವ ಯೋಚನೆಯನ್ನು

ಮಾಡದೆ ಬಹಳ ಸಾಧು ಪ್ರಾಣಿಯಾಗಿ ಬಾಳತೊಡಗಿತು ಕೆಲವು ದಿನಗಳಲ್ಲಿ ಸರ್ಪ ಕಚ್ಚುವುದನ್ನು ಬಿಟ್ಟಿರುವುದೆಂದು, ಅದಕ್ಕೆ ವಯಸ್ಸಾಗಿ ಹೋಗಿರುವುದೆಂದು ತಿಳಿದು, ಅದು ಕಂಡರೆ ಸಾಕು ಜನರು ಹೊಡೆಯುತ್ತಿದ್ದರು. ಹಾವು ಹಗಲು ಹೊರಗೆ ಬರುವುದನ್ನು ಬಿಟ್ಟು ಯಾರೂ ಇಲ್ಲದಾಗ ತೆವಳಿಕೊಂಡು ಬಂದು ತನಗೆ ಸಿಕ್ಕಿದುದನ್ನು ತಿಂದು ಹೋಗುತ್ತಿತ್ತು. ಸ್ವಲ್ಪ ಕಾಲವಾದಮೇಲೆ ಇದಕ್ಕೆ ಬುದ್ಧಿವಾದ ಹೇಳಿದ ಸಾಧು ಆ ಮಾರ್ಗವಾಗಿ ಬಂದ. ಹಾವನ್ನು ಕೂಗಿದ. ಅದು ತನ್ನ ಜಜ್ಜಿಹೋದ ದೇಹವನ್ನು ಕಷ್ಟದಿಂದ ನೂಕಿಕೊಂಡು ಸಾಧುವಿನ ಹತ್ತಿರ ಬಂದಿತು. ಸಾಧುಗಳು ಅದರ ದುಸ್ಥಿತಿಗೆ ಕಾರಣವೇನು ಎಂದು ಕೇಳಿದರು. ಆ ಸರ್ಪ ಸಾಧುಗಳಿಂದ ಉಪದೇಶವನ್ನು ಕೇಳಿದ ಮೇಲೆ ಯಾರಿಗೂ ಕಚ್ಚದೆ ಇದ್ದುದನ್ನು ನೋಡಿ ಹುಡುಗರು ಹೊಡೆಯುತ್ತಿದ್ದರು ಎಂದಿತು. ಅದಕ್ಕೆ ಸಾಧು "ನಾನು ನಿನಗೆ ಕಚ್ಚಬೇಡ ಎಂದು ಹೇಳಿದೆ. ಆದರೆ ಬುಸುಗುಟ್ಟಿ ಅಂಜಿಸಬೇಡ ಎಂದು ಹೇಳಲಿಲ್ಲವಲ್ಲ!" ಎಂದರು. ಇದರಂತೆಯೇ ನೀವು ಪ್ರಪಂಚದಲ್ಲಿ ಇರಬೇಕಾದರೆ ಮತ್ತೊಬ್ಬರಿಗೆ ಹಿಂಸೆ ಕೊಡಬೇಡಿ. ಆದರೆ ಅವರು ನಿಮಗೆ ಹಿಂಸೆ ಕೊಡುವುದಕ್ಕೆ ಅವಕಾಶ ಕೊಡಬೇಡಿ ಎಂದು ಶ್ರೀರಾಮಕೃಷ್ಣರು ಹೇಳಿದರು.

ಎಲ್ಲರೂ ನಾರಾಯಣನೆ ನಿಜ. ಆದರೆ ಎಲ್ಲರನ್ನೂ ಒಂದೇ ವಿಧದಲ್ಲಿ ನೋಡಲಾಗುವುದಿಲ್ಲ ಎನ್ನುತ್ತಿದ್ದರು. ಎಲ್ಲವೂ ನೀರೆ ಆದರೆ ಎಲ್ಲಾ ನೀರನ್ನೂ ಕುಡಿಯಲಾಗುವುದಿಲ್ಲ. ಕೆಲವನ್ನು ಕಾಲು ತೊಳೆಯುವುದಕ್ಕೆ, ಕೆಲವನ್ನು ಮುಸುರೆ ತಿಕ್ಕುವುದಕ್ಕೆ, ಕೆಲವನ್ನು ಪೂಜೆಗೆ ಉಪಯೋಗಿಸಬಹುದು ಎಂದು ಹೇಳು

ತ್ತಿದ್ದರು. ಎಲ್ಲಾ ನಾರಾಯಣಸ್ವರೂಪರೇ ನಿಜ. ಆದರೆ ಕೆಲವರು ಸಾಧು ನಾರಾಯಣರು, ಮತ್ತೆ ಕೆಲವರು ಚೋರ ನಾರಾಯಣರು, ಕೆಲವರು ವ್ಯಾಘ್ರ ನಾರಾಯಣರು.

ಸಾಧಕ ತನ್ನ ಮನೋದೌರ್ಬಲ್ಯದೊಂದಿಗೆ ಹೋರಾಡಿ ಪಾರಾಗುವುದು ಬಹಳ ಕಷ್ಟ ಮತ್ತು ಅಪಾಯಕರ. ಶ್ರೀರಾಮಕೃಷ್ಣರು ಆ ದೌರ್ಬಲ್ಯವನ್ನೇ ದೇವರೆಡೆಗೆ ತಿರುಗಿಸುತ್ತಿದ್ದರು. ಗಿರೀಶ್ ಚಂದ್ರಘೋಷ್ ಎಂಬ ಒಬ್ಬ ನಾಟಕ ಕರ್ತ ಪ್ರಚಂಡ ಕುಡುಕನಾಗಿದ್ದ. ಎಷ್ಟೋ ವೇಳೆ ಆ ಅಭ್ಯಾಸದಿಂದ ಪಾರಾಗಬೇಕೆಂದು ಯತ್ನಿಸುತ್ತಿದ್ದ. ಆದರೆ ಜಯಶಾಲಿಯಾಗಿರಲಿಲ್ಲ. ಒಂದು ದಿನ ಶ್ರೀರಾಮಕೃಷ್ಣರು "ನೀನು ಹೇಗಿದ್ದರೂ ಕುಡಿಯುವೆ. ಅದನ್ನು ದೇವರಿಗೆ ಅರ್ಪಿಸಿ ಏತಕ್ಕೆ ಕುಡಿಯಬಾರದು?" ಎಂದರು. ದೇವರು ಕುಡಿಯುವನೆ ? ಎಂದ. ಅದಕ್ಕೆ ಶ್ರೀರಾಮಕೃಷ್ಣರು ಹಾಸ್ಯವಾಗಿ "ಹೌದು, ದೇವರೊಬ್ಬ ದೊಡ್ಡ ಕುಡುಕನಾಗಿರಬೇಕು. ಚೆನ್ನಾಗಿ ಕುಡಿದು ಅಮಲು ನೆತ್ತಿಗೇರಿರುವಾಗಲೇ ಈ ವಿಚಿತ್ರ ಪ್ರಪಂಚವನ್ನು ಸೃಷ್ಟಿ ಮಾಡಿರಬೇಕು" ಎಂದರು.

ಒಬ್ಬ ಹೆಂಗಸು ತನಗೆ ಧ್ಯಾನ ಸಮಯದಲ್ಲಿ ಮನಸ್ಸನ್ನು ಏಕಾಗ್ರಮಾಡಲು ಸಾಧ್ಯವಿಲ್ಲ ಎಂದಳು. ಆಗ ಶ್ರೀರಾಮಕೃಷ್ಣರು, ಆದು ಯಾವ ವಿಷಯವನ್ನು ಕುರಿತು ಚಿಂತಿಸುವುದು ಎಂದರು. ಆಕೆ ತನ್ನ ಸಹೋದರನ ಮಗುವಿನ ಮೇಲೆ ಎಂದಳು. ಶ್ರೀರಾಮಕೃಷ್ಣರು, ಆ ಮಗುವನ್ನೇ ಶ್ರೀಕೃಷ್ಣ ಎಂದು ಧ್ಯಾನಿಸು ಎಂದರು.

ಹರಿ ಎಂಬ ಶಿಷ್ಯನಿಗೆ ಸ್ತ್ರೀಯರನ್ನು ಕಂಡರೆ ಆಗದು. ಒಂದು ಸಣ್ಣ ಹೆಣ್ಣು ಶಿಶು ತೆವಳುತ್ತ ಬಂದರೂ ಕಿಡಿಕಿಡಿಯಾಗುತ್ತಿದ್ದ.

ಶ್ರೀರಾಮಕೃಷ್ಣರು "ಸ್ತ್ರೀಯಿಂದ ಪಾರಾಗಬೇಕಾದರೆ ದ್ವೇಷಿಸಿ ಪ್ರಯೋಜನವಿಲ್ಲ. ಅವರೆಲ್ಲ ಜಗನ್ಮಾತೆಯ ಅಂಶ ಎಂದು, ಪೂಜ್ಯ ದೃಷ್ಟಿಯಿಂದ ನೋಡಿದರೆ ಮಾತ್ರ ಅವರ ಆಕರ್ಷಣೆ ಯಿಂದ ಪಾರಾಗಬಹುದು" ಎಂದರು.

ಒಂದು ಸಲ ಒಬ್ಬ ಶ್ರೀಮಂತ ಶಿಷ್ಯನ ಹತ್ತಿರ ಮಾತನಾಡು ತ್ತಿದ್ದಾಗ ಅವನು ಪರೋಪಕಾರ ಎಂಬ ಪದವನ್ನು ಉಚ್ಚರಿ ಸಿದ. ಶ್ರೀರಾಮಕೃಷ್ಣರು ಅದಕ್ಕೆ ಹೀಗೆಂದರು : "ಪರೋಪ ಕಾರ ಎಂಬ ಪದವನ್ನು ಹೇಳಬೇಡ. ಅದು ಅಹಂಕಾರದ ಮಾತು. ಒಂದು ಜೀವಿ ಮತ್ತೊಂದು ಜೀವಿಗೆ ಪರೋಪಕಾರ ಮಾಡಲಾರದು. ದೇವರು ಮಾತ್ರ ಉಪಕಾರ ಮಾಡಬಲ್ಲ. ಪ್ರತಿಯೊಂದು ಜೀವಿಯಲ್ಲೂ ಶಿವನಿರುವನೆಂದು ತಿಳಿದು ನಾವು ಅವನಿಗೆ ಸೇವೆಯನ್ನು ಮಾತ್ರ ಮಾಡಬಹುದು. ಹಾಗೆ ಮಾಡುವ ಸೇವೆಯಿಂದ ಮಾಡಿಸಿಕೊಂಡವನಲ್ಲ ಉದ್ಧಾರವಾಗು ವುದು, ಮಾಡುವವನು ಉದ್ಧಾರವಾಗುವನು. ಮಾಡುವವನ ಮನಸ್ಸಿನ ಕಶ್ಮಲ ಕಡಮೆಯಾಗಿ ಅಲ್ಲಿ ಪರಂಜ್ಯೋತಿ ಪ್ರತಿಬಿಂಬಿ ಸಲು ಸಾಧ್ಯವಾಗುವುದು."

ಶ್ರೀರಾಮಕೃಷ್ಣರು ತಮ್ಮ ಶಿಷ್ಯರೊಡನೆ ಹೇಗೆ ಮಾತನಾಡು ತ್ತಿದ್ದರು ಎಂಬುದಕ್ಕೆ ಎರಡು ಸಂಭಾಷಣೆಗಳನ್ನು ಕೊಡುವೆವು. ಅದರಲ್ಲಿ ವೇದ ಉಪನಿಷತ್ತಿನ ಸಾರ ಸಣ್ಣ ಮಕ್ಕಳಿಗೂ ಅರ್ಥ ವಾಗುವಂತೆ ಮಾಡಿರುವರು. ಪಂಡಿತ ಪಾಮರರಿಬ್ಬರಿಗೂ ಪ್ರಿಯವಾಗಿವೆ ಅವು. ಅವು ಭವಜೀವಿಗಳಿಗಾಗಿ ಶಿಷ್ಯರೆಂಬ ನಿಮಿತ್ತದ ಮೂಲಕ ಮಾತನಾಡಿದಂತಿದೆ. ಕೆಳಗೆ ಬರುವ ಸಂಭಾಷಣೆ ಮಾಸ್ಟರ್ ಮಹಾಶಯ ಎಂಬುವರೊಡನೆ ಆಗಿದ್ದು. ಅವರೇ ಅನಂತರ 'ಮಾ' ಎಂಬ ಅಭಿಮಾನದಿಂದ ಶ್ರೀರಾಮಕೃಷ್ಣ

ವಚನ ವೇದ ಎಂಬ ಬೃಹದ್ ಗ್ರಂಥವನ್ನು ಪ್ರಪಂಚಕ್ಕೆ ಕೊಟ್ಟು ಧನ್ಯರಾಗಿರುವರು.

ಶ್ರೀರಾಮಕೃಷ್ಣರು : "ನಿನಗೆ ಸಾಕಾರದಲ್ಲಿ ಇಷ್ಟವೊ ನಿರಾಕಾರದಲ್ಲಿ ಇಷ್ಟವೊ ? "

ಶಿಷ್ಯ : "ನನಗೆ ನಿರಾಕಾರ ಹಿಡಿಸುತ್ತದೆ."

ಶ್ರೀರಾಮಕೃಷ್ಣರು : "ಬಹಳ ಒಳ್ಳೆಯದು. ಒಂದರಲ್ಲಿ ವಿಶ್ವಾಸವಿದ್ದರೆ ಸಾಕು. ನಿರಾಕಾರದಲ್ಲಿ ವಿಶ್ವಾಸವೇ. ಒಳ್ಳೆಯದು. ಆದರೆ ಎಂದಿಗೂ ಇದು ಮಾತ್ರ ನಿಜ ಉಳಿದವು ಸುಳ್ಳು ಎಂದು ಭಾವಿಸಬೇಡ. ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ಪ್ರೀತಿಯೋ ಅದರಲ್ಲಿ ದೃಢ ವಿಶ್ವಾಸವಿಡು."

ಶಿಷ್ಯ : "ಒಂದು ಪಕ್ಷ ಭಗವಂತ ಸಾಕಾರ ಎಂದು ಭಾವಿಸಿದರೂ ಅವನು ಮಣ್ಣಿನ ಪ್ರತಿಮೆ ಏನು ಅಲ್ಲ ತಾನೇ ?"

ಶ್ರೀರಾಮಕೃಷ್ಣರು : "ಅದು ಮಣ್ಣಿನದಲ್ಲ. ಚಿನ್ಮಯ. ನಿಮ್ಮ ಕಲ್ಕತ್ತೆಯ ಜನರಿಗೆ ಇದೊಂದು ಪಿತ್ತ ನೆತ್ತಿಗೇರಿದೆ. ಅದೇ ಇನ್ನೊಬ್ಬರಿಗೆ ಉಪನ್ಯಾಸ ಕೊಡೋದು, ಇನ್ನೊಬ್ಬರಿಗೆ ಬೆಳಕು ಕೊಡುವುದು. ಮೊದಲು ತಮ್ಮ ಹೃದಯದಲ್ಲೇ ಯಾವ ಬೆಳಕೂ ಇಲ್ಲ, ಇನ್ನೊಬ್ಬರಿಗೆ ಬೆಳಕನ್ನು ದಾನ ಮಾಡುವ ಯೋಚನೆ. ಈ ಜಗತ್ತು ಯಾರದೊ ಅವನು ತಿಳಿವಳಿಕೆ ಕೊಡುತ್ತಾನೆ. ಯಾರು ಈ ಜಗತ್ತನ್ನು ಸೃಷ್ಟಿಸಿದ್ದಾನೋ, ಸೂರ್ಯ ಚಂದ್ರ ಜಗತ್ತನ್ನು ನಿರ್ಮಿಸಿರುವನೋ, ಜೀವಜಂತುಗಳಿಗೆ ಆಹಾರ ವ್ಯವಸ್ಥೆ, ಬೆಳೆಗಾಗಿ ಮಳೆ, ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ತಾಯಿತಂದೆಗಳನ್ನು ಸೃಷ್ಟಿಸಿರುವನೋ, ಅವರಲ್ಲಿ ಪ್ರೀತಿ ಇಟ್ಟಿರುವನೋ, ಅವನು ಎಲ್ಲರಿಗೂ ತಿಳಿವಳಿಕೆ ಕೊಡುತ್ತಾನೆ. ಇಷ್ಟೊಂದನ್ನು ಮಾಡಿರುವ ದೇವರು ಇನ್ನೊಂದು ಸ್ವಲ

ಮಾಡಲು ಆಗಲಿಲ್ಲವೇ. ತಿಳಿವಳಿಕೆ ಕೊಡಬೇಕಾದ ಆವಶ್ಯಕತೆ ಬಂದರೆ ಅವನೇ ಆ ಕಾರ್ಯಕ್ಕೆ ಮುಂದೆ ಬರುತ್ತಾನೆ. ಆತ ನಮ್ಮ ಅಂತರ್ಯಾಮಿ.

"ಒಂದು ಪಕ್ಷ ಮಣ್ಣಿನ ಬೊಂಬೆಯನ್ನು ಪೂಜಿಸುವುದು ಸರಿಯಲ್ಲ ಎಂದು ತಿಳಿದುಕೊಂಡರೂ, ಅದರ ಮೂಲಕ ತನ್ನ ಪೂಜೆಯೇ ನಡೆಯುತ್ತಿದೆ ಎಂದು ಆತನಿಗೆ ಗೊತ್ತಾಗುವುದಿಲ್ಲವೇ? ಆತ ಅದರಿಂದಲೇ ಸಂತುಷ್ಟನಾಗುತ್ತಾನೆ. ಅದಕ್ಕೆ ನಿನಗೇಕೆ ತಲೆನೋವು. ಮೊದಲು ಯಾವುದರಿಂದ ಜ್ಞಾನ, ಭಕ್ತಿ ದೊರಕುವುದೊ ಅದಕ್ಕೆ ಪ್ರಯತ್ನ ಮಾಡು."

"ನೀನು ಮಣ್ಣಿನ ಬೊಂಬೆ ವಿಷಯದ ಮಾತೆತ್ತಿದೆ. ಬೊಂಬೆ ಮಣ್ಣಿನದಾದರೂ ಅದರ ಆವಶ್ಯಕತೆಯೂ ಇದೆ. ಹಲವಾರು ವಿಧದ ಪೂಜಾಕ್ರಮಗಳನ್ನು ದೇವರೇ ಏರ್ಪಡಿಸಿದ್ದಾನೆ. ಈ ಜಗತ್ತು ಯಾರದೋ ಅವನೆ ಅಧಿಕಾರ ಭೇದಕ್ಕನುಗುಣವಾಗಿ ಇವನ್ನೆಲ್ಲ ಮಾಡಿದ್ದಾನೆ."

"ತಾಯಿ ತನ್ನ ಮಕ್ಕಳ ಜೀರ್ಣಶಕ್ತಿಯ ಅನುಸಾರ ಅಡಿಗೆ ತಯಾರು ಮಾಡಿದ್ದಾಳೆ."

ಶಿಷ್ಯ : "ಏನು ಮಾಡಿದರೆ ಭಗವಂತನ ಕಡೆ ಮನಸ್ಸನ್ನು ಹರಿಸಬಹುದು ?"

ಶ್ರೀರಾಮಕೃಷ್ಣರು : "ಭಗವಂತನ ನಾಮಗುಣ ಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕು. ಸತ್‌ಸಂಗ ಎಂದರೆ ಭಗವದ್ಭಕ್ತರ ಸಾಧು ಸತ್ಪುರುಷರ ಸಹವಾಸ ಆಗಾಗ ಮಾಡುತ್ತಿರಬೇಕು. ಮನಸ್ಸು ಹಗಲಿರುಳೂ ಸಂಸಾರದಲ್ಲೇ, ಪ್ರಾಪಂಚಿಕ ಕೆಲಸಕಾರ್ಯಗಳಲ್ಲೇ ನಿರತವಾಗಿ ಬಿಟ್ಟಿದ್ದರೆ ಅದು ಭಗವಂತನ ಕಡೆ ಹೋಗಲಾರದು. ಆಗಾಗ ನಿರ್ಜನ ಪ್ರದೇಶಕ್ಕೆ ಹೋಗಿ

ಭಗವಧ್ಯಾನದಲ್ಲಿ ತೊಡಗುವುದು ಆವಶ್ಯಕ. ಮೊದಲು ನಿರ್ಜನ ಪ್ರದೇಶಕ್ಕೆ ಹೋಗಿ ಆತನ ಧ್ಯಾನ ಮಾಡದೇ ಇದ್ದರೆ ಆತನಲ್ಲಿ ಮನಸ್ಸನ್ನು ನಿಲ್ಲಿಸುವುದು ಬಹಳ ಕಷ್ಟವಾಗುವುದು. ಗಿಡ ಇನ್ನು ಸಸಿಯಾಗಿರುವಾಗ ಅದರ ಸುತ್ತಲೂ ಬೇಲಿ ಕಟ್ಟಬೇಕು. ಇಲ್ಲದೆ ಇದ್ದರೆ ದನಕಂರಿಗಳು ಅದನ್ನು ತಿಂದು ಹಾಕಿಬಿಡುತ್ತವೆ."

"ಧ್ಯಾನವನ್ನು ಅಂತರ್ಯದಲ್ಲೊ, ಏಕಾಂತ ಸ್ಥಳದಲ್ಲೊ, ನಿಬಿಡ ಅರಣ್ಯದಲ್ಲೊ ಮಾಡಬೇಕು. ಯಾವಾಗಲೂ ಸತ್ ಅಸತ್ ವಿಚಾರ ಮಾಡುತ್ತಿರಬೇಕು. ಭಗವಂತನೊಬ್ಬನೇ ಸತ್ಯ ನಿತ್ಯವಸ್ತು, ಉಳಿದುದೆಲ್ಲ ಅನಿತ್ಯ, ಅಸತ್ ಎಂದು. ಹೀಗೆ ವಿಚಾರ ಮಾಡುತ್ತ ಅನಿತ್ಯ ವಸ್ತುಗಳ ಮೇಲೆ ಮನಸ್ಸನ್ನು ಕಿತ್ತು ಹಾಕಬೇಕು.''

ಶಿಷ್ಯ : ''ಸಂಸಾರದಲ್ಲಿ ಹೇಗೆ ಇರಬೇಕು ?''

ಶ್ರೀರಾಮಕೃಷ್ಣರು : "ಎಲ್ಲಾ ಕೆಲಸಕಾರ್ಯಗಳನ್ನು ಮಾಡು ಆದರೆ ಮನಸ್ಸನ್ನು ಮಾತ್ರ ಭಗವಂತನ ಪಾದಪದ್ಮ ದಲ್ಲಿಡು. ಎಲ್ಲರೊಡನೆ, ಹೆಂಡತಿ ಮಕ್ಕಳು ತಂದೆ ತಾಯಿ ಇವರೊಡನೆ ಇರು. ಅವರ ಸೇವೆ ಮಾಡು, ಅವರೆಲ್ಲ ನಿನ್ನ ಪರಮ ಆಪ್ತರೆಂದೇ ಕಾಣು. ಆದರೆ ಅವರಾರೂ ನಿನ್ನವರಲ್ಲ ಎಂದು ನಿನ್ನ ಮನಸ್ಸಿನ ಆಳದಲ್ಲಿ ತಿಳಿದುಕೊ.''

"ಶ್ರೀಮಂತರ ಮನೆಯ ದಾಸಿ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡುತ್ತಾಳೆ. ಆದರೆ ಆಕೆಯ ಮನಸ್ಸು ಮಾತ್ರ ಹಳ್ಳಿ ಯಲ್ಲಿರುವ ತನ್ನ ಮನೆಯ ಕಡೆಗೆ. ಯಜಮಾನನ ಮಕ್ಕಳನ್ನು ತನ್ನವರೆಂದೇ ಬೆಳೆಸುತ್ತಾಳೆ. ಅವರನ್ನು ನನ್ನ ರಾಮ, ನನ್ನ ಹರಿ ಎಂದೇ ಕರೆಯುತ್ತಾಳೆ. ಆದರೆ ನಿಜವಾಗಿ ಅವಾವುವೂ ತನ್ನವಲ್ಲ ಎಂದು ಮನಸ್ಸಿನ ಅಂತರಾಳದಲ್ಲಿದೆ.''

"ಆಮೆ ನೀರಿನಲ್ಲಿ ಈಜಾಡುತ್ತಿರುತ್ತದೆ. ಆದರೆ ಅದರ ಮನಸ್ಸೆಲ್ಲ ಎಲ್ಲಿದೆ ಗೊತ್ತೆ ? ತನ್ನ ಮೊಟ್ಟೆಗಳಿರುವ ದಡದಲ್ಲಿ. ಸಂಸಾರದ ಎಲ್ಲಾ ಕೆಲಸಕಾರ್ಯಗಳನ್ನು ಮಾಡು. ಆದರೆ ಮನಸ್ಸನ್ನು ಮಾತ್ರ ಭಗವಂತನಲ್ಲಿ ನೆಡು."

"ಭಗವಂತನಲ್ಲಿ ಭಕ್ತಿ ಬೆಳಸಿಕೊಳ್ಳುವುದಕ್ಕೆ ಮುಂಚೆ ಸಂಸಾರಕ್ಕೆ ಕಾಲಿಟ್ಟರೆ ಹೆಚ್ಚಾಗಿ ಕಷ್ಟಪರಂಪರೆಗಳಿಗೆ ತುತ್ತಾಗ ಬೇಕಾಗುತ್ತದೆ. ಶೋಕ ತಾಪ ವಿಪತ್ತು ಇವುಗಳಿಂದ ಬೆಂದು ಬೆಂಡಾಗಿ ಹೋಗುವೆ, ವಿಷಯಚಿಂತನೆ ಮಾಡಿದಷ್ಟೂ ಅವುಗಳಲ್ಲಿ ಆಸಕ್ತಿ ಬೆಳೆಯುತ್ತಾ ಹೋಗುತ್ತದೆ."

"ಮೊದಲು ಕೈಗೆ ಎಣ್ಣೆ ಸವರಿಕೊಂಡು ಬಳಿಕ ಹಲಸಿನ ಹಣ್ಣನ್ನು ಬಿಡಿಸಬೇಕು. ಇಲ್ಲದೆ ಇದ್ದರೆ ಕೈಗೆಲ್ಲ ಅಂಟು ಮೆತ್ತಿಕೊಳ್ಳುವುದು. ಭಗವದ್ಭಕ್ತಿ ಎಂಬುದನ್ನು ಮೊದಲು ಹವಣಿಸಿಕೊಂಡು ಬಳಿಕ ಸಂಸಾರಿಕ ಕೆಲಸ ಕಾರ್ಯಕ್ಕೆ ತೊಡಗಬೇಕು."

"ಆದರೆ ಆ ವಿಧದ ಭಕ್ತಿ ದೊರಕಬೇಕಾದರೆ ನಿರ್ಜನ ಪ್ರದೇಶಗಳಿಗೆ ಹೋಗಿ ಇರಬೇಕು. ಬೆಣ್ಣೆ ತೆಗೆಯಬೇಕಾದರೆ ಮೊದಲು ನಿರ್ಜನ ಪ್ರದೇಶದಲ್ಲಿ ಹಾಲಿಗೆ ಹೆಪ್ಪು ಹಾಕಿ ಇಡಬೇಕು. ಇದನ್ನು ಅತಿಯಾಗಿ ಅಲ್ಲಾಡಿಸುತ್ತಿದ್ದರೆ ಅದು ಮೊಸರಾಗದು. ಬಳಿಕ ಉಳಿದ ಎಲ್ಲಾ ಕೆಲಸಕಾರ್ಯಗಳನ್ನು ಒಂದು ಮೂಲೆಯಲ್ಲಿ ಕಟ್ಟಿಟ್ಟು ನಿರ್ಜನ ಪ್ರದೇಶದಲ್ಲಿ ಕುಳಿತು ಅದನ್ನು ಕಡೆದು ತೆಗೆಯಬೇಕು."

"ನೋಡು ನಿರ್ಜನ ಪ್ರದೇಶಕ್ಕೆ ಹೋಗಿ ಈ ಮನಸ್ಸನ್ನು ಭಗವಂತನ ಧ್ಯಾನದಲ್ಲಿ ತೊಡಗಿಸುವುದಾದರೆ, ಅದು ಜ್ಞಾನ ಭಕ್ತಿ ವೈರಾಗ್ಯ ಇವನ್ನು ಕೊಡುತ್ತವೆ. ಸಂಸಾರದಲ್ಲಿ ತೊಡಗಿಸಿದರೆ ಅದೇ ಮನಸ್ಸು ಅಧೋಗತಿಗೆ ಬರುತ್ತದೆ. ಸಂಸಾರದಲ್ಲಿ ಕೇವಲ ಒಂದರ ಚಿಂತನೆಯೇ—ಅದೇ ಕಾಮಕಾಂಚನ."

"ಸಂಸಾರವೇ ನೀರು, ಮನಸ್ಸೇ ಹಾಲು. ಹಾಲನ್ನು ನೀರಿಗೆ ಸುರಿದರೆ ಅವೆರಡೂ ಬೆರೆತು ಒಂದಾಗಿಬಿಡುವುವು. ಆದರೆ ಹಾಲಿಗೆ ಹೆಪ್ಪುಹಾಕಿ, ಮೊಸರು ಮಾಡಿ, ಅದರಿಂದ ಬೆಣ್ಣೆ ತೆಗೆದು ಅದನ್ನು ನೀರಿನಲ್ಲಿಟ್ಟರೆ ಅದೇ ಬೇರೆಯಾಗಿಯೆ ನೀರಿನ ಮೇಲೆ ತೇಲುತ್ತಿರುತ್ತದೆ."

ಶಿಷ್ಯ : "ಭಗವಂತನನ್ನು ದರ್ಶನ ಮಾಡಲಾಗುವುದೆ?"

ಶ್ರೀರಾಮಕೃಷ್ಣರು : "ಹೌದು, ನಿಸ್ಸಂದೇಹವಾಗಿ. ಆಗಾಗ ಏಕಾಂತವಾಸ, ಆತನ ಗುಣನಾಮ ಕೀರ್ತನೆ, ಇವುಗಳನ್ನೆಲ್ಲ ಮಾಡಬೇಕು."

ಶಿಷ್ಯ : "ಯಾವ ರೀತಿ ಇದ್ದರೆ ಅವನನ್ನು ಪಡೆದು ಕೊಳ್ಳಬಹುದು."

ಶ್ರೀರಾಮಕೃಷ್ಣರು : "ವ್ಯಾಕುಲಪಟ್ಟರೆ ಅವನನ್ನು ಪಡೆಯಬಹುದು. ಜನ ಹೆಂಡರು ಮಕ್ಕಳಿಗೆ, ಕೊಡದಷ್ಟು ಕಣ್ಣೀರು ಸುರಿಸುತ್ತಾರೆ. ಕಣ್ಣೀರಿನ ಸಾಗರದಲ್ಲೇ ಈಜಾಡುತ್ತಾರೆ ಹಣಕ್ಕಾಗಿ. ಆದರೆ ಭಗವಂತನು ಬೇಕು ಅಂತ ಯಾರು ಕಣ್ಣೀರಿಡುತ್ತಾರೆ. ನಿಜವಾಗಿ ಅವನನ್ನು ಕರೆಯಬೇಕು."

"ಈ ಮೂರು ಪ್ರೀತಿಗಳೂ ಒಟ್ಟಿಗೆ ಉಂಟಾಗುವುದಾದರೆ ಭಗವಂತ ಗೋಚರವಾಗುತ್ತಾನೆ. ವಿಷಯಿಗೆ ವಿಷಯ ವಸ್ತುಗಳ ಮೇಲೆ ಇರುವ ಪ್ರೀತಿ, ತಾಯಿಗೆ ಮಕ್ಕಳ ಮೇಲೆ ಇರುವ ಪ್ರೀತಿ, ಸತಿಗೆ ಪತಿಯ ಮೇಲೆ ಇರುವ ಪ್ರೀತಿ, ಈ ಮೂರು ಪ್ರೀತಿಗಳೂ ಯಾರಲ್ಲಿಯೋ ಆಗಲಿ ಒಟ್ಟಿಗೆ ಮೂಡುವುದಾದರೆ, ಅವುಗಳ ಜೋರಿನಿಂದ ಅವನಿಗೆ ಭಗವಂತನ ಸಾಕ್ಷಾತ್ಕಾರ ಸಾಧ್ಯ ವಾಗುವುದು."

ಈಶ್ವರಚಂದ್ರ ವಿದ್ಯಾಸಾಗರರೊಡನೆ

ಒಂದುಸಲ ಶ್ರೀರಾಮಕೃಷ್ಣರು ಕಲ್ಕತ್ತೆಯಲ್ಲಿ ಈಶ್ವರ ಚಂದ್ರ ವಿದ್ಯಾಸಾಗರರ ಮನೆಗೆ ಹೋದರು. ಆತ ಅಕ್ಷರಶಃ ವಿದ್ಯೆಗೆ ಸಾಗರವಾಗಿದ್ದ. ಆದರೆ ಶ್ರೀರಾಮಕೃಷ್ಣರಾದರೊ ಯಾವ ಶಾಸ್ತ್ರಾದಿಗಳನ್ನೂ ಓದಿದವರಲ್ಲ. ಆದರೆ ಶಾಸ್ತ್ರಸಾರವೇ ಅವರ ಮಾತಿನಲ್ಲಿತ್ತು. ಅವರಿಬ್ಬರಿಗೂ ಆದ ಚಿತ್ತಾಕರ್ಷಕವಾದ ಭವ್ಯ ಭಾವಗಳಿಂದ ತುಂಬಿದ ಸರಸ ಸಂಭಾಷಣೆಯನ್ನು ಕೆಳಗೆ ಕೊಟ್ಟಿದೆ.

ಶ್ರೀರಾಮಕೃಷ್ಣರು : "ಇಂದು ನಾನು ಸಾಗರ ದೆದುರಿಗೆ ಇರುವೆನು. ಇದುವರೆಗೆ ನಾನು ತೊರೆ ಹಳ್ಳ ಹೆಚ್ಚು ಎಂದರೆ ನದಿ ನೋಡಿದ್ದೆ. ಆದರೆ ಇಂದು ಸಾಕ್ಷಾತ್ ಸಾಗರ ದರ್ಶನವೇ ಆಯಿತು."

ವಿದ್ಯಾಸಾಗರ : "ಹಾಗಾದರೆ ನೀವು ಉಪ್ಪುನೀರನ್ನು ತೆಗೆದುಕೊಳ್ಳಬೇಕಾಗುವುದು."

ಶ್ರೀರಾಮಕೃಷ್ಣರು : "ಇಲ್ಲ, ಇಲ್ಲ, ನೀನು ಅಂತಹ ಸಾಗರವಲ್ಲ. ನೀನು ಅವಿದ್ಯಾಸಾಗರವಲ್ಲ, ವಿದ್ಯೆಯ ಸಾಗರ, ಕ್ಷೀರಸಾಗರ."

ವಿದ್ಯಾಸಾಗರ : "ಆಗಲಿ ಮಹಾಶಯರೆ, ನಿಮ್ಮ ಮನ ಬಂದಂತೆ ಹೇಳಬಹುದು."

ಶ್ರೀರಾಮಕೃಷ್ಣರು : "ನೀನು ಮಾಡುತ್ತಿರುವುದು ಸಾತ್ತ್ವಿಕ ಕರ್ಮ. ಇದು ಸತ್ತ್ವದ ರಾಜಸಿಕ ಗುಣ. ಕರುಣೆ ಸತ್ತ್ವದಿಂದ ಜನಿಸುವುದು. ಕರುಣೆಯಿಂದ ಪ್ರೇರಿತವಾಗಿ ಮಾಡುವ ಕರ್ಮ ರಾಜಸಿಕವಾದರೂ ಸತ್ತ್ವದಿಂದ ಉದ್ಭವಿಸಿರು ವುದು. ಇದರಿಂದ ಯಾವ ಅಪಾಯವೂ ಇಲ್ಲ. ಶುಕದೇವ ಮುಂತಾದವರು ಮಾನವಕೋಟಿಗೆ ಬೋಧಿಸುವುದಕ್ಕಾಗಿ ಕರುಣೆ

ಯನ್ನು ತ್ಯಜಿಸಲಿಲ್ಲ. ನೀನು ಅನ್ನದಾನ ಜ್ಞಾನದಾನ ಮಾಡುತ್ತಿರುವೆ. ಅದು ಒಳ್ಳೆಯದು. ಇದನ್ನು ಅನಾಸಕ್ತಿಯಿಂದ ಮಾಡಿದರೆ ಆತ್ಮಸಾಕ್ಷಾತ್ಕಾರಕ್ಕೆ ಸಹಾಯ ಮಾಡುವುದು. ಕೆಲವರು ಕೀರ್ತಿ ಅಥವಾ ಪುಣ್ಯ ಸಂಪಾದನೆಗೆ ಕರ್ಮ ಮಾಡುವರು. ಇಂತವರದು ಅನಾಸಕ್ತಿಯ ಕರ್ಮವಲ್ಲ. ಅದೂ ಅಲ್ಲದೆ ನೀನಾಗಲೇ ಸಿದ್ಧನಾಗಿರುವೆ.

(ಬಂಗಾಳಿಯಲ್ಲಿ ಸಿದ್ಧ ಎಂದರೆ ಬೆಂದಿರುವುದು)

ವಿದ್ಯಾಸಾಗರ : " ಅದು ಹೇಗೆ ಮಹಾಶಯರೆ?"

ಶ್ರೀರಾಮಕೃಷ್ಣರು : "ಆಲೂಗಡ್ಡೆ ಮುಂತಾದುವು ಸಿದ್ಧವಾದರೆ (ಬೆಂದರೆ) ಮೆತ್ತಗೆ ಆಗುತ್ತವೆ. ನೀನಾಗಲೇ ಅಷ್ಟು ಮೃದುಸ್ವಭಾವದವನು, ಅಷ್ಟು ದಯಾಳು. "

ವಿದ್ಯಾಸಾಗರ : "ಆದರೆ ಕೆಲವು ಪದಾರ್ಥಗಳು ಬೆಂದರೆ ಗಟ್ಟಿಯಾಗುತ್ತವೆ. ಬೇಳೆಯ ಉಂಡೆತೆಗೆದುಕೊಳ್ಳಿ ಉದಾಹರಣೆಗೆ."

ಶ್ರೀರಾಮಕೃಷ್ಣರು : "ಇಲ್ಲ, ಇಲ್ಲ, ನೀನು ಅಂಥವನಲ್ಲ, ಬರೀ ಪಂಡಿತರು ರೋಗ ಹಿಡಿದ ಹಣ್ಣಿನಂತೆ. ಅವರು ದಾರಿ ತಪ್ಪಿದವರು. ಹದ್ದುಗಳು ಆಕಾಶದ ಮೇಲಕ್ಕೆ ಹಾರುತ್ತವೆ. ಆದರೆ ಅವುಗಳ ದೃಷ್ಟಿಯೆಲ್ಲ ಕೊಳೆತು ನಾರುವ ಹೆಣದ ಮೇಲೆ. ಪಂಡಿತರು ಕೇವಲ ಹೆಸರಿಗೆ ಮಾತ್ರ ಅಷ್ಟೆ. ಅವರು ಕಾಮ ಕಾಂಚನಕ್ಕೆ ದಾಸರು. ಹದ್ದಿನಂತೆ ಹಣವನ್ನು ಹುಡುಕುತ್ತಿರುವರು. ಆಸಕ್ತಿ ಅವಿದ್ಯೆಗೆ ಸೇರಿದ್ದು. ಆದರೆ ಭಯ ಭಕ್ತಿ ತ್ಯಾಗ ಇವೆಲ್ಲ ವಿದ್ಯೆಗೆ ಸೇರಿದ್ದು.

"ಬ್ರಹ್ಮ ವಿದ್ಯೆ ಅವಿದ್ಯೆಗಳ ಆಚೆ ಇರುವನು. ಅವನು ಮಾಯಾತೀತ. ಮಾತಿನಿಂದ ಬ್ರಹ್ಮನನ್ನು ವರ್ಣಿಸಲು ಅಸಾಧ್ಯ. ವೇದ ಪುರಾಣ ತಂತ್ರ ಷಟ್‌ದರ್ಶನಗಳೆಲ್ಲ ಬಾಯಿನಿಂದ

ಉಚ್ಚರಿಸಿರುವುದರಿಂದ ಎಂಜಲಾಗಿದೆ. ಆದರೆ ಒಂದು ಮಾತ್ರ ಎಂಜಲಾಗಿಲ್ಲ. ಅದೇ ಬ್ರಹ್ಮ. ಬ್ರಹ್ಮ ಏನೂ ಎಂದು ಇದುವರೆಗೆ ಯಾರಿಗೂ ಹೇಳಲು ಆಗಲಿಲ್ಲ."

ವಿದ್ಯಾಸಾಗರ : "ಇದೊಂದು ಅದ್ಭುತವಾದ ಬೋಧನೆ. ಇಂದು ನಾನೊಂದು ಹೊಸ ವಿಷಯವನ್ನು ಕಲಿತೆ."

ಶ್ರೀರಾಮಕೃಷ್ಣರು : ಬ್ರಹ್ಮನ ವಿಷಯವಾಗಿ ನಾವು ತಿಳಿದಿರುವೆವು ಎಂದು ಜನ ಭಾವಿಸುವರು. ಇರುವೆ ಒಂದು ಸಕ್ಕರೆ ಗುಡ್ಡಕ್ಕೆ ಹೋಯಿತು. ಒಂದು ಹರಳು ಸಕ್ಕರೆಯನ್ನು ತಿಂದು ತೇಗಿತು. ಮತ್ತೊಂದು ಹರಳನ್ನು ಹೊತ್ತುಕೊಂಡು ಗೂಡಿಗೆ ಹೊರಟಿತು. ಹೋಗುತ್ತಿರುವಾಗ ಇನ್ನೊಂದು ಸಲ ಹೋಗುವಾಗ ಇಡೀ ಗುಡ್ಡವನ್ನೇ ಹೊತ್ತುಕೊಂಡು ಹೋಗುತ್ತೇನೆ ಎಂದು ಭಾವಿಸಿತು. ಕ್ಷುದ್ರ ಮನುಷ್ಯನೂ ಹಾಗೆಯೇ ಭಾವಿಸುವನು. ಬ್ರಹ್ಮ ಮಾತು ಮತ್ತು ಮನಸ್ಸಿಗೆ ಅತೀತನೆಂಬುದು ಅವನಿಗೆ ಗೊತ್ತಿಲ್ಲ. ಮನುಷ್ಯ ಎಷ್ಟೇ ದೊಡ್ಡವನಾದರೂ ದೇವರನ್ನು ಅರಿಯಲಾರ. ಶುಕದೇವ ಮುಂತಾದವರು ದೊಡ್ಡ ಇರುವೆಗಳಂತೆ, ಹೆಚ್ಚು ಎಂದರೆ ಎಂಟೊ ಹತ್ತೋ ಹರಳನ್ನು ತೆಗೆದುಕೊಳ್ಳುವರು ಅಷ್ಟೆ."

"ಶಾಸ್ತ್ರಗಳು ಬ್ರಹ್ಮನ ವಿಷಯವಾಗಿ ಕೆಲವು ಸಲಹೆಗಳನ್ನು ಮಾತ್ರ ಕೊಡಬಲ್ಲವು. ಸಮಾಧಿಯಲ್ಲಿ ಒಬ್ಬನಿಗೆ ಬ್ರಹ್ಮಜ್ಞಾನವಾಗುವುದು. ಆಗ ಯುಕ್ತಿ ಸ್ತಬ್ಧವಾಗುವುದು. ಮನುಷ್ಯ ಶಾಂತನಾಗುವನು ಬ್ರಹ್ಮನನ್ನು ಮಾತಿನ ಮೂಲಕ ವ್ಯಕ್ತಪಡಿಸಲು ಅಸಾಧ್ಯ. ಒಂದು ಉಪ್ಪಿನ ಗೊಂಬೆ ಸಮುದ್ರದ ಆಳವನ್ನು ಕಂಡುಹಿಡಿಯಲು ಹೋಯಿತು. ಅದರ ಆಳವನ್ನು ಬಂದು ಹೇಳುತ್ತೇನೆ ಎಂದಿತು. ಆದರೆ ಪ್ರಯೋಜನವಾಗಲಿಲ್ಲ. ಅದು ನೀರನ್ನು ಸೋಕಿದೊಡನೆಯೆ ಕರಗಿಹೋಯಿತು.

ಪ್ರಶ್ನೆ : "ಸಾಕ್ಷಾತ್ಕಾರ ಪಡೆದವರು ಸಮಾಧಿಯ ನಂತರ ಮಾತನಾಡುವುದಿಲ್ಲವೆ ?"

ಶ್ರೀರಾಮಕೃಷ್ಣರು : "ಶಂಕರಾಚಾರ್ಯರು ತಮ್ಮ ಶುದ್ಧ ಅಹಂಕಾರವನ್ನು ಇತರರ ಬೋಧನೆಗಾಗಿ ಇಟ್ಟುಕೊಂಡಿದ್ದರು. ಬ್ರಹ್ಮಸಾಕ್ಷಾತ್ಕಾರವಾದ ಮೇಲೆ ಅವನು ಮೌನವಾಗುವನು. ಸಾಕ್ಷಾತ್ಕಾರ ಆಗುವುದಕ್ಕೆ ಮುಂಚೆ ಯುಕ್ತಿಯ ಗಲಾಟೆ. ಬೆಣ್ಣೆ ಎಲ್ಲಿಯವರೆಗೆ ಇನ್ನೂ ತುಪ್ಪವಾಗಿಲ್ಲವೊ ಅಲ್ಲಿಯವರೆಗೆ ಶಬ್ದ ಮಾಡುತ್ತಿರುವುದು. ಚೆನ್ನಾಗಿ ಕಾದ ಮೇಲೆ ಅದಿನ್ನು ಶಬ್ದ ಮಾಡುವುದಿಲ್ಲ. ಆದರೆ ಅನಂತರ ಅದರೊಳಗೆ ಏನನ್ನಾದರೂ ಕರಿಯಲು ಹಾಕಿದರೆ ಅದು ಪುನಃ ಶಬ್ದ ಮಾಡುವುದು. ಅದು ಚೆನ್ನಾಗಿ ಕರಿದಾದ ಮೇಲೆ ಪುನಃ ಶಬ್ದವೆಲ್ಲ ನಿಲ್ಲುವುದು. ಇದರಂತೆಯೇ ಸಾಕ್ಷಾತ್ಕಾರವನ್ನು ಪಡೆದವನು ಮಾನವ ಕೋಟಿಗೆ ಬೋಧಿಸುವುದಕ್ಕಾಗಿ ಕೆಳಗೆ ಇಳಿದು ಬರುವನು."

"ಜೇನುನೊಣ ಹೂವಿನ ಮೇಲೆ ಕುಳಿತುಕೊಳ್ಳದೆ ಇರುವ ವರೆಗೆ ಶಬ್ದ ಮಾಡುವುದು. ಮಧುವನ್ನು ಕುಡಿಯಲು ಪ್ರಾರಂಭಿ ಸಿದರೆ ಮೌನವಾಗುವುದು. ಕೆಲವು ವೇಳೆ ಚೆನ್ನಾಗಿ ಕುಡಿದಾದ ಮೇಲೆ ಆನಂದಾಧಿಕ್ಯದಿಂದ ಝೇಂಕರಿಸುವುದು."

"ಕೊಡವನ್ನು ನೀರಿನಲ್ಲಿ ಅದ್ದಿದಾಗ ಅದು ಶಬ್ದ ಮಾಡುವುದು. ತುಂಬಿದ ಮೇಲೆ ಶಬ್ದ ಮಾಡುವುದಿಲ್ಲ. ಆದರೆ ಆ ನೀರನ್ನು ಇನ್ನೊಂದು ಕೊಡಕ್ಕೆ ಸುರಿಯುವಾಗ ಶಬ್ದ ಮಾಡುವುದು."

"ಬ್ರಹ್ಮ ಸರ್ವವ್ಯಾಪಿಯಾಗಿರುವುದರಿಂದ ಇರುವೆಯ ಪರಿಯಂತರ ಎಲ್ಲದರಲ್ಲಿಯೂ ಇರುವನು. ಆದರೆ ಶಕ್ತಿ ಆವಿರ್ಭಾವನೆಯಲ್ಲಿ ವ್ಯತ್ಯಾಸವಿದೆ. ಇಲ್ಲದೇ ಇದ್ದರೆ ಒಬ್ಬ ಹತ್ತು ಜನರನ್ನು ಸೋಲಿಸುವನು. ಮತ್ತೊಬ್ಬ ಒಬ್ಬನನ್ನು

ಕಂಡೊಡನೆಯೇ ಓಡಿಹೋಗುವನು. ಇದು ಹೇಗೆ? ಹಾಗಿಲ್ಲದೇ ಇದ್ದರೆ ಜನ ನಿನ್ನನ್ನು ಏತಕ್ಕೆ ಗೌರವಿಸುವರು. ನಿನಗೇನಾದರೂ ಒಂದು ಜೊತೆ ಕೊಂಬು ಇದೆಯೆ ತಲೆಯಲ್ಲಿ. ನಿನ್ನಲ್ಲಿ ಇತರರಲ್ಲಿ ಇಲ್ಲದ ಪಾಂಡಿತ್ಯವಿದೆ. ಕರುಣೆ ಇದೆ. ಅದಕ್ಕಾಗಿ ಜನ ನಿನ್ನನ್ನು ಗೌರವಿಸುವರು. ನಿನ್ನನ್ನು ನೋಡಲು ಬರುವರು. ನೀನು ಇದನ್ನು ಒಪ್ಪಿಕೊಳ್ಳುವೆಯಾ?"

ವಿದ್ಯಾಸಾಗರ ಸುಮ್ಮನೆ ಮಂದಹಾಸವನ್ನು ಬೀರಿದ.

ಶ್ರೀರಾಮಕೃಷ್ಣರು : "ಬರಿಯ ಪಾಂಡಿತ್ಯದಲ್ಲಿ ಏನೂ ಇಲ್ಲ. ಒಬ್ಬ ಗ್ರಂಥ ಓದುವುದು ದೇವರನ್ನು ಪಡೆದುಕೊಳ್ಳುವ ಮಾರ್ಗವನ್ನು ತಿಳಿದುಕೊಳ್ಳುವುದಕ್ಕಾಗಿ. ಗೀತಾ ಅಂದರೆ ಅರ್ಥವೇನು? ಹತ್ತು ಸಲ ಅದನ್ನು ಉಚ್ಚರಿಸಿದರೆ ಏನಾಗುವುದೊ ಅದು. ಅದು ತ್ಯಾಗಿ ಎಂದಾಗುವುದು. ಗೀತೆ, ಬೋಧಿಸುವುದು ಎಲ್ಲವನ್ನು ತ್ಯಜಿಸಿ ಭಗವಂತನನ್ನು ಹೊಂದಲು ಪ್ರಯತ್ನಿಸು ಎಂದು. ಗೃಹಸ್ಥನಾಗಲಿ ಸನ್ಯಾಸಿ ಆಗಲಿ ಎಲ್ಲರೂ ಮನಸ್ಸಿನಿಂದ ಆಸಕ್ತಿಯನ್ನು ತ್ಯಜಿಸಬೇಕು.

"ಆತ್ಮಸಾಕ್ಷಾತ್ಕಾರವನ್ನು ಪಡೆದ ಮೇಲೆ ಭಕ್ತಿಯ ಹಂಗೇಕೆ ಎಂದು ನೀನು ಕೇಳಬಹುದು. ಅಹಂಕಾರವನ್ನು ಸಂಪೂರ್ಣ ನಿರ್ಮೂಲ ಮಾಡಲಾಗುವುದಿಲ್ಲ. ಅದೇ ಉತ್ತರ. ಅವನು ಸಮಾಧಿಯಲ್ಲಿದ್ದಾಗ ಅದು ಹೋಗುವುದು. ಆದರೆ ಅವನು ಪ್ರಕೃತಿಸ್ಥನಾದ ಮೇಲೆ ಅದು ಪುನಃ ಬರುವುದು. ನೀನು ಕನಸಿನಲ್ಲಿ ಒಂದು ಹುಲಿ ನೋಡುವೆ. ಎಚ್ಚೆತ್ತಮೇಲೂ ಎದೆ ಡವ ಡವ ಎಂದು ಹೊಡೆದುಕೊಳ್ಳುತ್ತಿರುತ್ತದೆ. ಅಹಂಕಾರದಿಂದಲೇ ಎಲ್ಲಾ ತಾಪತ್ರಯ. ಎತ್ತು 'ಹಂಬಾ' (ನಾನು) ಎಂದು ಅರಚುವುದು. ಅದಕ್ಕೇ ಅದು ಅಷ್ಟೊಂದು ಕಷ್ಟಪಡುವುದು. ನೇಗಿಲಿಗೆ

ಅದನ್ನು ಕಟ್ಟುವರು. ಮಳೆ ಬಿಸಿಲಿನಲ್ಲಿ ಅದರಿಂದ ಕೆಲಸ ತೆಗೆಯುವರು. ಯಾರೋ ಕಟುಕ ಅದನ್ನು ತಮ್ಮಟೆಗೆ ಕಟ್ಟಿ ನಿರ್ದಯದಿಂದ ಹೊಡೆಯುವನು. ಆದರೂ ಅದರ ಕಷ್ಟಕ್ಕೆ ಅಂತ್ಯವಿಲ್ಲ. ಅದರ ಕರುಳಿನ ನರದಿಂದ ಹತ್ತಿ ಎಕ್ಕುವ ಬಿಲ್ಲಿಗೆ ದಾರ ಮಾಡುವರು. ಹತ್ತಿ ಎಕ್ಕುವವನು ಅದನ್ನು ಹೊಡೆಯುವಾಗ 'ಅಹಂ' ಎನ್ನುವುದಿಲ್ಲ, 'ತುಹು' ಎನ್ನುವುದು. ಎಂದರೆ ದೇವರು, ನಾನು ಭೃತ್ಯ ನೀನು ಸ್ವಾಮಿ, ನಾನು ಮಗು ನೀನು ತಾಯಿ ಎಂದು.

ರಾಮ ಹನುಮಂತನನ್ನು 'ನೀನು ಯಾವ ದೃಷ್ಟಿಯಿಂದ ನನ್ನನ್ನು ನೋಡುವೆ' ಎಂದು ಕೇಳಿದ. ಅದಕ್ಕೆ ಹನುಮಂತ 'ರಾಮ, ನನ್ನಲ್ಲಿ ಅಹಂಕಾರವಿರುವ ಪರಿಯಂತರ ನಾನು ದಾಸ ನೀನು ಸ್ವಾಮಿ, ನೀನು ಪೂರ್ಣ ನಾನು ಅಂಶ. ಆದರೆ ಪರಮಜ್ಞಾನ ಬಂದಾಗ ನೀನೇ ನಾನು, ನಾನೇ ನೀನು ಎಂದು ನೋಡುತ್ತೇನೆ' ಎಂದ.

"ದೇವರು ಎರಡು ವೇಳೆ ನಗುವನು. ಮೊದಲನೆಯ ಸಲ ವೈದ್ಯ ಸಾಯುತ್ತಿರುವ ರೋಗಿಯ ತಾಯಿಗೆ, ತಾನು ರೋಗಿಯನ್ನು ಉಳಿಸುತ್ತೇನೆ ಎಂದು ಹೇಳುವಾಗ. ನಾನು ಕೊಲ್ಲುವುದಕ್ಕೆ ಇರುವಾಗ ವೈದ್ಯ ರೋಗಿಯನ್ನು ಉಳಿಸುತ್ತೇನೆ ಎಂದು ಹೇಳುತ್ತಿರುವನಲ್ಲ ಎಂದು ನಗುವನು. ವೈದ್ಯ ತಾನೇ ಕರ್ತೃ ಎಂದು ಭಾವಿಸುವನು. ದೇವರನ್ನು ಮರೆಯುವನು. ಎರಡನೆ ಸಲ ನಗುವುದು ಅಣ್ಣತಮ್ಮಂದಿರು ದಾರ ಹಿಡಿದುಕೊಂಡು ಜಮೀನನ್ನು ವಿಭಾಗ ಮಾಡಿಕೊಳ್ಳುವಾಗ. ಪ್ರಪಂಚವೆಲ್ಲ ನನಗೆ ಸೇರಿದೆ, ಆದರೂ ತಮತಮಗೆ ಸೇರಿದವು ಎಂದು ಭಾವಿಸುವುದನ್ನು ನೋಡಿದಾಗ. ಯುಕ್ತಿಯ ಮೂಲಕ ದೇವರನ್ನು ತಿಳಿಯಲಾರೆವು.

ನಿನ್ನ ಸರ್ವಸ್ವವನ್ನು ಆತನಿಗೆ ಅರ್ಪಿಸಿ ಸೇವಕನಂತೆ ಪ್ರಾರ್ಥಿಸು (ವಿದ್ಯಾಸಾಗರನಿಗೆ). ದೇವರೊಂದಿಗೆ ನಿನ್ನ ಭಾವ ಎಂತಹುದು?"

ವಿದ್ಯಾಸಾಗರ : "(ನಗುತ್ತ) ಎಂದಾದರೊಂದು ದಿನ ನಿಮಗೆ ರಹಸ್ಯದಲ್ಲಿ ಹೇಳುತ್ತೇನೆ."

ಶ್ರೀರಾಮಕೃಷ್ಣರು : "ವಿಚಾರ ಮತ್ತು ಪಾಂಡಿತ್ಯದಿಂದ ಅವನನ್ನು ಅರಿಯಲಾರೆವು. ಶ್ಯಾಮ ಹೇಗಿರುವಳೋ ಯಾರಿಗೆ ಗೊತ್ತು? (ಎಂಬ ಹಾಡನ್ನು ಹೇಳಿದರು.) ಇದನ್ನು ಗಮನಿಸಿದೆಯಾ ಬ್ರಹ್ಮಾಂಡವೇ ಜಗನ್ಮಾಯಿಯ ಬಸಿರಿನಲ್ಲಿದೆ. ಷಟ್ ದರ್ಶನಗಳಿಗೂ ಅವಳು ಅತೀತಳು. ಶ್ರದ್ಧಾಭಕ್ತಿ ಇರಬೇಕು."

"ಹನುಮಂತನಿಗೆ ರಾಮನಾಮದಲ್ಲಿ ಅಷ್ಟೊಂದು ಭಕ್ತಿ ಶ್ರದ್ಧೆ ಇತ್ತು. ಅವನು 'ಜೈರಾಮ' ಎಂದು ಹೇಳಿ ಸಾಗರವನ್ನು ಒಂದೇ ನೆಗೆತದಲ್ಲಿ ಹಾರಿದ. ಆದರೆ ರಾಮನೇ ಸಾಗರವನ್ನು ದಾಟುವುದಕ್ಕೆ ಸೇತುವೆಯನ್ನು ಕಟ್ಟಬೇಕಾಯಿತು."

"ಭಗವಂತನ ಮೇಲೆ ಪ್ರೇಮವಿದ್ದರೆ ಪೂಜೆ ಯಾಗ ಯಜ್ಞಗಳು ಬೇಕಿಲ್ಲ. ಗಾಳಿ ಬೀಸದೆ ಇರುವವರೆಗೆ ಬೀಸಣಿಗೆ ಬೇಕು. ಮಲಯಮಾರುತ ಬಂದೊಡನೆಯೆ ಬೀಸಣಿಗೆಯನ್ನು ಆಚೆಗೆ ಎಸೆಯಬಹುದು. ಆಗ ಅದು ಅನಾವಶ್ಯಕ."

"ನೀನು ಮಾಡುತ್ತಿರುವುದು ಒಳ್ಳೆಯ ಕೆಲಸ. ಫಲಾಪೇಕ್ಷೆ ಇಲ್ಲದೆ ಮಾಡಿದರೆ ಕಾಲಕ್ರಮೇಣ ಭಗವಂತನ ಮೇಲೆ ಭಕ್ತಿ ಮತ್ತು ಪ್ರೇಮ ಸಿದ್ಧಿಸುವುದು. ಹೀಗೆ ಕರ್ಮ ಮಾಡುತ್ತಿದ್ದರೆ ಭಗವಂತನ ಸಾಕ್ಷಾತ್ಕಾರ ಲಭಿಸುವುದು."

"ನಿನಗೆ ಅವನ ಮೇಲೆ ಭಕ್ತಿ ಪ್ರೇಮ ಹೆಚ್ಚಿದಷ್ಟು ನಿನ್ನ ಕೆಲಸ ಕಡಿಮೆಯಾಗುವುದು. ನೀನು ಮಾಡುತ್ತಿರುವ ಕೆಲಸದಿಂದ

ನಿನಗೇ ಒಳ್ಳೆಯದು. ಅನಾಸಕ್ತಿಯಿಂದ ಕೆಲಸ ಮಾಡಿದರೆ ನಿನ್ನ ಚಿತ್ತ ಶುದ್ಧವಾಗುವುದು. ನಿನಗೆ ಭಗವಂತನ ಪ್ರೇಮ ದೊರಕುವುದು. ನಿನಗೆ ಪ್ರೇಮ ಲಭಿಸಿದರೆ ಅವನನ್ನು ಪಡೆಯಲು ಸಾಧ್ಯವಾಗುವುದು. ಮನುಷ್ಯ ಎಂದಿಗೂ ಪ್ರಪಂಚಕ್ಕೆ ಸಹಾಯ ಮಾಡಲಾಗುವುದಿಲ್ಲ. ದೇವರು ಮಾತ್ರ ಸಹಾಯ ಮಾಡಬಹುದು. ಯಾರು ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುವರೊ ಅವರಿಗೇ ಇದರಿಂದ ಹಿತವಾಗುವುದು."

"ನಿನ್ನಲ್ಲಿ ಚಿನ್ನವಿದೆ. ಅದರ ವಿಚಾರ ನಿನಗೆ ಇನ್ನೂ ಏನೂ ಗೊತ್ತಿಲ್ಲ. ಅದು ಸ್ವಲ್ಪ ಕೆಳಗೆ ಇದೆ. ಅದನ್ನು ನೀನು ಒಂದು ಸಲ ನೋಡಿದರೆ ಸಾಕು, ಆಗ ಆತ್ಮಚಿಂತನೆಯಲ್ಲದೆ ಉಳಿದುದೆಲ್ಲ ತನಗೆ ತಾನೇ ಮಾಯವಾಗುವುದು."

"ಮುಂದೆ ಮುಂದೆ ಹೋಗು—ಒಬ್ಬ ಸೌದೆ ಒಡೆಯು ವವನು ಒಂದು ಕಾಡಿಗೆ ಹೋದ. ಒಬ್ಬ ಸಾಧು ಅವನಿಗೆ ಇನ್ನೂ ಮುಂದೆ ಹೋಗು ಎಂದ. ಅವನು ಹಾಗೆ ಮಾಡಿದಾಗ ಗಂಧದ ಮರ ಸಿಕ್ಕಿತು. ಕೆಲವು ದಿನಗಳಾದ ಮೇಲೆ, ಸಾಧು, ತನಗೆ ಮುಂದೆ ಹೋಗು ಎಂದಿರುವನು, ಇಲ್ಲೇ ನಿಲ್ಲುವುದಕ್ಕೆ ಹೇಳಿಲ್ಲ ಎಂದು ಯೋಚಿಸಿ ಇನ್ನೂ ಮುಂದೆ ಹೋದನು ಅಲ್ಲಿ ಚಿನ್ನದ ಗಣಿ ಸಿಕ್ಕಿತು. ಇನ್ನೂ ಮುಂದೆ ಹೋದಾಗ ವಜ್ರ ಮುಂತಾದ ಅನರ್ಘ್ಯರತ್ನಗಳು ದೊರೆತವು. ಅವನೊಬ್ಬ ದೊಡ್ಡ ಶ್ರೀಮಂತ ನಾದನು."

"ನಿಷ್ಕಾಮಕರ್ಮದಿಂದ ಭಕ್ತಿ ಲಭಿಸುವುದು. ಕ್ರಮೇಣ ಭಗವತ್‌ಕೃಪೆಯಿಂದ ಅವನನ್ನು ಪಡೆಯುವನು. ದೇವರನ್ನು ನೋಡಬಹುದು. ನಾನು ನಿನ್ನೊಂದಿಗೆ ಮಾತನಾಡುವಂತೆ ಅವನೊಂದಿಗೆ ಮಾತನಾಡಬಹುದು."

ಶ್ರೀರಾಮಕೃಷ್ಣರ ಉಪದೇಶವನ್ನು ಕೇಳಿ ಸಭಿಕರು ಮಂತ್ರ ಮುಗ್ಧರಾದರು. ರಾತ್ರಿ ಒಂಭತ್ತು ಗಂಟೆಯಾಗಿತ್ತು. ಶ್ರೀರಾಮ ಕೃಷ್ಣರು ಹೊರಡಲನುವಾದರು. ವಿದ್ಯಾಸಾಗರರಿಗೆ ನಗುತ್ತ ಹೇಳಿದರು "ನಾನು ಹೇಳಿರುವುದೆಲ್ಲ ನಿನಗೆ ಆಗಲೇ ಗೊತ್ತಿದೆ. ಈ ಕ್ಷಣ ಅದೆಲ್ಲ ನಿನಗೆ ಜ್ಞಾಪಕಕ್ಕೆ ಬರದೆ ಇರಬಹುದು. ವರುಣನ ಭಂಡಾರದಲ್ಲಿ ಲೆಕ್ಕವಿಲ್ಲದಷ್ಟು ವಜ್ರವೈಡೂರ್ಯಗಳಿವೆ. ಆದರೆ ಅವನಿಗೆ ಅದರ ಪರಿವೇ ಇಲ್ಲ."

ವಿದ್ಯಾಸಾಗರ : "ನೀವು ಹಾಗೆ ಹೇಳಬಹುದು."

ಶ್ರೀರಾಮಕೃಷ್ಣರು : "ಹೌದು ಅನೇಕ ಶ್ರೀಮಂತರಿಗೆ ಅವರ ಆಳಿನ ಹೆಸರುಗಳೇ ಗೊತ್ತಿರುವುದಿಲ್ಲ. ಅವನ ಆಸ್ತಿ ಪಾಸ್ತಿ ಎಲ್ಲಿದೆ ಎನ್ನುವುದು ಕೂಡ ಗೊತ್ತಿರುವುದಿಲ್ಲ."

ಕುಳಿತವರೆಲ್ಲ ಶ್ರೀರಾಮಕೃಷ್ಣರ ಸಂಭಾಷಣೆಯಿಂದ ಮುಗ್ಧ ರಾದರು. ಶ್ರೀರಾಮಕೃಷ್ಣರು ವಿದ್ಯಾಸಾಗರರಿಗೆ "ದಯುವಿಟ್ಟು ಒಂದು ಸಲ ರಾಣಿ ರಾಸಮಣಿಯ ತೋಟಕ್ಕೆ ಬನ್ನಿ. ಅದ ಸುಂದರವಾದ ಸ್ಥಳ" ಎಂದರು.

ವಿದ್ಯಾಸಾಗರ : "ಮಹಾಶಯರೆ, ನಿಜವಾಗಿ ಬರುತ್ತೇನೆ. ನೀವು ಕೃಪೆಮಾಡಿ ನಮ್ಮಲ್ಲಿಗೆ ಬಂದಿದ್ದೀರಿ. ನಿಮ್ಮನ್ನು ಬಂದು ಭೇಟಿ ಮಾಡುವುದು ನನ್ನ ಕರ್ತವ್ಯ."

ಶ್ರೀರಾಮಕೃಷ್ಣರು : "ಏನು ನನ್ನ ಭೇಟಿಗೆ ಬರುವುದೆ? ದಯುವಿಟ್ಟು ಹಾಗೆ ಹೇಳಬೇಡಿ."

ವಿದ್ಯಾಸಾಗರ : "ಮಹಾಶಯರೆ, ನೀವೇಕೆ ಹಾಗೆ ಹೇಳುವಿರಿ?"

ಶ್ರೀರಾಮಕೃಷ್ಣರು : "ನಾನು ಮೀನು ಹಿಡಿಯುವ ಸಣ್ಣ ದೋಣಿ. ಎಲ್ಲಿಗೆ ಬೇಕಾದರೂ, ಸಣ್ಣ ಹೊಳೆಯಾಗಲಿ

ದೊಡ್ಡ ನದಿಯಾಗಲಿ ಹೋಗಬಹುದು. ಆದರೆ ನೀನು ದೊಡ್ಡ ಹಡಗು. ಸಿಕ್ಕಿದ ಕಡೆ ಹೋದರೆ ನೆಲ ಕಚ್ಚಬೇಕಾಗಿರುವುದು. ಆದರೆ ಈಗ ಹಡಗೂ ಹೋಗಬಹುದು."

ವಿದ್ಯಾಸಾಗರ: "ಹೌದು. ಮಳೆಗಾಲ, ಪ್ರವಾಹದ ಕಾಲ."

ಎಷ್ಟು ಸುಂದರವಾಗಿದೆ ಮೇಲಿನ ಸಂಭಾಷಣೆ. ಸಕಲ ಶಾಸ್ತ್ರಗಳನ್ನು ಬಲ್ಲ ವಿದ್ಯಾಸಾಗರರು ಎಳೆ ಹಸುಳೆಯಂತೆ ಶ್ರೀರಾಮಕೃಷ್ಣರ ಬಾಯಿಂದ ಬರುವುದನ್ನು ಕೇಳುತ್ತಿದ್ದರು. ಶ್ರೀರಾಮಕೃಷ್ಣರ ಸಂಭಾಷಣೆಯಲ್ಲಾದರೊ ಸಂಸ್ಕೃತ ಶ್ಲೋಕಗಳ ಆರ್ಭಟವಿಲ್ಲ. ಪಾಂಡಿತ್ಯದ ಅಲಂಕಾರವಿಲ್ಲ. ಆದರೂ ಸಾಕ್ಷಾತ್ಕಾರದ ಚಿಲುಮೆಯಿಂದ ಜಿನುಗಿಬಂದ ಅಮೃತದಂತಿದೆ. ಸಕಲ ಶಾಸ್ತ್ರಗಳ ಸಾರದಂತಿದೆ. ಭಗವಂತನ ಪಾದೋದಕದಂತಿದೆ ಅವರಾಡಿದ ಒಂದೊಂದು ಮಾತು.

ಮೇಲೆ ನಾವು ಕೊಟ್ಟಿರುವುದು ಶ್ರೀರಾಮಕೃಷ್ಣರು ಎಲ್ಲೊ ಇಬ್ಬರೊಡನೆ ಮಾತನಾಡಿದುದನ್ನು ಅದೂ ಒಂದು ದಿನ. ಹೀಗೆ ಶ್ರೀರಾಮಕೃಷ್ಣರು ಪ್ರತಿದಿನ ಭಕ್ತರೊಡನೆ ಮಾತನಾಡು ತ್ತಿದ್ದುದನ್ನು ಮಾಸ್ಟರ್ ಮಹಾಶಯರು ಶ್ರೀರಾಮಕೃಷ್ಣ ವಚನವೇದ ಎಂಬ ಬೃಹದ್ ಗ್ರಂಥದಲ್ಲಿ ಪ್ರಕಾಶಿಸಿರುವರು. ಆದರಿಂದ ಎಲ್ಲೋ ಸ್ವಲ್ಪ ರುಚಿ ನೋಡುವುದಕ್ಕೆ ಕೊಟ್ಟಿರುವುದು. ಆ ಗ್ರಂಥದ ವಿಷಯವಾಗಿ ಕವಿವರ್ಯ ಕುವೆಂಪು ಅವರು ತಮ್ಮ ಕವಿ ಸಹಜವಾಣಿಯಲ್ಲಿ ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣ ವಚನ ವೇದ ಎಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೋ ಅದು ಅಮೃತವನ್ನೇ ಉಂಟುತ್ತಿರುತ್ತದೆ. ಇದು ಆನಂದದ ಆಗರ; ಶಾಂತಿಯ ಸಾಗರ; ದಿವ್ಯ ಜ್ಞಾನದ

ಓಗರ. ಕಷ್ಟದ ಸಮಯದಲ್ಲಿ ಧೈರ್ಯವೀಯುವ ಸಖ. ಸುಖದ ಸಮಯದಲ್ಲಿ ಸಮರ್ಪಣ ಭಾವವಿತ್ತು, ವಿನಯ ಭಕ್ತಿಗಳನ್ನು ಪ್ರಚೋದಿಸುವ ಗುರು; ಕತ್ತಲಲ್ಲಿ ದೀಪ, ದಾರಿಗೆ ಊರುಗೋಲು; ದಿಕ್ಕು ಕೆಡದಂತೆ ದಾರಿದೋರುವ ಧ್ರುವತಾರೆ."

ಶ್ರೀರಾಮಕೃಷ್ಣರು ತಮ್ಮ ಶಿಷ್ಯರ ಎದೆಯಲ್ಲಿ ಇತರರ ಕಷ್ಟಕ್ಕೆ ದುಃಖಕ್ಕೆ ಮರುಗುವ ವಿಶ್ವ ಕಾರುಣ್ಯದ ಹಣತೆಯನ್ನು ಹಚ್ಚಿದರು. ಪ್ರತಿಯೊಂದ ಜೀವಿಯಲ್ಲಿಯೂ ಶಿವನಿರುವನು, ಅವನಿಗೆ ಮಾಡುವ ಸೇವೆಯಿಂದ ನಾವು ಉದ್ಧಾರವಾಗುವೆವು, ನಮ್ಮ ಮನಸ್ಸಿನ ಕಲ್ಮಶ ಕಡಿಮೆಯಾಗವುದು, ನಮ್ಮಲ್ಲಿ ಪರಂಜ್ಯೋತಿ ಹೊಳೆಯುವುದು ಎಂದು ಬೋಧಿಸಿದರು. ಭಗವಂತನ ದೇವಾಲಯಕ್ಕೆ ಬರುವ ಪಥಗಳು ಅನಂತ. ಪ್ರತಿಯೊಂದು ಧರ್ಮವೂ ಅಂತಹ ಒಂದೊಂದು ಪಥ. ಯಾರೂ ಮತ್ತೊಬ್ಬರನ್ನು ದೂರದಿರಲಿ. ಅದರಂತೆಯೇ ಯೋಗಗಳೆಲ್ಲ ಜೀವಿಗಳನ್ನು ದೇವನೆಡೆಗೆ ಒಯ್ಯುವುದಕ್ಕಾಗಿಯೇ ಇರುವುದು. ಯಾರಿಗೆ ಯಾವುದರ ಮೇಲೆ ಅಭಿರುಚಿಯೋ ಅವರು ಅದನ್ನು ಸ್ವೀಕರಿಸಲಿ, ಮತ್ತೊಬ್ಬರದನ್ನು ದೂರದಿರಲಿ ಎಂದರು.

ತಾಯಿ ತನ್ನ ಮಕ್ಕಳನ್ನು ಪ್ರೀತಿಯಿಂದ ಪೋಷಿಸಿ ಕಾರ್ಯರಂಗಕ್ಕೆ ಹರಸಿ ಕಳುಹಿಸುವಂತೆ, ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಸರ್ವತೋಮುಖವಾಗಿ ಬೆಳಸಿ ಜ್ಞಾನ ಭಕ್ತಿ ವೈರಾಗ್ಯಗಳಲ್ಲಿ ಪರಿಣತರನ್ನಾಗಿ ಮಾಡಿ, ಬಹುಜನರ ಹಿತಕ್ಕೆ ಬಹುಜನರ ಸುಖಕ್ಕೆ ದುಡಿಯುವಂತೆ ಹರಸಿ ಭವರಂಗಕ್ಕೆ ಅವರನ್ನು ಕಳುಹಿಸಿ, ತಾವು ೧೮೮೬ನೇ ಆಗಸ್ಟ್ ೧೬ನೇ ತೇದಿ ಜೀವನದಿಂದ ಕಣ್ಮರೆಯಾದರು.

ಕೆ.ಸಂ. ೨೫೧೨೮—ಎಂ.ಯು.ಪಿ.ಎಂ.—೧೦,೦೦೦ ಪ್ರತಿಗಳು—೧–೧೨–೮೭

ಕೆಲವು ಸಾಹಿತ್ಯ ಕೃತಿಗಳು

ಬೆಲೆ : ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯ

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ದಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ದಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ —ಶಾಲಿನಿ ರಘುನಾಥ